ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಎಂ.ಫಿಲ್. ಪದವಿಯ ಸಪ್ರಬಂಧ

"ಎಂ.ಕೆ. ಇಂದಿರಾರವರ 'ಗೆಜ್ಜೆಪೂಜೆ' ಮತ್ತು ವಿ.ಎಂ. ಇನಾಂದಾರ್'ರವರ 'ಶಾಪ' ಕಾದಂಬರಿ ಒಂದು ತೌಲನಿಕ ಅಧ್ಯಯನ"

ಸಂಶೋಧಕರು :

ನರಸಿಂಹ

ಮಾರ್ಗದರ್ಶಕರು :

ಡಾ॥ ಕೆ. ರಮಾನಂದ

ಪ್ರೊಫೆಸರ್ ಮತ್ತು ಕನ್ನಡ ವಿಭಾಗದ ಮುಖ್ಯಸ್ಥರು

ಸಿಂಧಿ ಕಾಲೇಜು, ಹೆಬ್ಬಾಳ

ಬೆಂಗಳೂರು – ೫೬೦ ೦೨೪.

ಬಿ. ಎಂ. ಶ್ರೀ.
ಸ್ಮಾರಕ ಪ್ರತಿಷ್ಠಾನ



ಎಂ.ವಿ.ಸೀ. ಸ್ನಾತಕೋತ್ತರ ಕೇಂದ್ರ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ

ಬೆಂಗಳೂರು

೨೦೧೪–೧೫

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಎಂ.ಫಿಲ್. ಪದವಿಯ ಸಪ್ರಬಂಧ

"ಎಂ.ಕೆ. ಇಂದಿರಾರವರ 'ಗೆಜ್ಜೆಪೂಜೆ' ಮತ್ತು ವಿ.ಎಂ. ಇನಾಂದಾರ್'ರವರ 'ಶಾಪ' ಕಾದಂಬರಿ ಒಂದು ತೌಲನಿಕ ಅಧ್ಯಯನ"

ಸಂಶೋಧಕರು :

ನರಸಿಂಹ

ಮಾರ್ಗದರ್ಶಕರು :

ಡಾ॥ ಕೆ. ರಮಾನಂದ

ಪ್ರೊಫೆಸರ್ ಮತ್ತು ಕನ್ನಡ ವಿಭಾಗದ ಮುಖ್ಯಸ್ಥರು
ಸಿಂಧಿ ಕಾಲೇಜು, ಹೆಬ್ಬಾಳ
ಬೆಂಗಳೂರು – ೫೬೦ ೦೨೪.

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ



ಎಂ.ವಿ.ಸೀ. ಸ್ನಾತಕೋತ್ತರ ಕೇಂದ್ರ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಬೆಂಗಳೂರು

೨೦೧೪–೧೫

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಎಂ.ಫಿಲ್. ಪದವಿಯ ಸಂಪ್ರಬಂಧ

"ಎಂ.ಕೆ. ಇಂದಿರಾರವರ 'ಗೆಜ್ಜೆಪೂಜೆ' ಮತ್ತು ವಿ.ಎಂ. ಇನಾಂದಾರ್'ರವರ 'ಶಾಪ' ಕಾದಂಬರಿ ಒಂದು ತೌಲನಿಕ ಅಧ್ಯಯನ"

ನೋಂದಣಿ ಸಂಖ್ಯೆ:

೧೪೦೭೦೧೦೩೦೦೮೧

೨೦೧೪-೧೫

ಮಾರ್ಗದರ್ಶಕರ ದೃಢೀಕರಣ ಪತ್ರ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು. ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೧೪-೧೫ರ ಸಾಲಿನ ಎಂ.ಫಿಲ್ ಪದವಿಗಾಗಿ **"ಎಂ.ಕೆ. ಇಂದಿರಾರವರ 'ಗೆಜ್ಜೆಪೂಜೆ' ಮತ್ತು ವಿ.ಎಂ. ಇನಾಂದಾರ್'ರವರ 'ಶಾಪ' ಕಾದಂಬರಿ ಒಂದು ತೌಲನಿಕ ಅಧ್ಯಯನ"** ಎಂಬ ಸಪ್ರಬಂಧವನ್ನು **ನರಸಿಂಹ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಈ ಸಪ್ರಬಂಧ ವಿದ್ಯಾರ್ಥಿಯ ಸ್ವಂತ ಬರವಣಿಗೆಯಾಗಿದ್ದು, ಇದರ ಯಾವುದೇ ಭಾಗವನ್ನು ಈವರೆಗೂ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : 25-8-2016.

ಸ್ಥಳ : ಬೆಂಗಳೂರು

K. Ramananda

ಡಾ|| ಕೆ. ರಮಾನಂದ

ಪ್ರೊಫೆಸರ್ ಮತ್ತು ಕನ್ನಡ ವಿಭಾಗದ ಮುಖ್ಯಸ್ಥರು

ಸಿಂಧಿ ಕಾಲೇಜು, ಹೆಬ್ಬಾಳ

ಬೆಂಗಳೂರು – ೫೬೦ ೦೨೪

ಡಾ|| ಕೆ. ರಮಾನಂದ
ಎಂ.ಎ., ಎಂ.ಫಿಲ್., ಪಿಹೆಚ್.ಡಿ.
ಪ್ರೊಫೆಸರ್ ಮತ್ತು ಕನ್ನಡ ವಿಭಾಗದ ಮುಖ್ಯಸ್ಥರು
ಸಿಂಧಿ ಕಾಲೇಜು, ಹೆಬ್ಬಾಳ, ಬೆಂಗಳೂರು-24

ಸಂಶೋಧಕರ ಪ್ರಮಾಣ ಪತ್ರ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ, ಬೆಂಗಳೂರು. ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ೨೦೧೪–೧೫ರ ಸಾಲಿನ ಎಂ.ಫಿಲ್ ಪದವಿಗಾಗಿ **"ಎಂ.ಕೆ. ಇಂದಿರಾರವರ 'ಗೆಜ್ಜೆಪೂಜೆ' ಮತ್ತು ವಿ.ಎಂ. ಇನಾಂದಾರ್'ರವರ 'ಶಾಪ' ಕಾದಂಬರಿ ಒಂದು ತೌಲನಿಕ ಅಧ್ಯಯನ"** ಎಂಬ ಸಪ್ರಬಂಧವನ್ನು **ನರಸಿಂಹ** ಆದ ನಾನು **ಡಾ॥ ಕೆ. ರಮಾನಂದ ರವರ** ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಈ ಸಪ್ರಬಂಧ ನನ್ನ ಸ್ವಂತ ಬರವಣಿಗೆಯಾಗಿದ್ದು, ಇದರ ಯಾವುದೇ ಭಾಗವನ್ನು ಈವರೆಗೂ ಬೇರೆಲ್ಲೂ ಪ್ರಕಟಪಡಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : 25-08-2016

ಸ್ಥಳ : ಬೆಂಗಳೂರು

Narasimha

ನರಸಿಂಹ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ,

ಎಂ.ವಿ.ಸೀ. ಸ್ನಾತಕೋತ್ತರ

ಸಂಶೋಧನಾ ಕೇಂದ್ರ,

ಬೆಂಗಳೂರು –೫೬೦೦೧೯

"ಎಂ.ಕೆ. ಇಂದಿರಾರವರ 'ಗೆಜ್ಜೆಪೂಜೆ' ಮತ್ತು ವಿ.ಎಂ. ಇನಾಂದಾರ್'ರವರ 'ಶಾಪ'

ಕಾದಂಬರಿ ಒಂದು ತೌಲನಿಕ ಅಧ್ಯಯನ"

ಪರಿವಿಡಿ

ಅಧ್ಯಾಯ – ೧

ಕಾದಂಬರಿ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಹೊಸಗನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಕಾದಂಬರಿಯು ಒಂದು ಇತಿಹಾಸದಲ್ಲಿ ಪ್ರಮುಖವಾದ ಪಾತ್ರವಾಗಿದೆ. ಒಂದು ದೃಷ್ಟಿಯಿಂದ ನೋಡಿದರೆ ಕಾದಂಬರಿ ಎನ್ನುವ ಸಾಹಿತ್ಯರೂಪದ ಚರಿತ್ರೆ ದೀರ್ಘವಾದುದೇ. ಕನ್ನಡದಲ್ಲಿ ಕಾದಂಬರಿ ಎಂಬ ಹೆಸರು ಪ್ರಚುರವಾದುದು ಬಹುಶಃ ಕನ್ನಡದಲ್ಲಿ ಮಾತ್ರ ಅಲ್ಲದೇ ಪಾಶ್ಚಾತ್ಯ ಕಾದಂಬರಿ ರೂಪದ ಪ್ರಭಾವ ಇಡೀ ಜಗತ್ತಿನ ಸಾಹಿತ್ಯದ ಮೇಲೆ ಹಬ್ಬಿದೆ ಎನ್ನಬಹುದು. ಬಾಣನ ಕಾದಂಬರಿಯಿಂದ, ಬಾಣನ ಕಾದಂಬರಿ ಗದ್ಯದಲ್ಲಿ ರೂಪುಗೊಂಡಿರುವ ಸಂಕೀರ್ಣ ಕಥೆ. ಅದರಲ್ಲಿ ಕಾದಂಬರಿ, ಮಹಾಶ್ವೇತೆ, ಚಂದ್ರಾಪೀಡ, ಪುಂಡರೀಕ, ಶೂದ್ರಕ ಮೊದಲಾದ ವ್ಯಕ್ತಿಗಳ ಜೀವನ ವೃತ್ತಾಂತ ನಿರೂಪಿತವಾಗಿದೆ. ಕೆಲವೇಳೆ ಕಥೆ ಭೂಲೋಕದಿಂದ ಗಂಧರ್ವಲೋಕಕ್ಕೂ ಇಂದಿನ ಜೀವನದಿಂದ ಮುಂದೆ ಮೂರು ಜನ್ಮಗಳಿಗೂ ಹರಿದಾಡುತ್ತವೆ. ಇಂಥದ್ದೇ ಕಥೆಗಳನ್ನು ಕಾದಂಬರಿ ಎಂಬ ಸಾಮಾನ್ಯ ನಾಮದಿಂದ ಕರೆದಿರುವುದು ಉಚಿತವಾಗಿಯೇ ಇದೆ.

ಟಾಲ್‌ಸ್ಟಾಯಿಯ ಸಮರ ಮತ್ತು ಶಾಂತಿ (ವಾರ್ ಅಂಡ್ ಪೀಸ್), ಕಾರಂತರ ಮರಳಿ ಮಣ್ಣಿಗೆ, ಕುವೆಂಪು ಅವರ ಕಾನೂನು ಹೆಗ್ಗಡಿತಿ ಇಂಥ ಎಲ್ಲ ಕಾದಂಬರಿಗಳಿಗೂ ಅನ್ವಯಿಸುವಂಥ ಪರಿಪೂರ್ಣವಾದ ವಿವರಣೆಯನ್ನು ರೂಪಿಸುವುದು ತುಂಬ ಜಟಿಲವಾದ ಪ್ರಯತ್ನ. ಒಂದು ಮಹತ್ವದ ಅರ್ಥದ ಐಕ್ಯ ಸಾಧಿತವಾಗುವಂತೆ ಒಂದಕ್ಕೊಂದನ್ನು ಹೊಂದಿಸಿದ ಕಾಲ್ಪನಿಕ ಸನ್ನಿವೇಶಗಳ ಶ್ರೇಣಿಯ ವೃತ್ತಾಂತವೇ ಕಾದಂಬರಿ. ಕಥಾವಸ್ತು ಅರ್ಥದಲ್ಲಿ ಪ್ರತೀಕಾತ್ಮಕವೂ ಆಗುವಂತೆ ವೃತ್ತಾಂತದ ಪ್ರಗತಿಯ ಪ್ರತಿಬಿಂದುವಿನಲ್ಲಿ ಕಥಾವಸ್ತುವಿನ ಉದ್ದೇಶಿತ ಅರ್ಥಸ್ತರಗಳಿಗೆ ಮತ್ತೆ ಮತ್ತೆ ಹಾಗೂ ಒಟ್ಟಿನಲ್ಲಿ ಪುಷ್ಟಿ ಕೊಡುವಂತೆ ಹಿನ್ನೋಟ ಮತ್ತು ನಿರೀಕ್ಷಣೆಗಳ ನಡುವೆ ಸಂಬಂಧವನ್ನು ಏರ್ಪಡಿಸಬಲ್ಲ ಭಾಷೆಯಲ್ಲಿ ಸನ್ನಿವೇಶಗಳು ನಿರೂಪಿತವಾಗಿರಬೇಕು. ವೃತ್ತಾಂತ ಗಮನಾರ್ಹವಾದ ಗಾತ್ರವನ್ನು ಪಡೆದಿರಬೇಕು ಎನ್ನುವುದು ಒಟ್ಟಿನಲ್ಲಿ ಕಾದಂಬರಿಯ ಅಧ್ಯಯನಕ್ಕೆ ಸಹಾಯಕವಾಗುವ ವಿವರಣೆಯಾಗಿದೆ.

ಕಾದಂಬರಿಯ ಕಥಾವಸ್ತು ಕಾಲ್ಪನಿಕ ಸನ್ನಿವೇಶಗಳ ಶ್ರೇಣಿಯನ್ನು ಒಳಗೊಂಡಿರುತ್ತದೆಯಾದರೂ ಅದು ನಿರೂಪಿಸುವ ಘಟನೆಗಳು ನಿಜವಾಗಿ ನಡೆದುವು. ಅದರ ವೃತ್ತಾಂತ ಅಕ್ಷರಶಃ ನಿಜ ಎಂಬ ಭಾವನೆಯನ್ನೇ ಮೂಡಿಸಲು ಕಾದಂಬರಿ ಪ್ರಯತ್ನಿಸುತ್ತದೆ. ಚಾರಿತ್ರಿಕ ಕಾದಂಬರಿಯಲ್ಲಿ ಕೆಲವು ಘಟನೆಗಳು, ಕೆಲವು ಪಾತ್ರಗಳು, ಒಮ್ಮೊಮ್ಮೆ ಕಥಾವಸ್ತುವಿನ ರೂಪರೇಖೆ ಕೂಡ ಚರಿತ್ರೆಯಿಂದ ಕೂಡಿರುತ್ತದೆ.

ಕಾದಂಬರಿ ಅಧ್ಯಯನದ ಅನುಕೂಲಕ್ಕಾಗಿ ಕಥಾವಸ್ತು ಪಾತ್ರ, ಸನ್ನಿವೇಶ, ಭಾಷೆ ಎಂದು ಬೇರೆ ಬೇರೆ ಅಂಶಗಳನ್ನು ಕುರಿತು ನಾವು ಮಾತನಾಡಬಹುದಾದರೂ ಇವೆಲ್ಲವೂ ಹೊಂದಿಕೊಂಡಾಗಲೇ ಮಹತ್ತ್ವದ ಅರ್ಥದ ಸಾಕ್ಷಾತ್ಕಾರವಾಗುವುದು. ಇದಾಗದಿದ್ದರೆ ಕೃತಿ ವಿಫಲವಾದಂತೆ. ಈ ಹೊಂದಾಣಿಕೆಯನ್ನು ಸಾಧಿಸುವುದು ಕಾದಂಬರಿಯ ತಂತ್ರ. ಕಾದಂಬರಿಕಾರನ ತಂತ್ರ ಕಾದಂಬರಿಯನ್ನು ಸ್ವಾರಸ್ಯಗೊಳಿಸುವುದು ಮಾತ್ರವಲ್ಲ, ಕಾದಂಬರಿಯ ಎಲ್ಲ ಅಂಶಗಳ ಮೇಲೆ ನಿಯಂತ್ರಣವನ್ನು ಸ್ಥಾಪಿಸಿ, ಕೃತಿಯಲ್ಲಿ ರೂಪಗೊಳ್ಳಬೇಕಾದ ಅರ್ಥ, ಅನುಭವದ ದೃಷ್ಟಿಯಿಂದ ಉಚಿತವಾದ ಪ್ರಾಧಾನ್ಯವನ್ನು ನಿರ್ಧರಿಸಿ ಇಡೀ ಕೃತಿಯ ನಿರ್ವಹಣೆಯನ್ನು ಮಾಡಬೇಕಾಗುತ್ತದೆ. ಗಾಢವಾದ ಅರ್ಥವೇನೂ ಸ್ಫುರಿಸುವಂತೆ ಪ್ರಯತ್ನಿಸದೆ ಜೀವನಕ್ಕೆ ಉತ್ಸಾಹ ಮತ್ತು ವಿಶ್ವಾಸಗಳ ಪ್ರತಿಕ್ರಿಯೆಯನ್ನು ಮಾತ್ರ ಮೂಡಿಸುವ ಸಾಹಸ ಕಾದಂಬರಿಗಳಲ್ಲಿದೆ. ಹೊರಜಗತ್ತು ಮತ್ತು ಒಳಜಗತ್ತುಗಳ ಬಹುಮುಖ ವ್ಯಾಪಾರಗಳ ನಿಕಟ ಸಂಬಂಧವನ್ನು ಅನುಭವಕ್ಕೆ ತಂದುಕೊಡುವ ಕಾದಂಬರಿಯಲ್ಲಿ ಸನ್ನಿವೇಶ, ಪಾತ್ರಗಳೆರಡಕ್ಕೂ ಸಮನಾದ ಪ್ರಾಧ್ಯಾನ್ಯವಿದೆ. ಹೀಗೆ ಎಲ್ಲ ಕಾದಂಬರಿಗಳಲ್ಲೂ, ಎಲ್ಲ ಅಂಶಗಳಿಗೂ ಸಮಾನವಾದ ಇಲ್ಲವೇ ಒಂದೇ ಬಗೆಯ ಪ್ರಾಧಾನ್ಯ ದೊರೆಯುವುದಿಲ್ಲ. ಈ ಎಲ್ಲ ಅಂಶಗಳನ್ನೂ ಬಳಸಿ, ಬೆರೆಸಿ, ಹೊಸದೊಂದು ಜಗತ್ತನ್ನು ಕಾದಂಬರಿಕಾರರು ಸೃಷ್ಟಿಸಬೇಕು. ಈ ಜಗತ್ತಿನ ಸೃಷ್ಟಿಕರ್ತನಾದ ಆತ ಕೃತಿ ಮೂಡಿಸಬೇಕಾದ ಅನುಭವಕ್ಕೆ ಭಂಗಬಾರದಂತೆ ಎಲ್ಲ ವಿವರಗಳನ್ನೂ ಆರಿಸಬೇಕು ಮತ್ತು ಸಮನ್ವಯಗೊಳಿಸಬೇಕು. ತಾನು ಆ ಜಗತ್ತಿನಲ್ಲಿದ್ದೂ ಹೊರಗೆ ನಿಲ್ಲಬೇಕು. ಆತನ ಮತ್ತು ಆತ

ಸೃಷ್ಟಿಸುವ ಜಗತ್ತಿನ ಸಂಬಂಧವನ್ನು ಆತನ ಧಾಟಿ ಓದುಗರಿಗೆ ತಿಳಿಸಿಕೊಡುತ್ತದೆ. ನಾವು ವಾಸಿಸುವ ಜಗತ್ತಿನಂತೆಯೇ ಇದ್ದೂ ವಿವರಗಳ ಆಯ್ಕೆ ಮತ್ತು ಜೋಡಣೆಯಿಂದ ವಿಶಿಷ್ಟವಾಗುವ ಜಗತ್ತಿನ ಸೃಷ್ಟಿ ಸಾಧ್ಯವಾಗುವುದು ಕಾದಂಬರಿಕಾರನ ತಂತ್ರದಿಂದ. ಪ್ರಪಂಚದಲ್ಲಿ ಅತ್ಯಂತ ಪ್ರಾಚೀನ ಕಾದಂಬರಿಗಳು ಈಜಿಪ್ಟ್ ದೇಶದವು. ಪ್ರಾಯಶಃ ಕ್ರಿ.ಪೂ. 20, 21ನೇಯ ಶತಮಾನಗಳಿಗೆ ಸೇರಿದ ಕೆಲವು ಕೃತಿಗಳು ದೊರತಿವೆ. ಇದನ್ನು ಕಾದಂಬರಿಗಳು ಎನ್ನಬಹುದು. ಬಂಗಾರದ ಕತ್ತೆ ಎಂಬ ಕಥೆಯಲ್ಲಿ ತರುಣ ತತ್ತ್ವಜ್ಞಾನಿಯೊಬ್ಬ ಕತ್ತೆಯಾಗಿ ಮಾರ್ಪಡುತ್ತಾನೆ. ಈ ಸ್ಥಿತಿಯಲ್ಲಿ ಆತ ಕಂಡ ನೋಟಗಳೂ ಕೇಳಿದ ಮಾತುಗಳೂ ಮನುಷ್ಯರ ಪ್ರಪಂಚವನ್ನು ಒಂದು ಹೊಸ ರೀತಿಯಲ್ಲಿ ಚಿತ್ರಿಸುತ್ತವೆ. ಈ ಪುಸ್ತಕ ಮುಂದಿನ ಕಾದಂಬರಿಕಾರರಿಗೆ ಸ್ಫೂರ್ತಿ ನೀಡಿತೆನ್ನಲಾಗಿದೆ. ಆದರೆ ಪ್ರಭಾವ ಮತ್ತು ವಿಕಸನದ ದೃಷ್ಟಿಯಿಂದ ಆಧುನಿಕ ಪಾಶ್ಚಾತ್ಯ ಕಾದಂಬರಿಯೇ ಮುಖ್ಯವಾಗಿದೆ. ಈ ಕಾದಂಬರಿಯ ಚರಿತ್ರೆ ಹ್ರಸ್ವವಾದುದೇ. ಸ್ಪೇನ್ ದೇಶದ ಸರ್‌ವ್ಯಾಂಟಿಸ್‌ನ (1605–1615) ಡಾನ್ ಕ್ವಿಕ್ಸಟ್ ಮತ್ತು ಇಂಗ್ಲೆಡಿನ ಜಾನ್ ಬನ್ಯನನ (1678–79) ಯಾತ್ರಿಕನ ಮುನ್ನಡೆ (ದಿ ಪಿಲ್‌ಗ್ರಿಮ್ಸ್ ಪ್ರೋಗ್ರೆಸ್) ಇವನ್ನು ಪ್ರಾರಂಭದ ಕಾದಂಬರಿಗಳೆಂದು ಭಾವಿಸಿದರೂ ಇದರ ಚರಿತ್ರೆ ಸುಮಾರು 400–550 ವರ್ಷಗಳಷ್ಟು ಹಿಂದಕ್ಕೆ ಹೋಗುತ್ತದೆ. ಹದಿನೆಂಟನೆಯ ಶತಮಾನದಲ್ಲಿ ಮಧ್ಯಮ ವರ್ಗದ ಪ್ರಾಬಲ್ಯ. ಅದರ ಅಭಿರುಚಿ ಮತ್ತು ಬೇಡಿಕೆಗಳು ಕಾದಂಬರಿಯ ವಿಕಾಸಕ್ಕೆ ನೆರವಾದುವು.

ಈ ಕಾದಂಬರಿಯ ತಾಯಿ ಬೇರು ಮಹಾಕಾವ್ಯಗಳಲ್ಲಿದೆ. ವಿಶಾಲವಾದ ಹಂದರದ ಮೇಲೆ ಹಬ್ಬಿಸಿದ ಹಲವಾರು ಪಾತ್ರಗಳನ್ನೊಳಗೊಂಡು ಒಂದು ಕೇಂದ್ರದೃಷ್ಟಿಯ ನಿರ್ವಹಣೆಗೆ ಒಳಪಟ್ಟ ಕಥೆಯನ್ನು ಎರಡರಲ್ಲಿಯೂ ಕಾಣಬಹುದು. ಮುಖ್ಯ ವ್ಯತ್ಯಾಸ ಎಂದರೆ ಮಹಾಕಾವ್ಯದ ಮಾಧ್ಯಮ ಪದ್ಯ. ಕಾದಂಬರಿಯ ಮಾಧ್ಯಮ ಗದ್ಯ. ಆದರೆ ಕಾದಂಬರಿ ಮಹಾಕಾವ್ಯಕ್ಕೆ ನೇರವಾದ ಉತ್ತರಾಧಿಕಾರಿಯಾಗಲಿಲ್ಲ. ಮಧ್ಯಯುಗದ ಪ್ರಣಯದ ಮತ್ತು ವಿರೋಚಿತ ಸಾಹಸಗಳ ಕಥೆಗಳು (ರೊಮಾನ್ಸ್‌ಗಳು) ಬಹುಜನಪ್ರಿಯವಾಗಿದ್ದುವು. ಪ್ರಾಚೀನ ಕಾವ್ಯಗಳು, ಷಾರ್ಲಮನ್ನನ ಕಥೆಗಳು ಮತ್ತು ಆರ್ಥರ್ ದೊರೆಯ ಕಥೆಗಳು ಈ ರೊಮಾನ್ಸ್‌ಗಳಿಗೆ ಅಗರ. ಇವುಗಳಲ್ಲಿ ಕೆಲವು ಪದ್ಯ ಮಾಧ್ಯಮವನ್ನೂ ಕೆಲವು ಗದ್ಯ ಮಾಧ್ಯಮವನ್ನೂ ಬಳಸಿಕೊಂಡುವು. ಕ್ರಮೇಣ ದೀರ್ಘ ಕಥನಗಳ

ಜನಪ್ರಿಯತೆ ಹೆಚ್ಚಿತು. ಇಂಥ ಒಂದೊಂದು ಕಥೆಯೂ ಹಲವು ಘಟನೆಗಳ ಸರಪಳಿ. ಅಷ್ಟೇ. ಏಕನಾಯಕನೇ ಇವನ್ನು ಒಂದುಗೂಡಿಸುವ ಅಂಶ. ಅಭಿರುಚಿ ಬದಲಾದಂತೆ ಗದ್ಯಕಥೆ ಹೆಚ್ಚು ಜನಪ್ರಿಯವಾಗಿ, ಕಥನ ಕವನಗಳು ವಿರಳವಾದುವು. ಹಲವು ಪಾತ್ರಗಳಲ್ಲಿ ಒಂದರ ಪ್ರಾಧಾನ್ಯ. ಗದ್ಯ ಮಾಧ್ಯಮ ಮುಂತಾದುವುದನ್ನು ಕಾದಂಬರಿ ರೊಮಾನ್ಸ್‌ಗಳಿಂದ ಪಡೆಯಿತು. ಕಾಲ ಕಳೆದಂತೆ, ರೊಮಾನ್ಸು ಕಾದಂಬರಿಗೆ ಸ್ಥಾನವನ್ನು ತೆರವು ಮಾಡಿಕೊಟ್ಟಿತು. ರೊಮಾನ್ಸ್‌ಗಳಲ್ಲಿ ಹಲವು ಘಟನೆಗಳು ಒಂದನ್ನೊಂದು ಹಿಂಬಾಲಿಸುತ್ತಿದ್ದುವು. ಆಗಲೇ ಹೇಳಿದಂತೆ ಇವನ್ನು ಒಟ್ಟುಗೂಡಿಸುವ ಅಂಶ ಕೇಂದ್ರದಲ್ಲಿ ಒಬ್ಬ ನಾಯಕನ ಸ್ಥಾನ ಮಾತ್ರವೇ. ಘಟನೆಗಳಿಗೆ ಇನ್ನೂ ನಿಕಟವಾದ ಸಂಬಂಧವನ್ನು ಕಲ್ಪಿಸಿ, ಕ್ರಿಯೆ ಪಾತ್ರದ ಸ್ವಭಾವದಿಂದ ರೂಪಿತವಾಗುವಂತೆ ಮಾಡಿದಾಗ ಕಾದಂಬರಿ ಜನ್ಮತಾಳಿತು.

ಹದಿನೆಂಟನೆಯ ಶತಮಾನದಲ್ಲಿ ಯೂರೋಪಿನ ಹಲವು ದೇಶಗಳಲ್ಲಿ ಕಾದಂಬರಿ ಬೇರುಬಿಟ್ಟಿತು. ಅಲ್ಲಿಂದ ಇನ್ನೂರು ವರ್ಷಗಳಲ್ಲಿ ಅದು ಬೆರಗುಗೊಳಿಸುವ ದಿಗ್‌ಭ್ರಾಂತಗೊಳಿಸುವ ಎಂದರೂ ತಡೆದೀತು ವೈವಿಧ್ಯದಿಂದ ಬೆಳೆದಿದೆ. ಸಮಾಜದ ಸ್ಥಿತಿ ಸಮಕಾಲೀನ ನಂಬಿಕೆಗಳು, ಹೆಚ್ಚಿನ ಸೌಲಭ್ಯ, ಪ್ರಯಾಣದ ಸೌಕರ್ಯ, ವಿಜ್ಞಾನದ ಬೆಳವಣಿಗೆ ತಂತ್ರಜ್ಞಾನದ ಕೊಡುಗೆಗಳು – ಎಲ್ಲ ಕಾದಂಬರಿಯ ಮೇಲೆ ಪ್ರಭಾವವನ್ನು ಬೀರಿದೆ. ಚಾರಲ್ಸ್ ಡಿಕನ್ಸ್ ಹತೊಂಬತ್ತನೆಯ ಶತಮಾನದಲ್ಲಿನ ಇಂಗ್ಲೆಂಡಿಗೆ ಅನಾಥಾಲಯಗಳು, ಕೆಲವು ಖಾಸಗಿ ಶಾಲೆಗಳು ಮತ್ತು ಸೆರೆಮನೆಗಳ ಸ್ಥಿತಿಯನ್ನು ಕಣ್ಣಿಗೆ ಕಟ್ಟುವಂತೆ ನಿರೂಪಿಸಿದ್ದಾನೆ. ಫ್ರಾನ್ಸ್ ಕಾಫ್ಕನ ಕಾದಂಬರಿಗಳು ಆಧುನಿಕ ಜಗತ್ತಿನಲ್ಲಿ ಮಾನವನ ಒಂಟಿತನದ ನೋವಿಗೆ ಹೃದಯಸ್ಪರ್ಶಿಯಾದ ಅಭಿವ್ಯಕ್ತಿ ನೀಡುತ್ತವೆ. ಹತ್ತೊಂಬತ್ತನೆಯ ಶತಮಾನದಲ್ಲಿ ಇಂಗ್ಲೆಂಡಿನ ನಿಯತ ಕಲಿಕಗಳು ಧಾರವಾಹಿಯಾಗಿ ಕಾದಂಬರಿಗಳನ್ನು ಪ್ರಕಟಿಸುವ ಹೊಸ ವಿಧಾನವನ್ನು ಪ್ರಾರಂಭಿಸಿದುವು. ಇದರಿಂದ ಕಾದಂಬರಿಕಾರನಿಗೂ ಓದುಗನಿಗೂ ಹೊಸ ಬಾಂಧವ್ಯ ಏರ್ಪಟ್ಟಿತು.

ಪ್ರತಿಭಾಗದ ಮುಕ್ತಾಯವೂ ಓದುಗನಲ್ಲಿ ಮುಂದಿನ ಭಾಗವನ್ನು ಓದುವಂತೆ ಪ್ರಚೋದಿಸುವಂತಿರಬೇಕಾದ್ದು ಅನಿವಾರ್ಯವಾಯಿತು. ಇದು ಕ್ರಿಯೆಯ ನಿರ್ವಹಣೆಯ ಮೇಲೆ ಪ್ರಭಾವ ಬೀರಿತು. ಇಡೀ ಕೃತಿ ಪ್ರಕಟವಾಗಿರದಿದ್ದುದರಿಂದ ಓದುಗರ ಬೇಕು-ಬೇಡಗಳು ಕಾದಂಬರಿಯ ಮೇಲೆ ಪ್ರಭಾವ ಬೀರುವುದು ಸಾಧ್ಯವಾಯಿತು. ಥ್ಯಾಕರೆ ಮತ್ತು ಡಿಕನ್ಸ್ ಓದುಗರ ಬೇಡಿಕೆಗೆ ತಲೆಬಾಗಿ ತಮ್ಮ ಪಾತ್ರಗಳ ಸ್ವಭಾವವನ್ನೂ ಕೃತಿಯ ಮುಕ್ತಾಯವನ್ನೂ ಮಾರ್ಪಡಿಸಿದುದುಂಟು. ಪ್ರಯಾಣ ಸುಲಭವಾಗಿ ಜಗತ್ತಿನ ವಿವಿಧ ಭಾಗಗಳ, ಅಲ್ಲಿಯ ಕೃತಿಗಳ ಪರಿಚಯ, ಚಲನಚಿತ್ರಗಳ ಪ್ರದರ್ಶನ ಇವು ಹೆಚ್ಚಿದಂತೆ ಒಂದು ದೇಶದ ಕಾದಂಬರಿಗಳು ಮತ್ತೊಂದು ದೇಶದ ಕಾದಂಬರಿಗಳ ಮೇಲೆ ಪ್ರಭಾವ ಬೀರುವುದು ಪ್ರಾರಂಭವಾಯಿತು. ವಿಧಾನ ಮತ್ತು ತಂತ್ರಜ್ಞಾನಗಳ ಬೆಳವಣಿಗೆ ವೈಜ್ಞಾನಿಕ ಕಾದಂಬರಿಗಳನ್ನು ಬೆಳೆಸಿದೆ. ಫ್ರಾನ್ಸಿನ ಜೂಲ್ಸ್ ವರ್ನ್ (1828-1905), ಇಂಗ್ಲೆಂಡಿನ ಎಚ್.ಜಿ. ವೆಲ್ಸ್ (1866-1946) ಮೊದಲಾದವರು ವಿಜ್ಞಾನದ ಆಧಾರದ ಮೇಲೆ ಕಾಲ್ಪನಿಕ ಕೃತಿಗಳನ್ನು ರಚಿಸಿ ಜನಪ್ರಿಯಗೊಳಿಸಿದರು. ಅಲ್ಲಿಂದ ವೈಜ್ಞಾನಿಕ ಕಾದಂಬರಿ ಸಮೃದ್ಧವಾದ ಬೆಳೆಯನ್ನು ಕಂಡಿದೆ. ವಿಜ್ಞಾನ, ತಂತ್ರಜ್ಞಾನಗಳ ಮುನ್ನಡೆ ಮನುಷ್ಯನ ಜೀವನವನ್ನು ಹೇಗೆ ರೂಪಿಸಬಹುದು ಎಂಬ ವಿಚಾರ ಆಲ್ಡಸ್ ಹಕ್ಸ್ಲಿಯಂಥ (1894-1963) ಕಾದಂಬರಿಕಾರರ ಆಸಕ್ತಿಯನ್ನು ಸೆಳೆಯಿತು. ಕಾದಂಬರಿಕಾರರು ಜೀವನವನ್ನು ಕಾಣುವ ದೃಷ್ಟಿಯ ಮೇಲೆ ಹಲವು ಜ್ಞಾನ ವಿಭಾಗಗಳ ಪ್ರಗತಿ ಪ್ರಭಾವ ಬೀರಿದೆ. ಡಾರ್ವಿನನ ಜೀವವಿಕಾಸ ಸಿದ್ಧಾಂತದಿಂದ ಪ್ರಾರಂಭವಾಗಿ, ಹತ್ತೊಂಬನೆಯ ಶತಮಾನದಲ್ಲಿ ಜೀವವಿಜ್ಞಾನ ಮತ್ತು ಖಗೋಳ ವಿಜ್ಞಾನಗಳಲ್ಲಿ ಬೆಳೆದು ಜ್ಞಾನ ಥಾಮಸ್ ಹಾರ್ಡಿಯ (1840-1928) ಕಾದಂಬರಿಗಳ ಜಗತ್ತನ್ನು ರೂಪಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿತು. ಮನೋವಿಜ್ಞಾನದ ಪ್ರಗತಿ ಮನುಷ್ಯ ಸ್ವಭಾವದ ಜಟಿಲತೆ ಮತ್ತು ವೈಚಿತ್ರ್ಯಗಳನ್ನು ಅನಾವರಣ ಮಾಡಿದಂದು ಕಾದಂಬರಿಯಲ್ಲಿ ಪ್ರಜ್ಞಾಪ್ರವಾಹ ಪಂಥಕ್ಕೆ ದಾರಿಯಾಯಿತು. ವಾಸ್ತವಿಕತೆ ಎಂದರೇನು? ಸಹಜತೆ ಎಂದರೇನು? ಎಂಬಂಥ ಪ್ರಶ್ನೆಗಳಿಗೆ ಕೃತಿಕಾರರು ಕಂಡುಕೊಂಡ ಉತ್ತರಗಳನ್ನು ಪ್ಲೊಬೇರ್, ಎಮಿಲಿಜೋಲಾ, ದಾಸ್ತೊಯೆವ್‌ಸ್ಕಿ, ತುರ್ಗ್ಯ ನೆಫ್, ಚೆಕೊಫ್ - ಮೊದಲಾದವರ ಕಾದಂಬರಿಗಳಲ್ಲಿ ಕಾಣಬಹುದು. ಹೀಗೆ ಬೆರಗುಗೊಳಿಸುವ ವೈವಿಧ್ಯದಿಂದ ಕಾದಂಬರಿ ಬೆಳೆದಿದೆ. ಈ ವೈವಿಧ್ಯ ಕಾದಂಬರಿಗಳ

ವರ್ಗೀಕರಣದಲ್ಲಿ ಪ್ರತಿಬಿಂಬಿತವಾಗಿದೆ.

ವಿಮರ್ಶಕರು ಕಾದಂಬರಿಯನ್ನು ಬೇರೆ ಬೇರೆ ದೃಷ್ಟಿಗಳಿಂದ ವರ್ಗೀಕರಣ ಮಾಡಿದ್ದಾರೆ. ಒಂದು ಸ್ಥೂಲವಾದ ವಿಂಗಡಣೆ ವಿಚಿತ್ರ ಕಾದಂಬರಿ ಸಾಹಸ ಕಾದಂಬರಿ, ನೈಜ ಕಾದಂಬರಿ ಎಂದು ವಿಚಿತ್ರ ಕಾದಂಬರಿಯನ್ನು ರೊಮಾನ್ಸ್ ರೂಪಕ್ಕೆ ಹೋಲಿಸಬಹುದು. ರ್ಯಾಬಿಲೆಸ್‌ನ (1490–1554) ಗರ್‌ಗಾಂಟುಅ. ಜೋನಾಥನ್ ಸ್ವಿಫ್ಟ್‌ನ (1667–1745) ಗಲಿವರ್ಸ್ ಟ್ರಾವಲ್ಸ್ ಇಂಥ ಕೃತಿಗಳು. ಪೌರಾಣಿಕ ಕಥೆಗಳನ್ನು ಹೋಲುವ ಅದ್ಭುತ ಕಥೆಗಳನ್ನು ಕಾದಂಬರಿಕಾರ ಇಲ್ಲಿ ಸೃಷ್ಟಿಸುತ್ತಾನೆ. ವಾಸ್ತವಿಕತೆ, ಸಾಧ್ಯತೆಗಳ ಪ್ರಶ್ನೆಯೇ ಇಲ್ಲಿಲ್ಲ. ಕಾದಂಬರಿಕಾರ ಇಲ್ಲಿ ವಾಸ್ತವಿಕ್ಷತೆಯನ್ನು ಅಲಕ್ಷಿಸುತ್ತಾನಲ್ಲದೆ ಸಂಕುಚಿತವಾದ ಅರ್ಥದಲ್ಲಿ ಸತ್ಯವಾಗಿರಲು ಸಾಧ್ಯವೇ ಇಲ್ಲದ ಕಥೆಯಿಂದ ಜೀವನದ ಗಹನವಾದ ಸತ್ಯವೊಂದನ್ನು ಮನಗಾಣಿಸಲು ಪ್ರಯತ್ನಿಸುತ್ತಾನೆ. ಗಲಿವರ್ಸ್ ಟ್ರಾವಲ್ಸ್ ವಿವಿಧ ದೃಷ್ಟಿಗಳಿಂದ ಉದಾತ್ತ, ಪ್ರಾಮಾಣಿಕ ಕುದುರೆಗಳ ದೃಷ್ಟಿಯಿಂದ ಸಹ–ಮನುಷ್ಯನ ಜೀವನವನ್ನು ಕಟುವಾಗಿ ವಿಮರ್ಶಿಸುತ್ತದೆ. ವಾಲ್ಟೇರನ ಕಂಡೈಡ್, ಸ್ಯಾಮ್ಯುಅಲ್ ಬಟ್ಲರನೆರವ್ಹನ್, ಕಾಫ್ಕನ ದಿ ಕ್ಯಾಸಲ್ (ಮಹಾಸೌಧ) ಇವು ಈ ವಿಭಾಗದ ಕೆಲವು ಕೃತಿಗಳು. ವಿಚಿತ್ರ ಕಾದಂಬರಿಯ ಅಂಶವನ್ನು ಬಾಲ್ಜಾಕ್, ಪ್ರೌಸ್ತ್, ಡಿಕನ್ಸ್ ಮೊದಲಾದವರ ಕಾದಂಬರಿಗಳಲ್ಲಿ ಕಾಣಬಹುದು. ಈ ವಿಭಾಗಕ್ಕೆ ನಂಟುತನ ಸಾಹಸದ ಕಾದಂಬರಿಗಳಿಗೆ ಉಂಟಾದರೂ ಇವುಗಳಲ್ಲಿಯೂ ಅದ್ಭುತ ಘಟನೆಗಳೊನ್ನಳಗೊಂಡ ಕಥೆಯುಂಟು. ಆದರೆ ವಿಚಿತ್ರ ಕಾದಂಬರಿಯಲ್ಲಿ ಗಹನ ಸತ್ಯವೊಂದಿದ್ದಾರೆ, ಸಾಹಸ ಕಾದಂಬರಿಯಲ್ಲಿ ಕಥೆಯೇ ಮುಖ್ಯ. ಡಫೋನ ರಾಬಿನ್‌ಸನ್ ಕ್ರೂಸೊ, ಸ್ಟೀವನ್‌ಸನ್ನನ ಕಿಡ್‌ನ್ಯಾಪ್ಡ್ ಇಂಥ ಕಾದಂಬರಿಗಳು. ವೆಲ್ಸ್‌ನ ವೈಜ್ಞಾನಿಕ ರಮ್ಯ ಕಾದಂಬರಿಗಳಲ್ಲಿ ಸಾಹಸ ಕಥೆಗೆ ವಿಜ್ಞಾನದ ಸಂಶೋಧನೆಗಳ ಆಧಾರ ದೊರಕಿದೆ. ಸಾಮಾನ್ಯಜನದ ನಿತ್ಯಜೀವನವನ್ನೇ ವಸ್ತುವಾಗಿಟ್ಟು ಕೊಂಡು ರಚಿತವಾದ ನೈಜ ಕಾದಂಬರಿಯ ತಿರುಳೆಂದರೆ ಅವರ ಕಷ್ಟ ಸುಖ, ಆಸೆ ನಿರಾಸೆ, ಸಮಸ್ಯೆ ನೆಲೆಗಳು. ಬಹುಮಟ್ಟಿಗೆ ಇವು ಸ್ತ್ರೀಪುರುಷರ ಆಕರ್ಷಣೀಯ ಕಥೆಗಳು. ಬಹುಮಂದಿಗೆ ಆಸಕ್ತಿಯನ್ನುಂಟು ಮಾಡುತ್ತವಾಗಿ ಇವುಗಳ ಸಂಖ್ಯೆಯೂ ಹೆಚ್ಚು. ಗಲಾಟೆಯ ವರ್ದರ್‌ನ ದುಃಖಗಳು, ಜೇನ್ ಆಸ್ಟೆನಳ ಪ್ರೈಡ್ ಅಂಡ್ ಪ್ರೆಜುಡಿಸ್, ಷರ್ಲಾಟ್ ಬ್ರಾಂಟಿಯ ಜೇನ್ ಐರ್,

ಫ್ಲೋಬೇರ್‌ನ ಮದಾಂ ಬಾವರಿ, ಟಾಲ್ಸ್‌ಟಾಯ್‌ಯ ವಾರ್ ಅಂಡ್ ಪೀಸ್, ದಾಸ್ತಯೆವ್‌ಸ್ಕಿಯ ದಿ ಈಡಿಯೆಟ್, ಜಾರ್ಜ್ ಮೆರಿಡಿತ್‌ನ ದಿ ಇಗೋಯಿಸ್ಟ್, ಡಿ.ಎಚ್. ಲರೆನ್ಸ್‌ನ ಸನ್ಸ್ ಅಂಡ್ ಲವರ್ಸ್ ಇಂಥ ಕೆಲವು ಮಹಾಕಾದಂಬರಿಗಳು.

ಕೃತಿಯ ಕ್ರಿಯೆಯ ಕಾಲ ಮತ್ತು ಆವರಣದ ದೃಷ್ಟಿಯಿಂದ ಕಾದಂಬರಿಯನ್ನು ಚಾರಿತ್ರಿಕ ಮತ್ತು ಕಾಲ್ಪನಿಕ ಎಂದು ವಿಭಾಗ ಮಾಡಬಹುದು. ಚಾರಿತ್ರಿಕ ಕಾದಂಬರಿಯಲ್ಲಿ ಕ್ರಿಯೆ ಚಾರಿತ್ರಿಕವಾದ ಕಾಲದೇಶಗಳಿಗೆ ಸೀಮಿತವಾಗಿರುತ್ತದೆ. ಆವರಣ ಕಾದಂಬರಿಯ ಪರಿಣಾಮಕ್ಕೆ ಅಗತ್ಯವಾದ ಒಂದು ಅಂಶ. ವಾಲ್ಟರ್ ಸ್ಕಾಟ್‌ನ ಕೆನಿಲ್‌ವರ್ತ್‌ನ ಕ್ರಿಯೆ ರಾಣಿ ಎಲಿಜಬೆತಳ ಕಾಲದ ಇಂಗ್ಲೆಂಡಿನಲ್ಲಿ ನಡೆಯುತ್ತದೆ. ರಾಣಿ ಎಲಿಜಬೆತ್ ಅರ್ಲ್ ಆಫ್ ಲೀಸ್ಟರ್ ಮೊದಲಾದ ಐತಿಕಾಲದ ವ್ಯಕ್ತಿಗಳು ಇಲ್ಲಿ ಬರುತ್ತಾರೆ. ಇಂಥ ಕೃತಿಯಲ್ಲಿ ಕಾದಂಬರಿಕಾರ ತಾನು ಆರಿಸಿಕೊಂಡು ಕಾಲದ ರೀತಿಗಳು, ಸಂಸ್ಥೆಗಳು, ಪದ್ಧತಿಗಳು –ಇವನ್ನಲ್ಲದೆ ಜೀವನಮೌಲ್ಯಗಳನ್ನೂ ಎಚ್ಚರಿಕೆಯಿಂದ ಅಳವಡಿಸಬೇಕಾಗುತ್ತದೆ. ಚಾರಿತ್ರಿಕವಲ್ಲದ ಕಾದಂಬರಿಯಲ್ಲಿ ಕ್ರಿಯೆ ಸಾಮಾನ್ಯವಾಗಿ ಕಾದಂಬರಿಕಾರನ ಕಾಲಕ್ಕೆ ಸೇರಿದುದು. ಈ ಕಾದಂಬರಿಗಳಲ್ಲಿ ಕ್ರಿಯೆಯ ಕಾಲ ಅಷ್ಟು ಮುಖ್ಯವಲ್ಲ, ಪಾತ್ರಗಳೆಲ್ಲ ಕಾಲ್ಪನಿಕವೇ. ಪ್ರತಿ ಕಾದಂಬರಿಯ ಮೇಲೆಯೂ ಒಂದು ಯುಗದ ಛಾಯೆ ಬೀಳುತ್ತದೆ ಎನ್ನುವುದು ನಿಜ. ಇಂಗ್ಲೆಂಡಿನ ಜೇನ್ ಆಸ್ಟೆನ್ ಚಾರಿತ್ರಿಕವಾಗಿ ಮಹತ್ವ ಪೂರ್ಣ ಕಾಲದಲ್ಲಿದ್ದರೂ ಸಮಕಾಲೀನ ಘಟನೆಗಳ ಪ್ರಸ್ತಾಪವೇ ಆಕೆಯ ಕೃತಿಗಳಲ್ಲಿ ಇಲ್ಲ. ಆದರೂ ರೈಲು ಮುಂತಾದ ಸ್ವಯಂಚಾಲಿತ ವಾಹನಗಳು ಇಲ್ಲದೇ, ಐವತ್ತು ಮೈಲಿಗಳ ಪ್ರಯಾಣ ಎಂದರೆ ಒಂದು ಮುಖ್ಯ ಸಂಗತಿ ಎಂದು ಭಾವಿಸುತ್ತಿದ್ದ ಕಾಲ ವಧು ಎಂದು ಆ ಕಾದಂಬರಿಗಳ ಓದುಗ ನೆನಪಿಡುವುದು ಅಗತ್ಯ.

ಕಾದಂಬರಿಯ ಕ್ರಿಯೆ ಯಾವ ಪ್ರದೇಶದಲ್ಲಿ ನಡೆಯುತ್ತದೆ ಎಂಬ ದೃಷ್ಟಿಯಿಂದ ಕಾದಂಬರಿಗಳನ್ನು ಮತ್ತೊಂದು ರೀತಿಯಲ್ಲಿ ವರ್ಗೀಕರಿಸಬಹುದು. ಕ್ರಿಯೆ ನಡೆಯುವ ಸ್ಥಳ ನಿರ್ದಿಷ್ಟವಾಗಿದ್ದರೂ ಅದು ಮುಖ್ಯವಲ್ಲದ ಕಾದಂಬರಿಗಳು ಹಲವು. ಇನ್ನು ಕೆಲವು ಪ್ರಾದೇಶಿಕ ಕಾದಂಬರಿಗಳಲ್ಲಿ ಕ್ರಿಯೆ ನಡೆಯುವ ವಿಶಿಷ್ಟ ಪ್ರದೇಶದ ರೂಪು ರೇಖೆಗಳ ರೀತಿನೀತಿಗಳ ಪ್ರಭಾವ

ಅನಿವಾರ್ಯವಾಗಿ ಪ್ರಮುಖವೆನಿಸಿತ್ತವೆ. ಆ ಪ್ರದೇಶದ ನಿಸರ್ಗದ ಶಕ್ತಿಗಳು ಅಥವಾ ಸಂಪ್ರದಾಯಗಳು ಅಥವಾ ಜೀವನ ವಿಧಾನ ಕ್ರಿಯೆಯ ಮೇಲೆ ನಿರ್ಣಾಯಕ ಪ್ರಭಾವ ಬೀರಿರುತ್ತವೆ.

ಕಾದಂಬರಿಯ ತಂತ್ರವನ್ನೇ ವರ್ಗೀಕರಣದ ಅಂಶವನ್ನಾಗಿಯೂ ಪರಿಗಣಿಸ ಬಹುದು. ಬಿಗಿಯಾದ ಭಂಗವಿಲ್ಲದೆ, ಒಬ್ಬ ನಾಯಕನ ಅನುಭವಗಳನ್ನು ಒಂದಾದ ಮೇಲೊಂದರಂತೆ ಬಿತ್ತರಿಸುವ ಕಾದಂಬರಿಗಳುಂಟು. ಇವು ಎರಡು ಬಗೆಯವು. ಸಾಹಸವಂತ ಮತ್ತು ಗುಣವಂತ ನಾಯಕನಾದರೆ ಸಾಹಸದ ಕಾದಂಬರಿ ಸೃಷ್ಟಿಯಾಗುತ್ತದೆ. ಸ್ಟೀವನ್‌ಸನ್ನರ ಟ್ರಷರ್ ಐಲೆಂಡ್ ಇಂಥ ಕೃತಿ. ತುಂಟನಾಯಕನ ಕಥೆಯಲ್ಲಿ ನಾಯಕನೇ ಪಟಿಂಗನಾಗಿರುತ್ತಾನಾಗಿ ನೈತಿಕಮೌಲ್ಯಗಳ ವಿಚಾರ ಅಲ್ಲಿ ಗೌಣ. ಸ್ಪೇನಿನ ಅಲೆಮಾನ್‌ನ ಗಜ್‌ಮಾನ್‌ದ ಆಲ್ಫರಾಚ್ (1599 – 1604), ಫೀಲ್ಡಿಂಗ್‌ನ ಜೊನಾಥನ್ ವೈಲ್ಡ್ ಮೊದಲಾದ ಕಾದಂಬರಿಗಳು ಒಂದು ಉದ್ದೇಶಿತ ರಚನೆ ಇರುವ ಕಾದಂಬರಿಗಳು. ನಾಟಕೀಯ ಕಾದಂಬರಿಯಲ್ಲಿ ಕ್ರಿಯೆಯ ಬೆಳವಣಿಗೆ ಮುಖ್ಯವಾಗಿ ನಾಟಕೀಯ ದೃಶ್ಯಗಳಿಂದ. ನಾಟಕದಲ್ಲಿನಂತೆ ಪರಿಣಾಮಕಾರಿ ಸನ್ನಿವೇಶಗಳ ಪರಂಪರೆ ಮನಸ್ಸಿನಲ್ಲಿ ಮುಖ್ಯವಾಗಿ ನಿಲ್ಲುತ್ತದೆ, ನಡುವೆ ಅಗತ್ಯವಾದ ಕೊಂಡಿಗಳನ್ನು ಕೃತಿಕಾರ ಒದಗಿಸಿರುತ್ತಾನೆ. ದೃಶ್ಯಾವಳಿ ಪ್ರಧಾನ ಕಾದಂಬರಿಯಲ್ಲಿ ಕಾದಂಬರಿಕಾರ ನಮ್ಮ ಜೊತೆಗೇ ಇರುವುದರ ಅನುಭವವಾಗುತ್ತದೆ. ನಾವು ಬೆಟ್ಟದ ಮೇಲೆ ನಿಂತು ಸುತ್ತಲಿನ ನಿಸರ್ಗದ ದೃಶ್ಯಗಳನ್ನು ಕಂಡಂತೆ ಭಾಸವಾಗುತ್ತದೆ. ಕಾದಂಬರಿಯಲ್ಲಿ ಒಂದು ಅಥವಾ ಒಂದೆರಡು ಮುಖ್ಯ ಪಾತ್ರಗಳ ಜೀವನವನ್ನು ಅಥವಾ ಜೀವನದ ಒಂದು ಭಾಗವನ್ನು ಘಟನೆಗಳ ಮೂಲಕ ನಿರೂಪಿಸುವುದು ಜೀವನವೃತ್ತಾಂತದ ರೀತಿಯ ಕಾದಂಬರಿಯ ವಿಧಾನ. ಕಾದಂಬರಿಯಲ್ಲಿ ಬಹುಸಂಖ್ಯೆಯವು ಈ ವರ್ಗಕ್ಕೆ ಸೇರುತ್ತವೆ. ಜಗತ್ತಿನ ಮಹಾಕಾದಂಬರಿಗಳಲ್ಲಿ ಹಲವು ಈ ಬಗೆಯವು. ಕಾದಂಬರಿಯ ಪಾತ್ರಗಳಲ್ಲಿ ಒಂದು ತಾನು ಕಂಡಂತೆ ಕಥೆಯನ್ನು ಹೇಳುವುದು ಆತ್ಮವೃತ್ತದ ತಂತ್ರ. ಕೆಲವು ಕಾದಂಬರಿಗಳಲ್ಲಿ ಕಥೆಯನ್ನು ಹೇಳುವವನು ನಗೆಗೀಡಾಗಿ ಮತ್ತೊಂದು ಪಾತ್ರದ ಹಿರಿಮೆಯನ್ನು ತೋರಿಸಲು ಹಿನ್ನೆಲೆಯಾಗುತ್ತಾನೆ. ವೊಡ್ ಹೌಸನ ಹಲವು ಕಾದಂಬರಿಗಳಲ್ಲಿ ನಾಯಕನ ಗೆಳೆಯ ಡಾ॥ ವ್ಯಾಟ್ಸನ್ ಇಂಥವರು. ಸ್ಯಾಲಿಂಗರನ ದಿ ಕ್ಯಾಚರ್ ಇನ್ ದಿ ರೈ ನಂಥ ಕಾದಂಬರಿಯಲ್ಲಿ ಕಥೆ ಹೇಳುವವನಿಗೆ ತಾನು

ಬರಹಗಾರ ಎಂಬ ಅರಿವು ಇದ್ದೆ ಇರುತ್ತದೆ. ದಿನಚರಿಗಳು ಮತ್ತು ಕಾಗದಗಳ ಮೂಲಕ ಕಥಾವಸ್ತುವನ್ನು ನಿರೂಪಿಸುವ ಕಾದಂಬರಿಗಳೂ ಉಂಟು.

ಉದ್ದೇಶದ ದೃಷ್ಟಿಯಿಂದಲೂ ಕಾದಂಬರಿಗಳನ್ನು ವರ್ಗೀಕರಿಸಬಹುದು. ಕಾದಂಬರಿ ಅನ್ಯಾರ್ಥ ಪ್ರಧಾನವಾಗಬಹುದು ಅಂದರೆ ಒಂದು ವಿಸ್ತಾರವಾದ ನೀತಿ ದೃಷ್ಟಿಯನ್ನು ಪ್ರತೀಕಗಳಾದ ಪಾತ್ರಗಳ ಮೂಲಕ ನಿರೂಪಿಸಬಹುದು.

ಜಗತ್ತಿನ ಪ್ರಸಿದ್ಧ ಕಾದಂಬರಿಗಳಲ್ಲಿ ಮೇಲಿನವು ಕೆಲವು. ಒಬ್ಬನೇ ಓದುಗನಿಗೆ ಟಾಲ್ಸ್ಟಾಯ್‌ಯ ವಾರ್ ಅಂಡ್ ಪೀಸ್, ಆನ ಕರಿನೀನ ದಾಸ್ತಯೆವ್‌ಸ್ಕಿಯ ಕ್ರೈಮ್ ಅಂಡ್ ಪನಿಷ್‌ಮೆಂಟ್, ಸಹೋದರರು – ಇಂಥ ಕೃತಿಗಳಲ್ಲಿ ಒಂದನ್ನು ಆರಿಸಿ ಇನ್ನೊಂದನ್ನು ಬಿಡುವುದು ಕಷ್ಟವಾದೀತು. ಕಾದಂಬರಿಯ ಜಗತ್ತು ಇಂದಿನವೂ ಗೊಂದಲಗೊಳ್ಳುತ್ತಿದೆ. ಹಾಗೆಯೇ ಹೊಸ ಧೀರ ಪ್ರಯೋಗಗಳಿಂದಲೂ ಬೆರಗುಪಡಿಸುವ ಸಾಧನೆಗಳಿಂದಲೂ ಶ್ರೀಮಂತಗೊಳ್ಳುತ್ತಿದೆ. ವಿಸ್ತಾರವಾದ ಹರಹನ್ನು ಒದಗಿಸಿಕೊಡುವ ಈ ಮಾಧ್ಯಮ ಬಾಳಿಗೆ ಜಟಿಲವೂ ಸೂಕ್ಷ್ಮವೂ ಆದ ಪ್ರತಿಕ್ರಿಯೆಯ ಅಭಿವ್ಯಕ್ತಿಗೆ ಬಹು ಸಮರ್ಥವಾಗಿ ಹೊಂದಿಕೊಂಡಿದೆ. ಜೀವನ ಜಟಿಲವಾದಂತೆ ಹೊಸ ಪ್ರಯೋಗಗಳಿಗೂ ಹೊಸ ಸಾಧನೆಗಳಿಗೂ ತೆರೆದು ನಿಂತಿದೆ.

ಕನ್ನಡದಲ್ಲಿ ಈ ಎಪ್ಪತ್ತು ವರ್ಷಗಳಲ್ಲಿ ಕಾದಂಬರಿ ಕ್ಷೇತ್ರ ವಿಪುಲವಾಗಿ ಬೆಳೆದಿದೆ. ಮರಾಠಿ, ಬಂಗಾಳೀ, ತಮಿಳು, ತೆಲುಗು, ಇಂಗ್ಲಿಷ್ ಮೊದಲಾದ ಭಾಷೆಗಳಿಂದ ಉತ್ತಮ ಕಾದಂಬರಿಗಳನ್ನು ಅನುವಾದ ಮಾಡಿಕೊಳ್ಳಲಾಗಿದೆ. ಅಲ್ಲದೆ ಪ್ರಸಿದ್ಧ ಲೇಖಕರಾದ ಶಿವರಾಮ ಕಾರಂತ, ಕುವೆಂಪು, ರಾವಬಹದ್ದೂರ, ಅನಕೃ, ತರಾಸು, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಕೆ.ವಿ. ಅಯ್ಯರ್. ಬಿ. ಪುಟ್ಟಸ್ವಾಮಯ್ಯ ಮೊದಲಾದವರು ಈ ಕ್ಷೇತ್ರದಲ್ಲಿ ವಿಪುಲವಾಗಿ ಕೆಲಸ ಮಾಡಿದ್ದಾರೆ.

ಪ್ರಾಯಶಃ ಕಾದಂಬರಿ ಕ್ಷೇತ್ರದಲ್ಲಿ ಕಳೆದ ಐವತ್ತು ವರ್ಷಗಳಲ್ಲಿ, ಅದರ ಹಿಂದಿನ ಎರಡು ಶತಮಾನಗಳಲ್ಲಿ ನಡೆದುದಕ್ಕಿಂತ ಹೆಚ್ಚು ಪ್ರಯೋಗಗಳಾಗಿವೆ. ಬೇರೆ ಬೇರೆ ದೇಶಗಳ

ಮತ್ತು ಭಾಷೆಗಳ ಕಾದಂಬರಿಗಳು ಅನುವಾದವಾಗುತ್ತಿದ್ದು. ಈ ಸಾಹಿತ್ಯ ಪ್ರಕಾರದ ಅಧ್ಯಯನವು ಹೊಸ ರೂಪಗಳನ್ನು ತಾಳುತ್ತಿದೆ. ಸ್ಪೈಯ್ನಿನ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಸ್‌ನ ಒಂದು ನೂರು ವರ್ಷಗಳ ಏಕಾಂತ (ಒನ್ ಹನ್‌ಡ್ರೆರ್ ಇಯರ್ಸ್ ಆಫ್ ಸಾಲಿಟ್ಯೂಡ್) "ಆಫ್ರಿಕಾಖಂಡದ ನೈಜೀರಿಯದ ಚಿನುವ ಅಚೇಬಿಯ" ಎಲ್ಲ ಬೇರೆ ಬೇರೆಯಾಗಿ ಬೀಳುತ್ತವೆ' ('ಥಿಂಗ್ಸ್ ಫಾಲ್ ಅಪಾರ್ಟ್') ಇಂಥ ಕಾದಂಬರಿಗಳು ಈಗ ಕನ್ನಡಿಗರಿಗೂ ಪರಿಚಿತ. ಕನ್ನಡದಲ್ಲಿಯೇ ತೇಜಸ್ವಿಯವರ 'ಕರ್ವಾಲೋ'ಯಿಂದ ಕಾ.ತ. ಚಿಕ್ಕಣ್ಣನವರ 'ದಂಡೆ'ಯವರೆಗೆ ಎಷ್ಟು ಪ್ರಯೋಗಗಳಾಗಿವೆ.

ಜಗತ್ತಿನ ಕಾದಂಬರೀ ಸಾಹಿತ್ಯ, ಅದ್ಭುತವಾಗಿ ಬೆಳೆಯುತ್ತಿದೆ. ಹಾಸನದ ರಾಜಾರಾಯರ 'ದ ಸರ್ಪೆಂಟ್ ಅಂಡ್ ದಿ ರೋಪ್'ನಿಂದ ಆರುಂಧತಿ ರಾಯ್ ಅವರ 'ದ ಗಾಡ್ ಆಫ್ ಸ್ಮಾಲ್ ಥಿಂಗ್ಸ್' ವರೆಗೆ ಭಾರತೀಯರು ಇಂಗ್ಲಿಷಿನಲ್ಲಿ ಬರೆದ ಹಲವು ಕಾದಂಬರಿಗಳು ಪಾಶ್ಚಾತ್ಯಾ ದೇಶಗಳಲ್ಲಿ ಗಮನ ಸೆಳೆದಿವೆ. ಕ್ಲಾದ್ ಸಿಮೋನ್, ಐಸಾಕ್ ಭಾಷೆ ವಿಸ್ ಸಿಂಗರ್, ಗುಂಥರ್ ಗ್ರಾಸ್, ಮೊದಲಾದವರ ಕಾದಂಬರಿಗಳು ಅನುವಾದಗೊಂಡು ನಮಗೆ ಕಾದಂಬರಿಯ ಸ್ವರೂಪದ ಹೊಸ ಆಯಾಮಗಳನ್ನು ಪರಿಚಯ ಮಾಡಿಕೊಟ್ಟಿವೆ. ಹಿಂದೆ ಕಾದಂಬರಿಯ ಕಥಾವಸ್ತು, ಪಾತ್ರ ವರ್ಣನೆ ಮೊದಲಾದ ಅಂಶಗಳನ್ನು ಆಧರಿಸಿ ಕಾದಂಬರಿಯ ಅಧ್ಯಯನವನ್ನು ಮಾಡಲಾಗುತ್ತಿತ್ತು. ಈ ವಿಧಾನವು ಬೆಳೆಯುತ್ತಿರುವ ಕಾದಂಬರಿಯ ಅಧ್ಯಯನಕ್ಕೆ ಸಾಲದಾಗಿ, 'ಪಾಯಿಂಟ್ ಆಫ್ ವ್ಯೂ', 'ಪ್ಯಾರಡಾಕ್ಸ್', 'ಸಿಂಬಲ್', ಟೆನ್‌ಷನ್', 'ಟೆಕ್‌ನೀಕ್ ಆ್ಯಸ್ ಡಿಸ್ಕವರಿ' ಮೊದಲಾದ ಪರಿಕಲ್ಪನೆಗಳು ಮಾಡಿಬಂದಿವೆ ಹೀಗೆ ಕಾದಂಬರಿಯ ತಾನು ವಿಸ್ತಾರಗೊಂಡು ವಿಮರ್ಶೆಯನ್ನೂ ಬೆಳೆಸುತ್ತಿದೆ.

ಅಧ್ಯಾಯ – ೨

ಕಾದಂಬರಿಕಾರರ ಬದುಕು – ಬರಹ

ಎಂ.ಕೆ. ಇಂದಿರಾರವರ ಬದುಕು – ಬರಹ



ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಪ್ರಸಿದ್ಧ ಕಾದಂಬರಿಗಾರ್ತಿಯರಲ್ಲಿ ಒಬ್ಬರಾದ ಎಂ.ಕೆ. ಇಂದಿರಾ. ಅವರು ಸಾಹಿತ್ಯ ಲೋಕದ ಒಂದು ವಿಸ್ಮಯ ಎಂಬಷ್ಟು ಪ್ರಸಿದ್ಧರು ಹಾಗೂ ಕನ್ನಡದ ಹೆಸರಾಂತ ಲೇಖಕಿ.

1917 ವರ್ಷದಲ್ಲಿ ಎಂ.ಕೆ. ಇಂದಿರಾರವರು ಶಿವಮೊಗ್ಗೆಯ ಒಂದು ಪ್ರಾಕೃತಿಕ ಸೌಂದರ್ಯಗಳಿಂದಾವೃತವಾದ ಮತ್ತು ಮಾನವ ಸಾಮರ್ಥ್ಯದ ಸವಿ ಸ್ಪರ್ಶಗಳಿಂದ ಕಂಗೊಳಿಸುತ್ತಿದ್ದ ಪ್ಲಾಂಟೇಷನ್‌ಗಳಿಂದ ಅವೃತವಾದ ಸುಂದರ ಹಳ್ಳಿಯಲ್ಲಿ ಶ್ರೀಮಂತ ಕೃಷಿಕ ಟಿ. ಸೂರ್ಯನಾರಾಯಣ ರಾವ್ ಮತ್ತು ಬನಶಂಕರಮ್ಮ ದಂಪತಿಗಳಿಗೆ ಜನಿಸಿದರು. ಅವರ ತಾಯಿ ಹಾರ್ಮೋನಿಯಂ ನುಡಿಸುವಿಕೆಯಲ್ಲಿ ಪರಿಣತಿ, ಹೊಲಿಗೆಯಲ್ಲಿ ಪರಿಣತಿಯ ಜೊತೆಗೆ ಮತ್ತು ನೂರಾರು ಹಾಡುಗಳನ್ನು ಸೊಗಸಾಗಿ ಹಾಡುವುದರಲ್ಲಿ ಸಹ ಮಹಾನ್ ಪರಿಣಿತೆಯಾಗಿದ್ದರು. ಜೊತೆಗೆ ಉತ್ಕೃಷ್ಟ ಗೃಹಿಣಿ ಕೂಡ. ಎಂ.ಕೆ. ಇಂದಿರಾರವರು ಕನ್ನಡ ಮಾಧ್ಯಮಿಕ ಶಾಲೆಯ 2 ನೆಯ ತರಗತಿಯವರೆಗೆ ಮಾತ್ರ ಇವರ ಶಿಕ್ಷಣ, ಅವರಿಗೆ ಶಾಲೆಗೆ ಹೋಗಿ ಓದುವ ಸೌಭಾಗ್ಯ ಹೆಚ್ಚು ಸಿಗಲಿಲ್ಲವಾದರೂ ಓದುವ ಹವ್ಯಾಸ ಅವರನ್ನು ಅತೀವವಾಗಿ ಆವರಿಸಿತು. ಹನ್ನೆರಡನೇ ವಯಸ್ಸಿನಲ್ಲಿ ಅವರಿಗೆ ಎಂ. ಕೃಷ್ಣರಾವ್ ಎಂಬುವರೊಡನೆ ವಿವಾಹವಾಯಿತು. ಸಾಂಸಾರಿಕ ಜೀವನದಲ್ಲಿ ಅವರಿಗೆ ಹಲವಾರು ಊರುಗಳಲ್ಲಿ ಸುತ್ತುವ ಅವಕಾಶ ಒದಗಿಬಂತು. ಹದಿನೇಳನೆ ವಯಸ್ಸಿನಲ್ಲಿ ಅವರು ತಾಯಿಯಾದರು. ಕಾಲಾನುಕ್ರಮದಲ್ಲಿ ಅವರಿಗೆ ಎಂಟು ಮಕ್ಕಳು ಹುಟ್ಟಿದರೂ ಉಳಿದದ್ದು ಮೂರು ಗಂಡು ಮತ್ತು ಒಂದು ಹೆಣ್ಣು ಮಗು. ಪ್ರಜಾವಾಣಿ ಪತ್ರಿಕೆಯಲ್ಲಿ ಸಂಪಾದಕರಾಗಿ ಪ್ರಸಿದ್ಧರಾದ ಟಿ.ಎಸ್. ರಾಮಚಂದ್ರರಾವ್ ಅವರ ತಮ್ಮ ಹಾಗೂ ಆಕಾಶವಾಣಿ ನಿರ್ದೇಶಕರಾಗಿದ್ದ ಡಾ॥ ಎಚ್.ಕೆ. ರಂಗನಾಥ್ ಇವರ ಚಿಕ್ಕಮ್ಮನ ಮಗ.

ಇಂದಿರಾ ಅವರು ಬರಹಗಾರ್ತಿಯಾದದ್ದು ಆಕಸ್ಮಿಕವಾಗಿ, ಒಮ್ಮೆ ಅವರು ಅವರ ಕುಟುಂಬವರ್ಗದವರೊಡನೆ ತುಂಗಭದ್ರಾ ತೀರದಲ್ಲಿ ಕುಳಿತು ಬದುಕಿನ ಹಲವಾರು ಮನನೀಯ ಘಟನೆಗಳನ್ನು ಮೆಲುಕು ಹಾಕುತ್ತಿದ್ದರು. ಇತರರಿಗೆ ಆಕೆಯಲ್ಲಿ ಬರಹದ ಸಾಮರ್ಥ್ಯ ಇದೆ ಎಂಬ ಭಾವ ಮೂಡಿದ್ದರೂ ಅವರೇ ಆ ಕೆಲಸಕ್ಕೆ ಕೈ ಹಾಕಿರಲಿಲ್ಲ. ಅಂದಿನ ಆ ಭೇಟಿಯ ನಂತರದಲ್ಲಿ ಅವರು ಎರಡು ಕುರುಡು ಅವಳಿಜವಳಿ ಮಕ್ಕಳನ್ನು ಕೇಂದ್ರವಾಗಿರಿಸಿಕೊಂಡು **'ತುಂಗಭದ್ರಾ'** ಎಂಬ ಕಾದಂಬರಿಯನ್ನು ಬರೆದರು. **'ತುಂಗಭದ್ರ'** ಇವರ ಮೊದಲ ಕೃತಿ. ಅವರ ಚಿಕ್ಕಮ್ಮನ ಮಗನಾದ ಕನ್ನಡದ ಹೆಸರಾಂತ ಬರಹಗಾರ ಮತ್ತು ಆಕಾಶವಾಣಿಯ ಹೆಸರಾಂತ

ನಿರ್ದೇಶಕರಾಗಿದ್ದ ಡಾ॥ ಹೆಚ್.ಕೆ. ರಂಗನಾಥ್ ಅವರು ಇದನ್ನು ಓದಿ ಮೆಚ್ಚಿ ಪ್ರಸಿದ್ಧ ಪ್ರಕಾಶಕ ಸಂಸ್ಥೆಯಾದ ಮನೋಹರಗ್ರಂಥ ಮಾಲೆಯ ಜಿ.ಬಿ. ಜೋಷಿ ಅವರಿಗೆ ಅದನ್ನು ಕಳುಹಿಸಿಕೊಟ್ಟರು. ಹೀಗೆ ಎಂ.ಕೆ. ಇಂದಿರಾರವರ ಬರಹ ಜಿ.ಬಿ. ಜೋಷಿ ಅವರ ಮನೋಹರ ಗ್ರಂಥಮಾಲೆಯ ಸಾರ್ವಕಾಲಿಕ ಸಲಹೆಗಾರರಾದ ಪ್ರೊ. ಕೀರ್ತಿನಾಥ ಕುರ್ತಕೋಟಿ ಅವರ ಕೈ ಸೇರಿತು.

ಇಂದಿರಾ ಅವರ ಬಳಿ ಮತ್ತೊಂದು ಬರಹದ ಪ್ರತಿ ಕೂಡ ಇರಲಿಲ್ಲ. ಕೀರ್ತಿನಾಥ ಕುರ್ತುಕೋಟಿ ಅವರು ಇದನ್ನು ಓದಿದ್ದರಾದರೂ ತಮ್ಮ ಹಣಕಾಸಿನ ಚೀಲ ಮತ್ತು ಈ ಬರಹದ ಪ್ರತಿ ಎಲ್ಲವನ್ನೂ ಮುಂಬೈನ ಜನಜಂಗುಳಿಯಲ್ಲಿ ಕಳೆದುಕೊಂಡುಬಿಟ್ಟರು. ಜಿ.ಬಿ. ಜೋಷಿ ಮತ್ತು ಕೀರ್ತಿನಾಥ ಕುರ್ತುಕೋಟಿ ಇಬ್ಬರೂ ಆದ ಪ್ರಮಾದಕ್ಕೆ ಅತೀವ ದುಃಖ ವ್ಯಕ್ತಪಡಿಸಿ, ಮತ್ತೊಮ್ಮೆ ಕಾದಂಬರಿಯನ್ನು ತಮ್ಮ ಬಳಿ ಇರಬಹುದಾದ ಯಾವುದಾದರೂ ಖಚ್ಚಾ ಬರಹ ಸಾಮಗ್ರಿಗಳಿಂದ ಪುನಃ ನಿರ್ಮಿಸಿಕೊಡಬೇಕೆಂದು ಎಂ.ಕೆ. ಇಂದಿರಾ ಅವರನ್ನು ಕೇಳಿಕೊಂಡರು. ಆದರೆ ಅವ್ಯಾವುವೂ ಇಂದಿರಾ ಅವರ ಬಳಿ ಇರಲಿಲ್ಲ. ಆದರೆ ಇಂದಿರಾ ಅವರು ಕೆಚ್ಚೆದೆಯಿಂದ ಈ ಘಟನೆಯನ್ನು ಸವಾಲಾಗಿ ಸ್ವೀಕರಿಸಿ ಹದಿನೈದು ದಿನಗಳೊಳಗಾಗಿ ಪುನಃ ಕಾದಂಬರಿಯನ್ನು ನಿರ್ಮಿಸಿಕೊಟ್ಟರು. ಕೀರ್ತಿನಾಥ ಕುರ್ತುಕೋಟಿಯವರಿಗೆ ಈ ಅಪೂರ್ವ ಸಾಮರ್ಥ್ಯವನ್ನು ನಂಬಲಿಕ್ಕಾಗಲಿಲ್ಲ. ಎರಡನೇ ಸಲ ಅವರು ಓದಿದ ಈ ಪ್ರತಿ ಮೊದಲಿನದಕ್ಕಿಂತ ಘನವೇತ್ತಾಗಿದೆ ಎಂಬ ಭಾವ ಅವರನ್ನಾವರಿಸಿತು.

"ತುಂಗಭದ್ರ" ಕೃತಿ ಅಪೂರ್ವ ಯಶಸ್ಸನ್ನು ಗಳಿಸಿತು. ಹದಿನೈದೇ ದಿನಗಳಲ್ಲಿ ಎಂ.ಕೆ. ಇಂದಿರಾ ಅವರು ಅಪಾರ ಜನಪ್ರಿಯ ವ್ಯಕ್ತಿಯಾಗಿಬಿಟ್ಟರು. ಒಂದಾದ ಮೇಲೊಂದರಂತೆ ಅವರ ಲೇಖನಿಯಿಂದ ಕಾದಂಬರಿ – ಕಥೆಗಳು ಹರಿದು ಬಂದವು. ಕಥೆ, ಕಾದಂಬರಿ, ಪ್ರಹಸನ, ಹರಟೆ, ವ್ಯಕ್ತಿಚಿತ್ರ ಇತ್ಯಾದಿಯಾಗಿ 60ಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ. **"ಸದಾನಂದ"**, **"ಫಣಿಯಮ್ಮ"** ಈ ಕಾದಂಬರಿಗಳಿಗೆ ಹಾಗೂ ನವರತ್ನ ಕಥಾಸಂಕಲನಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. 1975ರಲ್ಲಿ **"ಶ್ರೇಷ್ಠ ಚಿತ್ರಕತೆ"** ಪ್ರಶಸ್ತಿ ಇವರಿಗೆ ಲಭಿಸಿವೆ. ಇವರ ಅನೇಕ ಕಾದಂಬರಿಗಳು

ತೆಲುಗು, ಮಲಯಾಳಂ ಹಾಗೂ ಇಂಗ್ಲಿಷ್ ಭಾಷೆಗಳಿಗೆ ಅನುವಾದಗೊಂಡಿವೆ. **"ಗಜ್ಜೆಪೂಜೆ"** ಚಿತ್ರದ ಚಿತ್ರಕಥೆಗಾಗಿ ನಿರ್ದೇಶಕ ಎಸ್.ಆರ್. ಪುಟ್ಟಣ್ಣ ಕಣಗಾಲ್ ಅವರಿಗೆ ಅತ್ಯುತ್ತಮ ಚಿತ್ರಕಥೆಗಾರ ಪ್ರಶಸ್ತಿ ಪ್ರಕಟವಾದಾಗ ಮೂಲ ಕಾದಂಬರಿಗಾರ್ತಿ ಎಂ.ಕೆ. ಇಂದಿರಾ, ಈ ಪ್ರಶಸ್ತಿ ಸಲ್ಲಬೇಕಾಗಿರುವುದು ಲೇಖಕಿಗೆ ಎನ್ನುವ ವಾದ ಮಂಡಿಸಿದ್ದರು. **"ಫಣಿಯಮ್ಮ** ಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ದೊರೆಯಿತು. ಜೊತೆಗೆ ಈ ಕೃತಿಯನ್ನು ತೇಜಸ್ವಿನಿ ನಿರಂಜನ ಆಂಗ್ಲಭಾಷೆಗೆ ಅನುವಾದ ಮಾಡಿದ್ದಾರೆ. ಈ ಅನುವಾದಕ್ಕೆ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. ಹಲವಾರು ಪ್ರಶಸ್ತಿ ಗೌರವಗಳು ಅವರನ್ನು ಹುಡುಕಿ ಬಂದವು. ಅವರ **"ತುಂಗಭದ್ರ", "ಸದಾನಂದ", "ನವರತ್ನ", "ಫಣಿಯಮ್ಮ"** ಈ ನಾಲ್ಕು ಕೃತಿಗಳು ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದವು. ಕೇವಲ ಎರಡನೇ ತರಗತಿಯವರೆಗೆ ಓದಿದ ಅವರ ಕೃತಿಗಳು ವಿಶ್ವವಿದ್ಯಾಲಯದ ಪಠ್ಯ ಪುಸ್ತಕಗಳಾದವು. ಅವರ ಕೃತಿಗಳು ಬೇರೆ ಬೇರೆ ಭಾಷೆಗಳಿಗೆ ತರ್ಜುಮೆಗೊಂಡವು. ತೇಜಸ್ವಿನಿ ನಿರಂಜನ ಅವರು **"ಫಣಿಯಮ್ಮ"** ಕಥೆಯನ್ನು ಇಂಗ್ಲಿಷ್ ಭಾಷೆಗೆ ಭಾಷಾಂತರಿಸಿದರು. ಈ ಭಾಷಾಂತರಿತ ಕೃತಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗಳಿಸಿತು. ಅವರ ಐದು ಕೃತಿಗಳು ಚಲನಚಿತ್ರಗಳಾದವು. **"ಫಣಿಯಮ್ಮ"** ಚಿತ್ರ ರಾಷ್ಟ್ರ ಪ್ರಶಸ್ತಿಗಳಲ್ಲದೆ ಅಂತರರಾಷ್ಟ್ರೀಯ ಪ್ರಶಸ್ತಿಗಳನ್ನೂ ಗಳಿಸಿತು. ಅವರ ಕಾದಂಬರಿ ಆಧಾರಿತ **"ಗಜ್ಜೆಪೂಜೆ"** ಕೂಡಾ ಕನ್ನಡ ಚಿತ್ರರಂಗದಲ್ಲಿ ಒಂದು ಅಮರ ಕೃತಿಯೆಂದು ಪರಿಗಣಿತವಾಗಿದೆ.

ಇವರ ಕಾದಂಬರಿಗಳಲ್ಲಿ ಮಲೆನಾಡಿನ ವರ್ಣನೆ ಸುಂದರವಾಗಿ ಮೂಡಿಬಂದಿದೆ. ಎಂ.ಕೆ. ಇಂದಿರಾ ಅವರ **"ಗಜ್ಜೆಪೂಜೆ", "ಫಣಿಯಮ್ಮ"** ಮತ್ತು **"ಪೂರ್ವಾಪರ"** ಎಂಬ ಕಾದಂಬರಿಗಳು ಚಲನಚಿತ್ರವಾಗಿದೆ. ಫಣಿಯಮ್ಮ ಚಿತ್ರವನ್ನು ನಿರ್ದೇಶಿಸಿದವರು ಶ್ರೀಮತಿ ಪ್ರೇಮಾ ಕಾರಂತ್. ಈ ಚಿತ್ರ ಅನೇಕ ಪ್ರಶಸ್ತಿಗಳನ್ನು ಗಳಿಸಿಕೊಂಡಿತು. ನಟಿ ಎಲ್. ವಿ.ಶಾರದಾ ಈ ಚಿತ್ರದಲ್ಲಿ ಮುಖ್ಯ ಪಾತ್ರವನ್ನು ನಿರ್ವಹಿಸಿದ್ದರು. **"ಗಜ್ಜೆಪೂಜೆ"** ಕಾದಂಬರಿಯನ್ನು ದಿವಂಗತ ಪುಟ್ಟಣ್ಣ ಕಣಗಾಲ್ ನಿರ್ದೇಶಿಸಿದ್ದರು.

ಒಬ್ಬ ಪಂಡಿತರು ಎಂ.ಕೆ. ಇಂದಿರಾ ಅವರ ಬದುಕು ಮತ್ತು ಕೃತಿಗಳ ಕುರಿತ ಅಧ್ಯಯನಾತ್ಮಕ

ಸಂಶೋಧನೆಗಾಗಿ ಡಾಕ್ಟರೇಟ್ ಪದವಿ ಪಡೆದರು. ಎಂ.ಕೆ. ಇಂದಿರಾ ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ ಈ ನಾಡಿನ ಬಹುಶ್ರುತ ವಿದ್ವನ್ಮಣಿಗಳ ಬರಹಗಳನ್ನೊಳಗೊಂಡ ಸಂಭಾವನಾ ಗ್ರಂಥವನ್ನು ಸಹಾ ಅರ್ಪಿಸಲಾಯಿತು.

ಅರವತ್ತು-ಎಪ್ಪತ್ತರ ದಶಕದ ಸಂದರ್ಭದಲ್ಲಿ ದೂರದರ್ಶನದ ಯಾವುದೇ ಚಾನಲ್ಲುಗಳು ಪ್ರಾರಂಭವಾಗಿಲ್ಲದಿದ್ದ ಆ ದಿನಗಳಲ್ಲಿ ರಸವತ್ತಾದ ಕಥಾನಕಗಳ ಓದು ಗೃಹಿಣಿಯರ ಅತ್ಯಂತ ಜನಪ್ರಿಯ ಹವ್ಯಾಸವಾಗಿತ್ತು. ಆದರೆ ಎಂ.ಕೆ. ಇಂದಿರಾ ಅವರ ಕಥೆಗಳಾದರೋ ವಿಧವೆಯರು, ದೇವದಾಸಿಯರು, ಬಡ ಅಧ್ಯಾಪಕ ವೃತ್ತಿಯವರು ಮುಂತಾದ ಪಾತ್ರಗಳದು. ಇಂತಹ ಪಾತ್ರಗಳನ್ನು ಜನಸಮುದಾಯದ ಕಣ್ಣಲ್ಲಿ ಸಹ್ಯವೆನಿಸುವಂತೆ ಮಾಡಿದ ಅವರ ಸಾಮರ್ಥ್ಯ ಅಸಾಧಾರಣವಾದದ್ದು.


ಅವರ ಕಥೆಗಳಲ್ಲಿ ಹಳ್ಳಿಯ ಜೀವನ, ಪ್ಲಾಂಟೇಶನ್ನುಗಳಲ್ಲಿ ಜನರು ನಡೆಸುವ ಬದುಕಿನ ರೀತಿ, ಮಧ್ಯಮ ವರ್ಗದ ಜನಸಮುದಾಯ ನದಿಗಳ ಅಸುಪಾಸಿನಲ್ಲಿ ಬದುಕು ನಡೆಸುವ ಚಿತ್ರಣ, ಬೆಟ್ಟ-ಗುಡ್ಡ-ಕಾಡು ಪ್ರದೇಶಗಳಲ್ಲಿನ ಬದುಕಿನ ಬಗೆಗೆ ಅವರು ನೀಡುವ ನೋಟ ಇವೆಲ್ಲಾ, ಎಲ್ಲಾ ವರ್ಗದ, ಎಲ್ಲಾ ವಯೋಮಾನದ ಓದುಗರಿಗೂ ಪ್ರಿಯವೆನಿಸಿದವು. ಅವರ ಒಂದೊಂದು ಕೃತಿಯೂ ಹಲವಾರು ಮರುಮುದ್ರಣಗಳನ್ನು ಕಂಡವು.

ವಿಸ್ಮಯವೆಂದರೆ ಎಂ.ಕೆ. ಇಂದಿರಾ ಅವರ ಪ್ರಥಮ ಕಾದಂಬರಿ ಹೊರಬಂದಿದ್ದೇ ಅವರು ನಲವತ್ತೈದು ವಯಸ್ಸಿನವರಿದ್ದಾಗ, **"ತುಂಗಭದ್ರ"** ಎಂಬ ಆ ಮೊದಲನೆಯ ಕಾದಂಬರಿಯಲ್ಲೇ ಅವರು ಜನಪ್ರಿಯರಾಗಿಬಿಟ್ಟರು. ಮಕ್ಕಳ ಸಾಹಿತ್ಯದ ಪ್ರಸಿದ್ಧರಾದ ಹೊಯಿಸಳ ಇವರ ಸೋದರಮಾವ ಮಲೆನಾಡಿನ ಸಹ್ಯಾದ್ರಿ ಶ್ರೇಣಿ, ಭೀಮವೃಕ್ಷರಾಜಿ, ಹಕ್ಕಿಗಳ ಇಂಚರ, ಹಸಿರು... ಇವೆಲ್ಲವೂ ಇಂದಿರ ಅವರ ಕಾದಂಬರಿಗಳಲ್ಲಿ ರಾರಾಜಿಸಿರುತ್ತವೆ. ಅವರ ಮೊಟ್ಟಮೊದಲ ಕಾದಂಬರಿ **"ತುಂಗಭದ್ರ"**. ತುಂಗಭದ್ರೆಯನ್ನು ಮೆಚ್ಚಿಕೊಂಡು ಕೀರ್ತಿನಾಥ ಕುರ್ತಕೋಟಿ ಯವರು ಒಂದು ದೀರ್ಘವಾದ ಮುನ್ನುಡಿ ಬರೆದರು. ಈ ಕಾದಂಬರಿ ವಿಶ್ವವಿದ್ಯಾನಿಲಯದ ಪದವಿ ತರಗತಿಗೆ ಪಠ್ಯವಾಗಿತ್ತು. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿನ ಸ್ಥಿತಿ, ವಿಧವಾವಿವಾಹ, ಬಾಲ್ಯವಿವಾಹ,

ವಿಧವೆಯ ಗೋಳು, ಜಾತಿ ಪದ್ಧತಿ ಇವೆಲ್ಲವೂ ಅವರ ಕಾದಂಬರಿಗಳಲ್ಲಿ ವ್ಯಕ್ತವಾಗುತ್ತಿತ್ತು. ನಂತರದ ಇಪ್ಪತ್ತೆರಡು ವರ್ಷಗಳ ಬದುಕಿನಲ್ಲಿ ಅವರು 49 ಕಾದಂಬರಿಗಳನ್ನೂ, ಸುಮಾರು 150 ಸಣ್ಣಕಥೆಗಳನ್ನೂ, 11 ಕಥಾಸಂಕಲನಗಳನ್ನೂ ಮತ್ತು ತಮ್ಮ ಆತ್ಮಚರಿತ್ರೆಯನ್ನೂ ಬರೆದರು. "ಬಿಂದು" ಅರ್ಧಕ್ಕೆ ನಿಂತುಹೋದ ಆತ್ಮಕಥೆ. ಅವರ ಬರವಣಿಗೆಯ ಕೃಷಿಯಲ್ಲಿ ಅಪೂರ್ವವೆಂಬಂತೆ ಬಹಳಷ್ಟು ಗಳಿಸಿದರು. ಇವೆಲ್ಲವೂ ಅಸಹಜವಾಗಿ ಕಾಣುತ್ತದೆ ಕಾರಣ ಅವರೊಬ್ಬರು ಮಹಾನ್ ಮೇಧಾವಿಗಳಾತದ್ದರಿಂದ ಉತ್ತಮ ಬರವಣಿಗೆ ಕೃಷಿ ಮಾಡಲು ಯಾವುದೇ ರೀತಿಯ ಹಿನ್ನೆಲೆಯಾಗಲಿ ವ್ಯವಸ್ಥಿತ ತರಬೇತಿಯಾಗಲಿ ಅನಿವಾರ್ಯವೇನಲ್ಲ ಎಂಬುದಕ್ಕೆ ಅವರೊಂದು ವಿಶಿಷ್ಟ ಉದಾಹರಣೆಯಾಗಿ ಈ ಲೋಕದಲ್ಲಿ ಮೂಡಿಹೋದರು.

ಅಷ್ಟೆಲ್ಲಾ ಜನಪ್ರಿಯತೆ ಗಳಿಸಿದರೂ ಅಷ್ಟೊಂದು ಸಂಪಾದಿಸಿದ್ದರೂ, ಅವರ ಅಂತಿಮ ದಿನಗಳ ಬದುಕು ಶೋಚನೀಯ ಸ್ಥಿತಿಯದ್ದಾಗಿತ್ತು. ಅವರಿಗೆ ಬರೆಯಲಿಕ್ಕೆ ಒಂದು ಕುರ್ಚಿ ಮೇಜಿನ ವ್ಯವಸ್ಥೆ ಕೂಡ ಇರಲಿಲ್ಲ. ಕೇವಲ 500 ರೂಪಾಯಿಗಳ ಮಾಸಿಕ ಪಿಂಚಣಿಯಲ್ಲಿ ಬದುಕು ಸವೆಸುವ ದಾರುಣ ಸ್ಥಿತಿ ಅವರಿಗೆ ಏರ್ಪಟ್ಟಿತು. 1994ರ ವರ್ಷದಲ್ಲಿ ಅವರು ಮರಣಿಸುವ ಮುಂಚೆ ಕೆಲವು ದಿನಗಳ ಆಸ್ಪತ್ರೆಯಲ್ಲಿನ ಬದುಕೂ ಸೇರಿದಂತೆ ಅತ್ಯಂತ ಕಠಿಣ ಬದುಕು ಅವರದ್ದಾಗಿತ್ತು.

ಅವರ ಪ್ರಸಿದ್ಧಿಯ ದಿನಗಳಲ್ಲಿ ಅವರ ಪುಸ್ತಕಗಳಿಗೆ ಕಾದು ನಿಲ್ಲುವ ಬೃಹತ್ ಬಳಗ ಅವರೊಂದಿಗಿತ್ತು. ಹೀಗೆ ಕನ್ನಡದ ಪ್ರಸಿದ್ಧ ಬರಹಗಾರ್ತಿ ಎಂ.ಕೆ. ಇಂದಿರಮ್ಮನವರ ಬರಹದ ಬದುಕಿನ ಒಂದು ಯುಗ ಸಮಾಪ್ತಿಯಾಯಿತು.



ನಲವತ್ತರ ದಶಕದಿಂದಲೇ ಜನಪ್ರಿಯವೂ ಕಲಾತ್ಮಕವೂ ಆದ ಕಾದಂಬರಿಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ ವಿ.ಎಂ. ಇನಾಂದಾರ್ ಕಾದಂಬರಿಕಾರರಾಗಿ ಮಾತ್ರವಲ್ಲದೆ ಅತ್ಯುತ್ತಮ ಇಂಗ್ಲಿಷ್ ಪ್ರಾಧ್ಯಾಪಕರೂ, ವಿಮರ್ಶಕರೂ, ನಾಟಕಕಾರರೂ ಹೌದು. ಭಾರತೀಯ ಸನಾತನ ಮೌಲ್ಯಗಳ ಚಿಂತಕರಾಗಿಯೂ ಗುರ್ತಿಸಿಕೊಂಡಿದ್ದ ಅವರು ತಮ್ಮ ಸಮಕಾಲೀನ ಹಿರಿಯ ಸಾಹಿತಿಗಳಾದ ಶಿವರಾಮಕಾರಂತ, ವಿ.ಸೀ. ಮಾಸ್ತಿ ಮೊದಲಾದವರಿಂದ ಮೆಚ್ಚುಗೆ ಗಳಿಸಿಕೊಂಡಿದ್ದವರು.

ವೆಂಕಟೇಶ ಮಧ್ವರಾಯ ಇನಾಂದರ್ ಜನಿಸಿದ್ದು 1912ರ ಅಕ್ಟೋಬರ್ 1 ರಂದು. ಮಧ್ವರಾಯ, ಕಮಲಮ್ಮ ದಂಪತಿಗೆ ಬೆಳಗಾವಿ ಜಿಲ್ಲೆಯ ಹುದಲಿಯಲ್ಲಿ ಜನಿಸಿದ ಅವರ ಪ್ರಾಥಮಿಕ.

ಮಾಧ್ಯಮಿಕ, ಹೈಸ್ಕೂಲು ವಿದ್ಯಾಭ್ಯಾಸ ಕ್ರಮವಾಗಿ ಹುದಲಿ ಬೆಳಗಾವಿ, ಅಥಣಿ, ಬಿಜಾಪುರ, ಮುಂಬಯಿಗಳಲ್ಲಿ ನಡೆಯಿತು.

1930ರಲ್ಲಿ ಮೆಟ್ರಿಕ್ ಪಾಸಾದ ನಂತರ, ತಮ್ಮ ಮಾಸ್ತರರಾಗಿದ್ದ ಶಿವಣಗಿ ಅವರ ಪ್ರಭಾವದಿಂದ ಸಂಸ್ಕೃತ-ಇಂಗ್ಲಿಷ್ ಸಾಹಿತ್ಯಗಳತ್ತ ಆಕರ್ಷಿತರಾದರು. ಮುಂದೆ ಧಾರವಾಡದ ಕರ್ನಾಟಕ ಕಾಲೇಜು ಮತ್ತು ಮುಂಬಯಿಯ ಎಲ್ಫಿನ್‌ಸ್ಟನ್ ಕಾಲೇಜುಗಳಲ್ಲಿ ಓದಿ 1934ರಲ್ಲಿ ಐಚ್ಛಿಕ ಇಂಗ್ಲಿಷ್‌ನೊಂದಿಗೆ ಬಿ.ಎ. ಆನರ್ಸ್ ಪದವಿಯನ್ನು ಚಿನ್ನದ ಪದಕದೊಂದಿಗೆ ಗಳಿಸಿದರು. ಆ ವೇಳೆಗಾಗಲೇ ಕನ್ನಡ ರಂಗಭೂಮಿಗೆ ಹೊಸ ಆಯಾಮವನ್ನು ತಮ್ಮ ನಾಟಕಗಳ ಮೂಲಕ ಕೊಟ್ಟ ಶ್ರೀರಂಗದ ಪ್ರಭಾವ ವಲಯಕ್ಕೆ ಸೇರ್ಪಡೆಯಾಗಿ ಅವರ ನಾಟಕಗಳಲ್ಲಿಯೂ ಪಾತ್ರ ವಹಿಸಿದ್ದರು. ಸಂಸ್ಕೃತದ ಅಧ್ಯಾಪಕರಾಗಿದ್ದ ಶ್ರೀರಂಗರು, ಜೀವನೋಪಾಯಕ್ಕೆ ಸಂಸ್ಕೃತಕ್ಕಿಂತ ಇಂಗ್ಲಿಷನ್ನೇ ಅವಲಂಬಿಸುವುದರ ಮೂಲಕ ನೌಕರಿ ಸುಲಭ ಸಾಧ್ಯವೆಂದು ತಿಳಿಸಿ ಇನಾಂದಾರ್ ಅವರನ್ನು ಹುರಿದುಂಬಿಸಿದರು.

1935 ರ ಸುಮಾರಿಗೆ, ಅಲ್ಪಕಾಲದ ನಿರುದ್ಯೋಗ ಸಮಸ್ಯೆ ನಂತರ ಬಿಜಾಪುರದ ಸಿವಿಲ್ ಕೋರ್ಟಿನಲ್ಲಿ ಎ.ಜಿ. ವೇಲ್ಸ್ ಎಂಬ ಆಂಗ್ಲ ನ್ಯಾಯಾಧೀಶನ ಕೈಕೆಳಗೆ ದುಭಾಷಿಯಾಗಿ ಅಥವಾ ಭಾಷಾಂತರಕಾರರಾಗಿ ಕೆಲಸ ಮಾಡಿದರು. ಅನಂತರ 1938ರಲ್ಲಿ ವಕೀಲ ಪರೀಕ್ಷೆ ಪಾಸು ಮಾಡಿದರು. ಆದರೆ ಈ ಕೆಲಸ ಬೇಸರವೆನಿಸಿ, 1940ರಲ್ಲಿ ಕೆಲಸಕ್ಕೆ ರಾಜೀನಾಮೆ ಕೊಟ್ಟರು. ಅಲ್ಲಿಂದ ಮುಂದೆ ಅವರ ಬದುಕಿನ ದಿಕ್ಕೇ ಬದಲಾಯಿತು.

1941ರಲ್ಲಿ ಮತ್ತೆ ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ಇಂಗ್ಲಿಷ್ ಎಂ.ಎ. ಮುಗಿಸಿದರು. ಪದವಿ ಮುಗಿಸುವ ಪೂರ್ವದಲ್ಲಿಯೇ ತಮ್ಮ ಆಸಕ್ತಿಯ ಸಾಹಿತ್ಯ ರಚನೆಗೆ ತೊಡಗಿದ್ದರು. Heroines in Sanskrit Dram (1936) ಎನ್ನುವುದು ಅವರ ಚೊಚ್ಚಲ ಕೃತಿ. ಈ ಪುಸ್ತಕಕ್ಕೆ ಮುಂಬಯಿ ವಿಶ್ವವಿದ್ಯಾಲಯದಿಂದ ಚಿನ್ನದ ಪದಕ ಬಹುಮಾನ ದೊರೆಯಿತು. ಅವರ ವಿದ್ವತ್ತು, ಬರವಣಿಗೆಯ

ಒತ್ತಡಗಳು ಮುಂದೆ ಅವರಿಂದ The Moral Problem in Shakuntala ಎನ್ನುವ ಮಹತ್ವದ, ವಿದ್ವತ್ಪೂರ್ಣವಾದ ಲೇಖನವನ್ನು ಬರೆಸಿದವು.

ಬರವಣಿಗೆ ಅವರ ಸಹಜ ಪ್ರವೃತ್ತಿಯಾದರೂ ಜೀವನೋಪಾಯಕ್ಕೆ ಅಧ್ಯಾಪಕ ವೃತ್ತಿಯಲ್ಲಿ ತೊಡಗಿಸಿಕೊಂಡರು. 1943–1947ರವರೆಗೆ ಮುಂಬಯಿಯ ಸಿಡೇನ್‌ಹ್ಯಾಂ ಕಾಲೇಜಿನಲ್ಲಿಯೂ 1947–50ರವರೆಗೆ ಕರ್ನಾಟಕ ಕಾಲೇಜು, ಧಾರವಾಡದಲ್ಲಿ ಅಧ್ಯಾಪಕರಾಗಿ ಕರ್ತವ್ಯ ನಿರ್ವಹಿಸಿದರು.

ಮುಂದೆ 1950–52 ರವರೆಗೆ ಅಹಮದಾಬಾದಿನ ಗುಜರಾತ್ ಕಾಲೇಜಿನಲ್ಲಿ ಮತ್ತು ಕರ್ನಾಟಕ ಕಾಲೇಜು, ಧಾರವಾಡದಲ್ಲಿ ಉಪಪ್ರಾಧ್ಯಾಪಕರಾಗಿಯೂ, ಮಂಗಳೂರಿನ ಸರಕಾರಿ ಕಾಲೇಜಿನ ವೈಸ್ ಪ್ರಿನ್ಸಿಪಾಲರಾಗಿ, ಉಡುಪಿಯ ಪೂರ್ಣಪ್ರಜ್ಞಾ ಕಾಲೇಜಿನಲ್ಲೇ ಪ್ರಾಧ್ಯಾಪಕರಾಗಿಯೂ ಕಾರ್ಯ ನಿರ್ವಹಿಸಿ, ವಿದ್ಯಾರ್ಥಿಗಳಿಂದ ಸಹೋದ್ಯೋಗಿ ಮಿತ್ರ ಬಳಗದಿಂದ ಮೆಚ್ಚುಗೆಯನ್ನು ಪಡೆದರು.

ಹೆಚ್ಚು ಕಡಿಮೆ 30 ವರ್ಷಗಳ ಕಾಲ ನಿಷ್ಠಾವಂತ ಅಧ್ಯಾಪಕರು, ಪ್ರಾಧ್ಯಾಪಕರೂ ಆಗಿ ಕೆಲಸ ನಿರ್ವಹಿಸಿದ ಅವರು 1968ರಲ್ಲಿ ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿನಿಂದ ನಿವೃತ್ತಿ ಪಡೆದು, ನಂತರ ಬೆಂಗಳೂರು ವಿಶ್ವವಿದ್ಯಾಲಯದಲ್ಲೂ ಯುಜಿಸಿ ಗೌರವ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಇದು ಅವರ ಅಧ್ಯಾಪಕ ಬದುಕಿನ ಮಜಲುಗಳಾದರೆ ಅವರ ಪ್ರತಿಭೆಯ ಮತ್ತೊಂದು ಧಾರೆಯಾಗಿ ಅವರ ಬರವಣಿಗೆ ಮುಂದುವರೆಯಿತು.

ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದ ಅವರಿಗೆ ಆ ಭಾಷೆಯಲ್ಲಿ ಬೋಧನೆ–ಬರವಣಿಗೆ ಸುಲಲಿತವಾಗಿತ್ತು. ಇಂಗ್ಲಿಷಿನ ಬಗ್ಗೆ ಅತಿಯಾದ ಪ್ರೀತಿಯೂ ಅವರಿಗಿತ್ತು. ಕನ್ನಡದಲ್ಲಿ ಬರೆಯಲು ಏನಿದೆ? ಎನ್ನುವುದು ಇವರ ಧೋರಣೆಯಾಗಿರುವುದರ ಜೊತೆಗೆ, ಅದು ಅವರ ಸಮಕಾಲೀನ ಅಧ್ಯಾಪಕರ ವಿದ್ವಾಂಸರ ಧೋರಣೆಯೂ ಆಗಿತ್ತು. ಇಂಥ ಸಂದರ್ಭದಲ್ಲಿ 'ಪ್ರಬುದ್ಧ ಕರ್ನಾಟಕ'

ಪತ್ರಿಕೆ ಅವರಲ್ಲಿ ಕನ್ನಡ ಆಸಕ್ತಿ ಮೂಡಲು ಕಾರಣವಾಯಿತು. ಬರೆದರೆ ತನ್ನ ಭಾಷೆಯಲ್ಲಿಯೇ ಬರೆಯಬೇಕೆಂಬ ವಾಸ್ತವ ಸತ್ಯದ ಅರಿವಿನೊಂದಿಗೆ ಮತ್ತು ಶ್ರೀರಂಗ, ಮಾಸ್ತಿ, ವಿ.ಸೀ. ಮುಂತಾದ ಕನ್ನಡದ ಹಿರಿಯ ಚೇತನಗಳ ಸ್ನೇಹ ಪ್ರೀತಿಗಳು ಅವರನ್ನು ಕನ್ನಡಕ್ಕೆ ಕಟ್ಟಿಹಾಕಿತೆಂದರೆ ಆಶ್ಚರ್ಯಪಡಬೇಕಿಲ್ಲ.

ಮೊದಲಿಗೆ ಅನುವಾದಗಳ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರ ಪ್ರವೇಶಿಸಿದರು. ಇಂಗ್ಲಿಷ್-ಕನ್ನಡಗಳೆರಡರಲ್ಲಿಯೂ ಸಮಾನ ಪ್ರಭುತ್ವದ ಜೊತೆಗೆ ಮರಾಠಿಯೂ ತಾಯಿಯ ಕಡೆಯಿಂದ ಮಾತೃಭಾಷೆಯಷ್ಟೇ ಸಹಜವಾಗಿ ಒಲಿದಿತ್ತು. ಮರಾಠಿಯ ಖ್ಯಾತ ಬರಹಗಾರ ವಿ.ಎಸ್. ಖಾಂಡೇಕರ್ ಅವರ ಸಣ್ಣ ಕತೆಗಳನ್ನು **'ದೃಷ್ಟಿ ಲಾಭ'** ಶೀರ್ಷಿಕೆಯಲ್ಲಿ ಪ್ರಕಟಿಸಿದರು. ಮಾಸ್ತಿಯವರ **'ಹೇಮಕೂಟದಿಂದ'**, ಕ್ಷೀರಸಾಗರರ **'ನಮ್ಮೂರಿನ ಪಶ್ಚಿಮಕ್ಕೆ'** ಮೊದಲಾದವನ್ನು ಇಂಗ್ಲಿಷಿಗೆ ಅನುವಾದಿಸಿದರು. ನಂತರ ಇದೇ ಖಾಂಡೇಕರರ **'ಎರಡು ಧ್ರುವ'** ಕಾದಂಬರಿಯನ್ನೂ ಅನುವಾದಿಸಿದರು.

ಬರವಣಿಗೆಯ ಜೊತೆಗೆ **'ಜಯಂತಿ'** ಮತ್ತು **'ಆರ್ಯನ್ ಸಾಥ್'** ಪತ್ರಿಕೆಗಳಿಗೆ ಅಂಕಣ ಬರಹಗಾರರಾಗಿ, ಉಪಸಂಪಾದಕರಾಗಿ, ಪುಸ್ತಕ ವಿಮರ್ಶಕರಾಗಿ ಪತ್ರಿಕೋದ್ಯಮದ ಅನುಭವವನ್ನೂ ಪಡೆದರು. ಇಷ್ಟೆಲ್ಲ ರೀತಿಯಲ್ಲಿ ಅವರ ಸಾಹಿತ್ಯ ಚಟುವಟಿಕೆಗಳು ನಡೆಯುತ್ತಿದ್ದರೂ ಪೂರ್ಣ ಪ್ರಮಾಣದ ಕಾದಂಬರಿಕಾರರಾಗಿ ರೂಪಾಂತರಗೊಳ್ಳಲು ಜಿ.ಬಿ. ಜೋಶಿಯವರ, ಒಂದು ಸನ್ನಿವೇಶದಲ್ಲಿನ ಸ್ನೇಹದ ಮೂದಲಿಕೆ ಕಾರಣವಾಯಿತು. **'ಟೀಕೆ ಮಾಡುವುದು ಸುಲಭ, ಸ್ವತಃ ಬರೆದಾಗಲೇ ಕಷ್ಟದ ಅರಿವಾಗುತ್ತದೆ'** ಎಂಬ ಜೋಶಿಯವರ ಮಾತು ಅವರನ್ನು ಕೆಣಕಿ, ಅದನ್ನು ಸವಾಲಾಗಿ ಸ್ವೀಕರಿಸಿ.

'ಎರಡು-ಧ್ರುವ' ಅನುವಾದದ ಮೂಲಕ ಕಾದಂಬರಿಯ ವಸ್ತು, ತಂತ್ರ, ನಿರ್ವಹಣೆಯ ಸ್ವರೂಪವನ್ನು ಕರಗತ ಮಾಡಿಕೊಂಡರು. 1946 ರಲ್ಲಿ **'ಮೂರಾಬಟ್ಟೆ'** ಎಂಬ ಸ್ವತಂತ್ರ ಕಾದಂಬರಿಯ

ಮೂಲಕ ಮುಂದಿನ ತಮ್ಮ ನಡೆಯನ್ನು ಗುರುತಿಸಿಕೊಂಡರು. **'ಮೂರಾಬಟ್ಟೆ'** ಅವರ ಮೊದಲ ಕಾದಂಬರಿ. ಅಲ್ಲಿಂದ ಪ್ರಾರಂಭವಾದ ಇನಾಂದಾರ್‌ರ ಕಾದಂಬರಿಯ ರಚನೆ 1980ರ **'ತ್ರಿಶಂಕು'**ವರೆಗೆ ಮುಂದುವರೆಯಿತು. ಒಟ್ಟು 18 ಕಾದಂಬರಿಗಳನ್ನು ಬರೆದರಲ್ಲದೆ, ಶಿವರಾಮಕಾರಂತ, ಕುವೆಂಪು, ಮಾಸ್ತಿ ಮೊದಲಾದವರ ಕೃತಿಗಳ ಕುರಿತು ಸಮಗ್ರ ವಿಮರ್ಶೆಯನ್ನು ಬರೆದರು. **'ಕನಸಿನ ಮನೆ'**, **'ವಿಜಯಯಾತ್ರೆ'**, **'ಶಾಪ'**, (ಇವರ **'ಶಾಪ'** ಕಾದಂಬರಿಯನ್ನು ಆಧರಿಸಿ **"ಮುಕ್ತಿ"** ಎನ್ನುವ ಚಲನಚಿತ್ರವನ್ನು ಖ್ಯಾತ ನಿರ್ದೇಶಕ ಎನ್. ಲಕ್ಷ್ಮೀನಾರಾಯಣರ ನಿರ್ದೇಶನದಲ್ಲಿ ತೆಗೆಯಲಾಗಿತ್ತು. ಈ ಚಲನಚಿತ್ರದಲ್ಲಿ ಕಲ್ಪನಾ ಇವರು ನಾಯಕಿಯಾಗಿದ್ದರು.) **'ಸ್ವರ್ಗದ ಬಾಗಿಲು'**, **'ಕಟ್ಟಿದ ಮನೆ'**, **'ಮುಗಿಯದ ಕಥೆ'**, **'ಈ ಪರಿಯ ಸೊಬಗು'**, **'ಚಿತ್ರಲೇಖ'**, **'ಊರ್ವಶಿ'**, **'ನವಿಲು ನೌಕೆ'**, **'ಬಾಡಿದ ಹೂ'**, **'ಮಂಜು ಮುಸುಕಿದ ದಾರಿ'**, **'ವಿಷಬೆಳಕು'**, **'ಬಿಡುಗಡೆ'** ಅವರ ಕೆಲವು ಪ್ರಮುಖ ಕಾದಂಬರಿಗಳು. 1971ರಲ್ಲಿ ಕೆನಡಾ, ಅಮೆರಿಕಾ, ಇಂಗ್ಲೆಂಡ್‌ಗಳ ಮುಗಿಸಿ ಬಂದು **'ಯಾತ್ರಿಕರು'** ಕಾದಂಬರಿಯನ್ನು Death of Ahasuerrus ಎನ್ನುವ ಕಥೆಯ ಪ್ರೇರಣೆಯಿಂದ ಬರೆದರು. ಹಾಗೆಯೇ **'ಮೋಹಿನಿ'** ಕಾದಂಬರಿಯ ಉಳಿದೆರಡು ಭಾಗಗಳಾಗಿ **'ಬಾಡಿದ ಹೂ'**, **'ಕತ್ತಲೆಯ ಕಡಲು'**ಗಳನ್ನು ಬರೆದರು.

ಸೃಜನಶೀಲ ಪ್ರತಿಭೆಯಷ್ಟೇ ತೀಕ್ಷ್ಣವಾದದ್ದು ಇನಾಂದಾರ್‌ರ ವಿಮರ್ಶನ ಪ್ರತಿಭೆ. 1978ರಲ್ಲಿ ಅವರ ಆಚಾರ್ಯ ಕೃತಿ ಎಂದು ವಿದ್ವಾಂಸರ ಮೆಚ್ಚುಗೆ ಪಡೆದ **'ಪಾಶ್ಚಾತ್ಯ ಕಾವ್ಯ ಮೀಮಾಂಸೆ'**ಯ ಮೊದಲ ಭಾಗವಾದ ಪಾಶ್ಚಾತ್ಯ ವಿಮರ್ಶೆಯ **'ಪ್ರಾಚೀನ ಪರಂಪರೆ'**, **'ಕಾಳಿದಾಸನ ಕಥಾ ನಾಟಕಗಳು'**. 1976 ರಲ್ಲಿ ವಿಮರ್ಶೆಯ **'ಮಧ್ಯಯುಗ'** 1978 ರಲ್ಲಿ **'ಸಂಪ್ರದಾಯ ಯುಗ'** ಪ್ರಕಟವಾದವು. 1982ರಲ್ಲಿ ಪಾಶ್ಚಾತ್ಯ ವಿಮರ್ಶೆಯ (ವಿಶೇಷವಾಗಿ ಕಾದಂಬರಿ ಪ್ರಕಾರಕ್ಕೆ ಸಂಬಂಧಪಟ್ಟಂತೆ) **'ರೊಮ್ಯಾಂಟಿಕ್ ಯುಗ'**, **'ಆಧುನಿಕಯುಗ'**ಗಳು ಪ್ರಕಟವಾದವು. ನಂತರ ಈ ಎಲ್ಲಾ ಸಂಪುಟಟಗಳ ಸಮಗ್ರ ಸಂಕಲನವಾಗಿ 625 ಪುಟಗಳುಳ್ಳ **'ಪಾಶ್ಚಾತ್ಯ ಕಾವ್ಯಮೀಮಾಂಸೆ'** ಹೆಸರಿನಲ್ಲಿ ಬೃಹತ್ ಗ್ರಂಥವೊಂದು ಅಚ್ಚಾಗಿ ಸಾಹಿತ್ಯಾಸಕ್ತರಿಗೆ ಮಹತ್ವದ ಆಕರಗ್ರಂಥವೆಂದು ವಿದ್ವತ್‌ಲೋಕದಿಂದ ಮೆಚ್ಚುಗೆ ಗಳಿಸಿತು. 1977ರಲ್ಲಿ ವಿ.ಎಮ್.ಇನಾಂದಾರ್‌ರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ

ಪುರಸ್ಕಾರದ ಗರಿಯನ್ನು ಅಲಂಕರಿಸಿಕೊಂಡಿತು. **'ಎರಡು-ಧ್ರುವ'**ದ ಸಮರ್ಥ ಅನುವಾದವನ್ನು ಮೆಚ್ಚಿಕೊಂಡಿದ್ದ ಖಾಂಡೇಕರರ ಒತ್ತಾಯದ ಮೇರೆಗೆ ಜ್ಞಾನಪೀಠ ಪುರಸ್ಕಾರವನ್ನು ಅವರಿಗೆ ತಂದುಕೊಟ್ಟ **'ಯಾಯತಿ'**ಯನ್ನು ಅನುವಾದಿಸಿದರು.

1980ರ ನಂತರ ಅವರು ಅನಾರೋಗ್ಯ ಪೀಡಿತರಾಗಿದ್ದರೂ ಕನ್ನಡದ ಕಣ್ವ ಬಿ.ಎಂ. ಶ್ರೀ ಶತಮಾನೋತ್ಸವ ಸಂದರ್ಭದಲ್ಲಿ ತಮ್ಮ ಭಕ್ತಿ ಗೌರವದ ಕಾಣಿಕೆಯಾಗಿ 1983ರಲ್ಲಿ **'ಬಿ.ಎಂ.ಶ್ರೀ ಬದುಕು ಬರಹ'** ಎಂಬ ಕೃತಿಯನ್ನು ಬರೆದು ಹಿರಿಯರಿಗೆ ತಮ್ಮ ಋಣ ತೀರಿಸಿದರು. ಇನಾಂದಾರ್ ಅವರು ಬರೆಯುತ್ತಿದ್ದಾಗ ಕನ್ನಡದಲ್ಲಿ ಕಾದಂಬರಿಗಳ ರಚನೆ ಅಷ್ಟಾಗಿ ಇರಲಿಲ್ಲ. ಕಾದಂಬರಿ ಮಾದರಿಗಳೂ ಅವರಿಗೆ ಲಭ್ಯವಾಗಲಿಲ್ಲ. ಪ್ರಗತಿಶೀಲ ಲೇಖಕರೊಂದಷ್ಟು ಮಂದಿ ಕಾದಂಬರಿ ರಚನೆಯಲ್ಲಿ ತೊಡಗಿಸಿಕೊಂಡಿದ್ದರು. ಆಂಗ್ಲ ಕಾದಂಬರಿಕಾರರೇ ಅವರಿಗೆ ದೊಡ್ಡ ಪ್ರೇರಣೆಯಾಗಿದ್ದರು. ಅದರೊಂದಿಗೆ ಇನಾಂದಾರರ ಕಾದಂಬರಿ ರಚನೆಯ ಸಾಹಸಯಾತ್ರೆ ಪ್ರಾರಂಭವಾಗಿ, ಅದ್ಭುತ ಯಶಸ್ಸನ್ನು ಜನಪ್ರಿಯತೆಯನ್ನು ಗಳಿಸಿಕೊಂಡಿತು.

ಇನಾಂದಾರರಿಗೆ ಭಾರತೀಯ ಸನಾತನ ಸಂಸ್ಕೃತಿ, ಪರಂಪರೆ, ಸಂಪ್ರದಾಯ, ಧಾರ್ಮಿಕ ನಂಬಿಕೆಗಳಲ್ಲಿ, ಕರ್ಮ ಸಿದ್ಧಾಂತಗಳಲ್ಲಿ ಅಪಾರ ಶ್ರದ್ಧೆಯಿತ್ತು. ತಮ್ಮ ಈ ನಂಬಿಕೆಗಳನ್ನು ಜೀವನಶ್ರದ್ಧೆಯನ್ನು ಅಭಿವ್ಯಕ್ತಿಯ ಸಮರ್ಥ ಮಾಧ್ಯಮವೆಂದು ಅವರು ಭಾವಿಸಿದ್ದು, ಅವುಗಳನ್ನು ಕಾದಂಬರಿಗಳಲ್ಲಿ ಬಿಂಬಿಸುವ ಪ್ರಯತ್ನ ಮಾಡಿದರು. ಕನ್ನಡ ಸಾಹಿತ್ಯದಲ್ಲಿನ ಎಲ್ಲ ಚಳವಳಿಗಳಿಗೂ ಪ್ರತ್ಯೇಕ ಸಾಕ್ಷಿಯಾದರೂ ಯಾವುದೇ ಒಂದು ಚಳವಳಿಯ ಸಿದ್ಧಾಂತಕ್ಕೆ ಬದ್ಧರಾಗದೆ ತಮ್ಮ ಸ್ವತಂತ್ರ ವಿಚಾರ, ಆಲೋಚನೆ, ನಂಬಿದ ಮೌಲ್ಯಗಳ ನಿರ್ದೇಶನದೊಂದಿಗೆ ಸೃಜನಶೀಲ ಚಟುವಟಿಕೆಗಳನ್ನು ಮುಂದುವರೆಸಿಕೊಂಡು ಹೋದರು. ಕೆಲವರು ವಿಮರ್ಶಕರ ದೃಷ್ಟಿಯಲ್ಲಿ ಇನಾಂದಾರರ ಕಾದಂಬರಿಗಳು ವೈಚಾರಿಕ ನೆಲೆಯಲ್ಲಿ ಸೋಲುತ್ತವೆ ಎನ್ನುವ ಅಪವಾದವಿದೆ. ವೈಚಾರಿಕತೆಯ ಅಗತ್ಯವನ್ನು ಲೇಖಕರು ಒಪ್ಪುತ್ತಾರಾದರೂ, ವೈಚಾರಿಕತೆಯೇ ವಿಜೃಂಭಿಸುವುದನ್ನು ಒಪ್ಪುವುದಿಲ್ಲ. ಅದು ಅತಿಯಾಗಿ ಕಾಣುವಂತೆ ಇರಬಾರದೆಂಬುದೇ ಅವರ ನಿಲುವು. ಇನಾಂದಾರರಿಗೆ

ಕಾದಂಬರಿಯ ಸ್ವರೂಪ, ಅದರ ರಚನೆಯ ರೀತಿ ಎಲ್ಲದರ ಬಗ್ಗೆ ಸ್ಪಷ್ಟವಾದ ಕಲ್ಪನೆಯಿತ್ತು.

ಒಂದು ಸಂದರ್ಶನದಲ್ಲಿ **'ಕಾದಂಬರಿ'** ಹೇಗೆ ಬರೆಯುತ್ತೀರಿ? ಎಂಬ ಪ್ರಶ್ನೆಗೆ, ಇನಾಂದಾರರು ಹೀಗೆ ವಿವರಿಸಿದ್ದಾರೆ. 'ಕಾದಂಬರಿ ಹೇಗೆ ಮೂಡುತ್ತದೆ ಎಂದು ಹೇಳಲಿಕ್ಕೆ ಆಗುವುದಿಲ್ಲ. ಎಷ್ಟೋ ಸಲ ಎಲ್ಲೋ ಒಂದು ನೋಡಿದ್ದು ಮನಸ್ಸಿನಲ್ಲಿರುತ್ತದೆ, ಅದು ಬಹಳ ಅರ್ಥಪೂರ್ಣವಾಗಿ ಕಾಣಬಹುದು. ಸಾಮಾನ್ಯವಾಗಿ ಘಟನೆಯ ದೃಷ್ಟಿಯಿಂದಲ್ಲದಿದ್ದರೂ ಅರ್ಥದ ದೃಷ್ಟಿಯಿಂದ ಮುಖ್ಯ ಅಂತ ಅನ್ನಿಸುತ್ತದೆ. ಸನ್ನಿವೇಶಗಳನ್ನು ಕುರಿತು ಆಲೋಚನೆ ಮಾಡುತ್ತಿದ್ದ ಹಾಗೆ ಉಳಿದ ಪಾತ್ರಗಳೂ ಅದರೊಡನೆ ಬೆಳೆದುಕೊಂಡು ಬರುತ್ತವೆ. ಎಷ್ಟೋ ಸಲ ಒಂದು ಪಾತ್ರವನ್ನು ಎಲ್ಲೋ ನೋಡ್ತೇವೆ. ಅದರ ಹಿನ್ನಲೆಯಲ್ಲಿ ಈ ಮನುಷ್ಯ ಎಂಥವನಿರಬಹುದು, ಇವನ ಮನೆ, ಸಂಸಾರ ಹೇಗಿರಬೇಕು, ಜೀವನ ಹೇಗಿರಬಹುದು ಅಂತನ್ನೋದನ್ನು ಒಂದು ಪಾತ್ರ ನೋಡಿಯೇ ಊಹಿಸಬೇಕಾಗುತ್ತದೆ' ಎಂದೆಲ್ಲ ವಿವರಿಸಿ ಕಾದಂಬರಿ ಹುಟ್ಟು ಪಡೆಯಬಹುದಾದಕ್ಕೆ ಹಿನ್ನೆಲೆಯ ಕಾರಣಗಳನ್ನು ಸ್ಪಷ್ಟಪಡಿಸುತ್ತಾರೆ.

ಬರವಣಿಗೆಯ ಮೂಲಕ ಅಪಾರ ಜನಮನ್ನಣೆಗಳಿಸಿದ್ದರೂ ಜನಸಂಪರ್ಕ, ಸ್ನೇಹ ಸಂಬಂಧಗಳ ವಿಚಾರದಲ್ಲಿ ಅವರದು ಒಂದು ಬಗೆಯ ಗಾಂಭೀರ್ಯ. ಮಾತಿಗಿಂತ ಮೌನವೇ ಅವರಿಗೆ ಪ್ರಿಯವೆನಿಸಿತ್ತು. ಮಾತಾಡಲೇ ಬೇಕಾದ ಅನಿವಾರ್ಯತೆ ಉಂಟಾದಾಗ ಹಿತಮಿತವಾದ ಮಾತಷ್ಟೇ ಅವರಿಂದ ನಿರೀಕ್ಷಿಸಬಹುದಾಗಿತ್ತು. ಅವರು ಬಹಳ ಶಿಸ್ತಿನ ಮನುಷ್ಯ. ಸುತ್ತಲಿನವರಿಂದಲೂ ಅದೇ ಬಗೆಯ ಶಿಸ್ತನ್ನು ನಿರೀಕ್ಷಿಸುತ್ತಿದ್ದರು.

ಇನಾಂದಾರ್ ನಿಧನರಾದುದು 26ನೇ ಜನವರಿ 1986ರಲ್ಲಿ ಇನಾಂದಾರ್ ಅವರು ಜನಿಸಿ ನೂರು ವರ್ಷಗಳಾದವು. ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ ಅವರ ಸಾಹಿತ್ಯ-ಸಾಧನೆ ನೆನಪಿಸಿಕೊಳ್ಳಬೇಕಿದೆ. ಅವರ ಸಾಹಿತ್ಯಾವಲೋಕನ, ವಿಮರ್ಶೆ, ವಿಶ್ಲೇಷಣೆ, ಪುನರ್ ಮೌಲ್ಯೀಕರಣ ಚರ್ಚೆಗಳ ಅಗತ್ಯವಿದೆ. ಇನಾಂದಾರರ ನಿಧನದ ನಂತರ ಸಾಹಿತ್ಯ ಕ್ಷೇತ್ರದಲ್ಲಿ **"ವಿ.ಎಂ. ಇನಾಂದಾರ್ ಪ್ರಶಸ್ತಿ"**ಯನ್ನು ವಾರ್ಷಿಕವಾಗಿ ನೀಡಲಾಗುತ್ತಿದೆ.

'ಗೆಜ್ಜೆಪೂಜೆ' ಮತ್ತು 'ಶಾಪ' ಕಾದಂಬರಿಯಲ್ಲಿ ಕಂಡು ಬರುವ ಪಾತ್ರ ಚಿತ್ರಣ

'ಗೆಜ್ಜೆಪೂಜೆ' ಮತ್ತು 'ಶಾಪ' ಕಾದಂಬರಿಗಳಲ್ಲಿ ಕಂಡು ಬರುವ ಪಾತ್ರಗಳ ಸೃಷ್ಟಿಯಂತೂ ವೈವಿಧ್ಯ ಪೂರ್ಣವಾಗಿದ್ದು, ವಸ್ತು ನಿಷ್ಠತೆಯಿಂದ ಕೂಡಿದೆ. ಈ ಕಾದಂಬರಿಯ ಪಾತ್ರದ ಕೇಂದ್ರ ಬಿಂದು "ವೇಶ್ಯಾಕುಲ", "ವೇಶ್ಯೆ" ಅಥವಾ "ಸೂಳೆ" ಎಂಬ ಹೆಸರು ಈ ಕಾದಂಬರಿಗಳಲ್ಲಿ ಪ್ರಖ್ಯಾತ್ಯವಾಗಿ, ಇದರಲ್ಲಿ ಹಲವಾರು ಪಾತ್ರಗಳೂ ಜಾತಿ, ಸಂಪ್ರದಾಯ, ಆಚಾರ-ವಿಚಾರ, ಧರ್ಮ-ಅಧರ್ಮ, ಧರ್ಮ-ಕರ್ಮ, ಒಳಿತು-ಕೆಡಕು, ಸೋಲು-ಗೆಲುವು, ನ್ಯಾಯ-ಅನ್ಯಾಯ, ತ್ಯಾಗ ಹೀಗೆ ಎಲ್ಲದರ ಮಿಶ್ರಣದಲ್ಲಿ ಮನುಷ್ಯನ ಅಸ್ತಿತ್ವದಲ್ಲಿರುವ ಎಲ್ಲರ ಮುಖಗಳನ್ನು ಅತ್ಯಂತ ಸಾಮಾಜಿಕ ಆಗು-ಹೋಗುಗಳ ನಡುವೆ ಹಾಗೂ ಅತ್ಯಂತ ವಾಸ್ತವ ನೆಲೆಯಲ್ಲಿ ತೆರೆದಿಡುವ ಲೌಕಿಕ ಪ್ರಪಂಚದ ಸುತ್ತ-ವಿಚಿತ್ರ ಸಂಬಂಧಗಳು ಅವರ ಮುಖವಾಡಗಳೊಂದಿಗೆ ಹೆಣೆದುಕೊಳ್ಳುತ್ತದೆ. ಪ್ರತಿಯೊಂದು ಪಾತ್ರವೂ ಸಂದರ್ಭ ಸನ್ನಿವೇಶಕ್ಕನುಗುಣವಾಗಿ ಅದರದೇ ಆದ ವ್ಯಕ್ತಿತ್ವವನ್ನು ರೂಪಿಸಿಕೊಂಡಿದೆ. ಭಿನ್ನ ವರ್ಗಕ್ಕೆ ಸೇರಿದ ಪಾತ್ರಗಳ ಭಿನ್ನ ಜೀವನದ ಶೈಲಿಯಲ್ಲಿ ಮಾದರಿಗೊಂಡಿದೆ.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಬ್ರಾಹ್ಮಣ ಮತ್ತು ವೇಶ್ಯಾಕುಲಕ್ಕೆ ಸೇರಿದ ಪಾತ್ರಗಳು ಒಂದಕ್ಕೊಂದು ಕೊಂಡಿಯ ಹಾಗೇ ಸಂಬಂಧಗಳು ಹೆಣೆದು ಕೊಂಡಿರುವುದನ್ನು ಕಾಣಬಹುದು. ಈ ಕಾದಂಬರಿಯಲ್ಲಿ ಕೇಂದ್ರ ಪಾತ್ರವಾಗಿ ಕಂಡು ಬರುವ ವೇಶ್ಯಾಕುಲಕ್ಕೆ ಸೇರಿದ ಚಂದ್ರಾ ಪ್ರಮುಖ ಪಾತ್ರ ವಿಶಿಷ್ಟವೆನಿಸುತ್ತದೆ. ಚಂದ್ರಾನ ಸುತ್ತವೇ ಇಡೀ ಕಾದಂಬರಿಯ ಭಿನ್ನ ಸನ್ನಿವೇಶಗಳು, ಸಾಮಾಜಿಕ ಚಿತ್ರಣವೂ ಮೂಡಿಬರುತ್ತದೆ. ಇದಷ್ಟೇ ಅಲ್ಲದೇ ಇದರ ಜೊತೆಗೆ ಇನ್ನು ಹತ್ತು ಹಲವು ಪಾತ್ರಗಳೂ ಬೆಸೆದುಕೊಂಡು ಈ ಕಾದಂಬರಿ ರೂಪುಗೊಂಡಿದೆ. ಕ್ರಿಯೆ ಪ್ರಕ್ರಿಯೆಯ ಮೂಲಕ ಪ್ರತಿಪಾತ್ರವೂ ಅದರದೇ ಆದ ಮಹತ್ವ ಮತ್ತು ವಿಭಿನ್ನ ರೂಪವನ್ನು ಪಡೆದುಕೊಂಡಿದೆ.

"ವೇಶ್ಯಾ ಕುಲ", "ವೇಶ್ಯೆ" ಅಥವಾ "ಸೂಳೆ" ಇದನ್ನು ಮುಖ್ಯ ಕೇಂದ್ರವನ್ನಾಗಿಟ್ಟುಕೊಂಡು

ಕಾದಂಬರಿಯ ಪಾತ್ರಗಳು ಹಲವಾರು ಎಳೆಗಳೊಡನೆ ತನ್ನ ಪ್ರಪಂಚವನ್ನು ಅವರ ಆ ಎಲ್ಲಾ ಮುಖಗಳ ಜೊತೆಗೆ ಅಭಿವ್ಯಕ್ತಿಯಿದೆ ಹಾಗೇ ಅಭಿವ್ಯಕ್ತಿಸುವಲ್ಲಿ ಕಾದಂಬರಿಯ 'ಕ್ರಿಯೆ'ಯನ್ನು ಪ್ರಧಾನವಾಗಿ ಆಶ್ರಯಿಸುತ್ತದೆ. ಕ್ರಿಯೆಗಳನ್ನು ಸಂವಹನಗೊಳಿಸುವ ಮಾಧ್ಯಮಗಳಾಗಿ, ಕ್ರಿಯೆಯೊಳಗೆ ಪಾತ್ರಗಳು ಸ್ಥಾಪಿತಗೊಳ್ಳುತ್ತದೆ. ಈ ಕಾದಂಬರಿಯಲ್ಲೂ ನಡೆಯುವ ಘಟನೆಗಳಿಗೆ ಕ್ರಿಯೆಗಳಿಗೆ, ಘಟನೆಗಳಿಗೆ ಪಾತ್ರಗಳೂ ಮುಖ್ಯ ಕಾರಣಗಳಾಗಿರುತ್ತವೆ.

ಪ್ರತಿ ಪಾತ್ರಗಳೂ ಭೂತ-ವರ್ತಮಾನ ಮತ್ತು ಭವಿಷ್ಯತ್ ಕಾಲಕ್ಕೆ ಸ್ಪಂದಿಸುವಲ್ಲಿ ಕ್ರಿಯಾ ಶಿಖರಗಳಾಗಿರುತ್ತದೆ. ಭೂತಕಾಲದಲ್ಲಿ ಪಲ್ಲಟಗೊಳ್ಳುವುದು. ವರ್ತಮಾನ ಮತ್ತು ಭವಿಷ್ಯತ್ ಕಾಲದಲ್ಲಿ ಸೋಲು, ಹೊಸ ಜಗತ್ತಿನ ಮೂಲಕ ಆದರ್ಶ ಬದುಕಿನ ಹುಡುಕಾಟ ಮುಂತಾದ ವಿಚಾರಗಳು ಪಾತ್ರಗಳಲ್ಲಿ ಕಂಡು ಬರುತ್ತವೆ. ಪ್ರಸ್ತುತ ಗೆಜ್ಜೆಪೂಜೆ ಮತ್ತು ಶಾಪ ಕಾದಂಬರಿಯ ಪಾತ್ರಗಳಲ್ಲಿ ಅಧರ್ಮ-ಅಸತ್ಯ ಅಮಾನವೀಯತೆಗಳು, ಸಾಮಾಜಿಕವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ, ಲೈಂಗಿಕವಾಗಿ ಶೋಷಣೆಯ ದುರಂತದ ನೆಲೆ ತಾಂಡವಾಡುತ್ತಿರುವುದನ್ನು ನಾವು ಇಲ್ಲಿ ಗಮನಿಸಬಹುದು. ವೇಶ್ಯೆಯ ಬದುಕಿನ ವಾಸ್ತವ ಚಿತ್ರಣವನ್ನು ಪಾತ್ರಗಳ ಮೂಲಕ ನಿರ್ವಹಿಸಿರುವುದು ಮನೋಜ್ಞವಾಗಿದೆ.

'ಗೆಜ್ಜೆಪೂಜೆ' ಯಲ್ಲಿ ಬರುವ ಪಾತ್ರ ಚಿತ್ರಣ

ಸೋಮು : ಬ್ರಾಹ್ಮಣ ಸಮಾಜದ ಪ್ರಮುಖ ವಿಭಿನ್ನ ಸ್ವಭಾವದ ಏಕೈಕ ವ್ಯಕ್ತಿ ಸೋಮಸುಂದರ. ಅಪೇಕ್ಷಿತ ಸಂಸ್ಕೃತಿಯ ಪ್ರತಿನಿಧಿಯಂತೆ ಮೂಢಿತ ಈ ಕೆಲವು ಸಾಂಪ್ರದಾಯಿಕ ಆಚರಣೆಗಳನ್ನು ವಿಮರ್ಶಿಸಿ ಸುಧಾರಣೆಗಾಗಿ ತವಕಿಸುತ್ತಾನೆ. ಒಂದು ದಿನ ಸೋಮು ಚಿಕ್ಕ ವಯಸ್ಸಿನಲ್ಲಿ ತನ್ನ ತಾಯಿಯ ಅಜ್ಜನ ಊರಾದ ಹೊನ್ನಾವರಕ್ಕೆ ಬಂದಿರುವಾಗ ಕೊಳಚೆಯ ಮಧ್ಯೆ ಅರಳಿ ನಿಂತ ಕೆಂದಾವರೆಯನ್ನು ನೋಡಿ ತುಂಬಾ ಆಕರ್ಷಿತನಾಗುತ್ತಾನೆ. "ಒಂದು ದಿನ ಮೊಗ್ಗಾಗಿ

ಅರಳುವ ದಿನಕರನಿಗೆ ಶಿರಬಾಗುವ ಸೇವೆ ಮಾತ್ರ ಆ ತಾವರೆಯ ಬದುಕು". ಅವರ ತಾಯಿಗೆ ಆ ಕೆಂದಾವರೆಯ ಬಗ್ಗೆ ಪ್ರಸ್ತಾಪಿಸುತ್ತಾನೆ. ತಾಯಿಯು ಅದು "ಬಲಬದಿಗೆ ಬ್ರಾಹ್ಮಣರ ಅಗ್ರಹಾರದವರ ತಿಳಿನೀರಿನ ಕೆರೆ, ಎಡಬದಿಗೆ ಊರ ಶೂದ್ರಾದಿಗಳ ಉಪಯೋಗಕ್ಕೆಂದು ಒಂದು ಕೊಳಚೆಯ ಸಣ್ಣ ಕೆರೆ ಹೆಚ್ಚಾಗಿ ಅದು ಉಪಯೋಗವಾಗುತ್ತಿದ್ದು ಊರ ಹೊಲೆ ಹದಿನೆಂಟು ಜಾತಿಯ ಶೌಚ ತೊಳೆಯಲು" ಆ ಕೊಳಚೆಯ ಮಧ್ಯೆ ಒಂದೆರಡು ಸಿರಿದಾವರೆ, ಅದರ ತಂಟೆಗೆ ಯಾರು ಹೋದವರಿಲ್ಲ, ಅದನ್ನೂ ಯಾರು ಬಯಸಿದವರಿಲ್ಲ ಎಂದು ತಾಯಿ ಮುಖ ಸಿಂಡರಿಸಿ ಸೋಮುವಿನ ಮೇಲೆ ಕಿಡಿಕಿಡಿಯಾದರು. ಕೊನೆಗೂ ಸೋಮು ಗೊಲ್ಲರ ಹುಡುಗನಿಂದ ಆ ಕೆಂದಾವರೆಯನ್ನು ಕಿತ್ತಿಸಿ, ಅದರ ಸಂಭ್ರಮದ ಅನುಭವವನ್ನು ಹೇಳತೀರದು, ಈ ಸುದ್ಧಿಯು ಮನೆಯ ಹಿರಿಯರಿಗೆ ಮುಟ್ಟಿತು. ಆ ಆಚಾರಶೀಲ ಹಿರಿಯರಿಗೆ ಇದು ತೀರ ಸೇರದ ಚೇಷ್ಟೆಯಾಗಿತ್ತು, ಸೋಮುವಿಗೆ ತಾಯಿ ಚೆನ್ನಾಗಿ ಬೈಯ್ಯುತ್ತಾ ಮನೆಗೆ ಕರೆತಂದು ನೀರು ಹೊಯ್ದರು. ಈ ಘಟನೆಯನ್ನು ಸೋಮು ತಾನು ದೊಡ್ಡವನು ಆದಾಗ ನೆನಪು ಮಾಡಿಕೊಳ್ಳುವ ಸನ್ನಿವೇಶ ಮಧ್ಯದಲ್ಲಿ ಬರುವುದುಂಟು. ಸೋಮುವಿನ ತಾಯಿ – ತಂಗಮ್ಮ, ತಂದೆ – ಅವಧಾನಿಗಳು, ಅಜ್ಜಿ – ಗುಂಡಮ್ಮ, ತಂಗಿ – ಲಲಿತ. ಸೋಮು ತನ್ನ ವಿದ್ಯಾಭ್ಯಾಸವನ್ನು ಎಂ.ಎ. ರವರೆಗೆ ಮುಗಿಸುತ್ತಾನೆ. ಸೋಮು ನೆರೆಹೊರೆಯವರಾದ ಚಂದ್ರಾಳ ಮನೆಯವರು ವೇಶ್ಯೆಯವರೆಂದು ತಿಳಿದರೂ ಸಹ ಚಂದ್ರಿಯ ರೂಪಕ್ಕೆ ಸೋತು ಅವಳ ಮನಸ್ಸನ್ನು ಪಡೆಯುತ್ತಾನೆ. ತಾನು ಮಾಡುತ್ತಿರುವುದು ತಪ್ಪು, ನಾನು ಅವಳಿಗೆ ಮೋಸ ಮಾಡುತ್ತಿದ್ದನೆಲ್ಲಾ ಆದರೂ ಕೂಡ ತಾನು ಅವಳ ಬದುಕಿನಲ್ಲಿ ಎಂದೆಂದೂ ಪಡೆಯಲಿಕ್ಕೂ ಆಗಲ್ಲ ಅಂತಾ ಗೊತ್ತಿದ್ದರೂ ಕೂಡ ಅವಳ ಮೇಲೆ ಮೋಹಿಸುವುದು ಬಹಳ ತಪ್ಪು. ಸೋಮು ಅವಳ ಸೌಂದರ್ಯಕ್ಕೆ ಮನಸೋಲುತ್ತಾನೆ. ಕೊನೆಗೆ ಚಂದ್ರಿಗೆ ನೀನು ಸೂಳೆಯ ಮನೆಯವಳು ಅಂತಾ ಊರಿಗೆಲ್ಲಾರಿಗೂ ಗೊತ್ತು, ನಮ್ಮ ಮನೆಯ ಕಡೆಯವರು ಬಹಳ ಸಾಂಪ್ರದಾಯಿಕವರು ನನ್ನ ಮೇಲೆ ಯಾವತ್ತು ಆಸೆಯನ್ನುಟ್ಟುಕೊಳ್ಳಬೇಡ. ನಮ್ಮ ಕುಟುಂಬದಲ್ಲಿ ಹುಡುಕುವ ಸಾಂಪ್ರದಾಯಿಕ ಹುಡುಗಿಯನ್ನು ನಾನು ವಿವಾಹ ಮಾಡಿಕೊಳ್ಳುತ್ತೇನೆ ಎಂದು ಚಂದ್ರಿಗೆ ತಿಳಿಸುತ್ತಾನೆ. ಸೋಮುವಿನ ಕುಟುಂಬದವರು ರಾಂಪುರ ಎಂಬ ಹಳ್ಳಿಯಲ್ಲಿ ಬಾಹ್ಮಣ ಕುಟುಂಬ ವರ್ಗ ಹಾಗೂ ಸಂಪ್ರದಾಯಸ್ಥರಾದ ಚಂದ್ರಶೇಖರಯ್ಯರವರ ಮಗಳಾದ ಜಯಲಕ್ಷ್ಮಿ ವಿವಾಹವಾಗಿ

ಜೀವನ ನಡೆಸುತ್ತಾನೆ. ಆದರೆ ಎಲ್ಲೋ ಒಂದು ಕಡೆ ಚಂದ್ರಾನನ್ನು ನೋಡಿದರೆ ಅಯ್ಯೋ ಎನ್ನಿಸುತ್ತದೆ. ಏಕೆಂದರೆ ತಾನು ಮಾಡಿದ ತಪ್ಪಿಗೆ ಆಗಾಗ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತಿದ್ದ, ಚಂದ್ರಾ ಕೊನೆಗೂ 'ಗೆಜ್ಜೆಪೂಜೆ'ಗೆ ಒಪ್ಪಿಕೊಂಡು ಸಾವಿಗೆ ಶರಣಾಗುತ್ತಾಳೆ. ಒಂದು ಚೀಟಿಯಲ್ಲಿ "ನಾನು ನಿನ್ನವಳು" ಆ ದೃಶ್ಯವನ್ನು ಕೊಂಡು ಇವನ ಮನಸ್ಸು ಡೋಲಾಯಮಾನವಾಗಿ, ತನ್ನ ದೌರ್ಬಲ್ಯವನ್ನು ಮೀರಲಾಗದ ಮನುಷ್ಯನಾಗಿಯೇ ಉಳಿದು, ಕೆಡಕು ಕ್ರೌರ್ಯಗಳ ಅವಿಭಾಜ್ಯ ಅಂಗವಾಗಿ, ಸೋಮುವಿನ ಪಾತ್ರಗಳು ಸಂದರ್ಭಕ್ಕೆ ತಕ್ಕಂತೆ ಅದರದೇ ಆದ ಕ್ರಿಯೆ-ಪ್ರತಿಕ್ರಿಯೆ ನೀಡುವಲ್ಲಿ ಸೋಮುವಿನ ಪಾತ್ರ ಬಹಳ ಯಶಸ್ವಿಯಾಗಿದೆ.

ಚಂದ್ರಮತೀಂತ ಅಥವಾ ಚಂದ್ರಾ: ಚಂದ್ರಮತೀಂತ ಅನ್ನಪೂರ್ಣಳ ಮಗಳು, ತಾಯಿಯ ಮಡಿಲಲ್ಲಿ ಹೆಚ್ಚಾಗಿ ಪ್ರೀತಿ ಮಮಕಾರದಿಂದ ಬೆಳೆದವಳು ಚಂದ್ರಾ. ಐದಾರು ವರ್ಷದ ಪುಟ್ಟ ಮುದ್ದು ಹುಡುಗಿಯಾದ ಚಂದ್ರಾಳ ಕಣದ ಲಂಗ, ಹಸಿರು ವೆಲ್ವೆಟ್ ಕೋಟು, ಮೈಯಲ್ಲಿ ಪುಟ್ಟ ಪುಟ್ಟ ಒಡವೆಗಳು, ಕಿಟಕಿಯಲ್ಲಿ ಕುಲುಕಾಡುವ ಮುತ್ತಿನ ಝುಮುಕಿ, ತಾಯಿಗಿಂತ ಮುದ್ದಾಗಿರುವ ಹುಡುಗಿಯಾಗಿದ್ದಾಳೆ ಚಂದ್ರಾ. ನೀಲ ಮಣಿಯಂತಹ, ಮನಮೋಹಕ ಕಣ್ಣುಗಳು, ಚುಂಬನಕ್ಕೆ ಆಹ್ವಾನ ಕೊಡುವ ಮುದ್ದು ತುಟಿಗಳು, ಹುಡುಗಿಯ ಲೋಲಾಕಿನಂತೆಯೇ ಹಣೆಯ ಮೇಲೆ ನರ್ತಿಸುವ ಕುರುಳು, ಸ್ವಲ್ಪ ದೊಡ್ಡವೆನಿಸಿದರೂ ಜಗನ್ಮೋಹಕ ನಗೆಯನ್ನು ಚೆಲ್ಲುವ ಹಲ್ಲುಗಳು ಅಂತೂ ವೇಶ್ಯಾ ಲಕ್ಷಣಗಳೆಲ್ಲವೂ ಇವಳಲ್ಲಿ ಅಡಗಿದೆ", ಅದೇನು ರೂಪೋ ಈ ಹಾಳು ಜಾತಿಗೆ, ಬೆಡಗು, ಬಿನ್ನಾಣ ಎಲ್ಲಿ ಹೇಳ್ಕೊಟ್ಟಿದ್ದಕ್ಕಿಂತ ಹೆಚ್ಚಾಗಿ ಬಂದಿರುತ್ತೆ ಹುಟ್ಟೋವಾಗ್ಲೇ ಎಂದು ಅಕ್ಕಪಕ್ಕದ ಜನರು ಕೊಂಕು ಮಾತಿನಲ್ಲಿ ಆಡುವರು. ಈಕೆಯ ಅಜ್ಜಿಯಾದ ಸಂಗವ್ವ ಘಾಟಿ ಹೆಂಗಸು, ತಂದೆ ಚಂದ್ರಶೇಖರಯ್ಯ, ಚಂದ್ರಾಳ ನಾಮಾಕವಸ್ಥೆಯಲ್ಲಿ 'ಅಪ್ಪಾಜಿ" ಎಂದು ಕರೆಯುತ್ತಾಯಿದ್ದಿದ್ದು ಪುಟ್ಟಣ್ಣಶೆಟ್ಟರನ್ನು ಮನಸ್ಸಿನಲ್ಲಿ ಒಪ್ಪಿಕೊಳ್ಳಲು ಕೊನೆಗೂ ಸಾಧ್ಯವೇ ಆಗಲಿಲ್ಲ.

ಮೈಸೂರಿನಲ್ಲಿರುವ ಅಂಬಾವಿಲಾಸ ಅಗ್ರಹಾರದ ನಾಲ್ಕು ರಸ್ತೆಗಳು ಸೇರುವ ಒಂದು ಬದಿಯ ಮೂಲೆ ಮನೆಯೇ ಚಂದ್ರಾಳ ಮನೆ. ನಿಷ್ಠಾವಂತ ಶ್ರೋತ್ರೀಯರಿರುವ ಈ ಬ್ರಾಹ್ಮಣ ಅಗ್ರಹಾರದ

ತೆಂಗಸರ ಮಧ್ಯಕ್ಕೆ ಕೊನೆಗೂ ವೇಶ್ಯೆಯ ಮನೆಯಾಗಿ ಇವರು ಜೀವನ ನಡೆಸಬೇಕಾಯಿತು. ಚಂದ್ರಾಳ ಮನೆಯ ಸುತ್ತಮುತ್ತಲಿನ ತನ್ನ ಸಮ ವಯಸ್ಕರರೊಡನೆ ಆಟಪಾಠ, ಕುಣಿತದಲ್ಲೂ ಎಲ್ಲರೊಡನೆ ಬೆರೆತು ಸಂಭ್ರಮಿಸುತ್ತಿದ್ದಳು. ಚಂದ್ರಾಳ ಸ್ನೇಹಿತರಾದ ಲಲಿತೆ, ವಿಶಾಲಿ, ಮಾಲತಿ ಮತ್ತು ಸೋಮು. ಚಂದ್ರಾ ಏನೂ ಅರಿಯದ ಮುಗ್ಧ ಹುಡುಗಿ, ಚಂದ್ರಿ ಮತ್ತು ಲಲಿತೆಯರು ಮಿಡ್ಲ್‌ಸ್ಕೂಲಿಗೆ ಬಂದಿದ್ದಾಗ ಈ ಹುಡುಗಿಯರಿಬ್ಬರೂ ಸಂಗೀತಾ ಕಲಿಯಲಾರಂಭಿಸಿದರು. ನಂತರ ಕಸೂತಿ, ಸಂಗೀತ ಪಾಠ – ಪ್ರವಚನಗಳಲ್ಲಿ ಲಲಿತಾ ಮತ್ತು ಚಂದ್ರಾ ಇಬ್ಬರು ಜೊತೆ ಜೊತೆಯಾಗಿ ಕಲಿತಿದ್ದರು. ಒಂದೊಂದು ಸಾರಿ ಚಂದ್ರಾಳು ತನ್ನ ಚಿಕ್ಕ ವಯಸ್ಸಿನಲ್ಲಿ ತನ್ನ ಗೆಳತಿರೊಂದಿಗೆ ನಾ ಸೋಮೂನ್ನೇ ಮದ್ವೆ ಮಾಡ್ಕೋತೀನಿ, ಅವನನ್ನು ನೋಡಿದರೆ ಇವಳಿಗೆ ಏನೂ ಆನಂದ, ದಿನಕ್ಕೆ ಒಂದು ಸಾರಿಯನ್ನದರೂ ನೋಡಬೇಕು ಎಂಬ ಚಂಚಲ ಮನಸ್ಸು ಅವಳಾಗಿತ್ತು, ಇಲ್ಲವಾದರೇ ಅವಳ ಮನಸ್ಸಿಗೆ ಏನೋ ತಳಮಳ ಆಗುತ್ತಿತ್ತು. ತನ್ನ ಗೆಳತಿಯರೊಂದಿಗೆ ಈ ವಿಷಯವನ್ನು ಪ್ರಸ್ತಾಪಿಸಿದಾಗ ಅದರಲ್ಲಿ ಸುನಂದ ಹಂಗಿಸಿದಳು. "ಥೂ! ಸೂಳೇರನ್ನ ಯಾರೇ ಮದಿವ್ಯಾಗ್ತಾರೆ? ಸೋಮು ನಿನ್ನೇನ್ ಮದಿವ್ಯಾಗಲ್ಲ. ಹುಡುಗಿಯರೆಲ್ಲಾ ಚಪ್ಪಾಳೆ ತಟ್ಟಿ ಗಿಲಿಗಿಲಿ ನಕ್ಕರು. ಆಗ ವಿಜಯ "ಸೂಳೇ–ಸೂಳೇ ಸುಪ್ಪಾಣೆ, ಸೂಳೆ ಮನೇಲ್ ಠಿಪ್ಪಾಣಿ, ಬೇಲಿ ಮೇಲೆ ಬೆಲ್ಲ ಇಟ್ಟು ಬಾಯ್ ಮೇಲೆ ಬೆರಳಿಟ್ಟು ಥೂ ಥೂ ಥೂ" ಅಂದಾಗ ಚಂದ್ರಾಗೆ ತುಂಬಾ ಬೇಸರ ಹೊಂದುಕೊಳ್ಳುತ್ತಾಳೆ. ಚಂದ್ರಾ ಒಟ್ಟಿನಲ್ಲಿ ಕೊನೆಗೂ ಬಿ.ಎ. ಪದವಿಯಲ್ಲಿ ಫೇಲ್ ಆಗಿ ಅದರ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಹೀಗೆಯೇ ಇವರ ಜೀವನವು ನಡೆಯುತ್ತಾ ಇದ್ದಾಗ ಪುಟ್ಟಣಶೆಟ್ಟರ ನಿಧನದ ವಾರ್ತೆ ತಿಳಿಯುತ್ತದೆ. ಚಂದ್ರಶೇಖರಯ್ಯ ಒಂದು ಸಾರಿ ಅವರಜ್ಜಿಯೂ ಊರಿಗೆ ಹೋದಾಗ ಅವರ ಮನೆಗೆ ತಟ್ಟನೆ ಅಂತಾ ಪ್ರತ್ಯಕ್ಷವಾಗಿ ಬಂದರು, ಚಂದ್ರಾಳ ಅಮ್ಮ ಇವರೇ ನಿನ್ನ ನಿಜವಾದ ತಂದೆ ಎಂದಾಗ ಅವಳಿಗೆ ಉಂಟಾದ ಸಂತೋಷ ಹೇಳತೀರದು. ಯಾಕೆಂದರೆ ಚಂದ್ರಶೇಖರಯ್ಯ ಒಬ್ಬ ಬ್ರಾಹ್ಮಣ ಕುಲದವನು. ಆದ್ದರಿಂದ ತಾನು ವೇಶ್ಯೆಯ ಮನೆಗೆ ಸೇರಿದ್ದವಳಲ್ಲ ನಾನು ಬ್ರಾಹ್ಮಣ ಕುಟುಂಬ ವರ್ಗಕ್ಕೆ ಸೇರಿದ್ದಾನೆ ಎಂದು "ಸಮುದ್ರದ ಅಲೆಗಳು ರಭಸದಲ್ಲಿ ಬೀಸುವ ಹಾಗೇ ಇವಳ ಮನಸ್ಸು ಅಷ್ಟು ಆನಂದದಾಯಕವಾಗಿತ್ತು". ತನ್ನ ತಂದೆಯ ಜೊತೆ ಚಿಕ್ಕ ಮಕ್ಕಳು ಕುತ್ತಿಗೆಯಲ್ಲಿ ಜೋತಾಡುವ ಹಾಗೇ ಕುಣಿದು ಕುಪ್ಪಳಿಸಿ ತಂದೆಯ ಯೋಗಕ್ಷೇಮವನ್ನು ವಿಚಾರಿಸುತ್ತಾಳೆ.

ಚಂದ್ರಶೇಖರಯ್ಯನವರು ತನ್ನ ಗುರುತಿಗಾಗಿ ಮಗಳಿಗೆ ಬೆಲೆ ಬಾಳುವ ವಜ್ರದ ಉಂಗುರವನ್ನು ಕಾಣಿಕೆಯಾಗಿ ಕೊಡುತ್ತಾರೆ. ಆ ವಜ್ರದ ಉಂಗುರವೇ ಚಂದ್ರಾಳ ಜೀವನದ ಕಥೆಯಲ್ಲಿ ಒಂದು ದುರಂತ ಎಂದು ಹೇಳಬಹುದು.

ಈ ವಿಷಯವನ್ನು ಮೊದಲು ಸೋಮುವಿಗೆ ತಿಳಿಸಬೇಕೆಂದು ಆತುರದಿಂದ ಕಾಯುತ್ತಿದ್ದಳು. ಒಂದು ದಿನ ಆ ದಿನವೂ ಬಂದಿತು. ಚಂದ್ರಾ ಸೋಮುವಿನ ಭೇಟಿಯನ್ನು ಮೂರು ಬಾರಿ ಮಾಡಿದಳು, ಮುಂದಿನ ಭೇಟಿ ಶ್ರೀರಂಗಪಟ್ಟಣಕ್ಕೆ ಹೊರಡುತ್ತಾಳೆ. ಸೋಮು ಚಂದ್ರಾಳನ್ನು ಮನಸಾರೆ ಚುಂಬಿಸಿ, ಅವಳ ಕೈ ಹಿಡಿದು ನಡೆಯುವಾಗ ಅವಳಿಗೆ ಆಗುವ ಆಹ್ಲಾದ ಹೇಳುವುದಕ್ಕೆ ಆಗುವುದಿಲ್ಲ. ದಿನವೂ ಅವನನ್ನು ನನೆಸಿಕೊಂಡು ಮೈ ರೋಮಾಂಚನಗೊಳಿಸಿಕೊಂಡು ಜೀವನ ನಡೆಸುತ್ತಿದ್ದಳು. ಅವನಿಗೆ **"ನಾನು ನಿನ್ನವಳು"** ಎಂದೂ ಹೇಳಿದಾಗ ಅವನು ಅದನ್ನು ಒಪ್ಪಿಕೊಳ್ಳುವುದಿಲ್ಲ. ಅವಳಲ್ಲಿ ಎಂಥಾ ಒಳ್ಳೆಯ ಗುಣವೆಂದರೆ ಕೆಲಸಂದರ್ಭದಲ್ಲಿ ತನಗೆ ಮೋಸವಾಗುತ್ತಿದ್ದರೂ ಕೂಡ ಅದನ್ನು ಸಹಿಸಿಕೊಂಡು ತನ್ನ ದುಃಖದ ಕಣ್ಣೀರನ್ನು ತಾನೇ ಒರೆಸಿ ಸಮಾಧಾನ ಮಾಡಿಕೊಳ್ಳುವಳು.

ಯಾಕೆಂದರೆ ಅವರು ಬ್ರಾಹ್ಮಣ ಕುಟುಂಬ ಎಂಬ ಕಾರಣದಿಂದ ಅವಳನ್ನು ತಿರಸ್ಕರಿಸುತ್ತಿದ್ದ ಹಾಗೂ ಚಂದ್ರಾ ವೇಶ್ಯೆಯ ಮನೆಯವರೆಂದು, ಹೀಗೆ ಚಂದ್ರಾಳ ಜೀವನ ಉದ್ದಕ್ಕೂ ಎಲ್ಲಾರಿಂದ ತಂದೆ, ತಾಯಿ ಮತ್ತು ಸೋಮುವಿನಿಂದ ಭಾಷೆಗಳನ್ನು ತೆಗೆದುಕೊಂಡು ಈ ವಿಷಯವನ್ನು ಯಾರ ಮುಂದೆ ತಾನು ಪ್ರಸ್ತಾಪ ಮಾಡುವುದಿಲ್ಲವೆಂದು ಹೇಳಿರುತ್ತಾಳೆ. ತಾನು ತನ್ನ ತಾಯಿಯ ಹಾಗೇ ವೇಶ್ಯೆಯಾಗಬಾರದೆಂದು ಹಠವನ್ನು ಹಿಡಿದು, ಅದನ್ನು ಮುಗ್ಧವಾಗಿ ಪ್ರಶ್ನಿಸುವ ಪಾತ್ರವಾಗಿ ಎಂ.ಕೆ. ಇಂದಿರಾರವರು ತಂದಿದ್ದಾರೆ.

ಚಂದ್ರಾಳ ಮತ್ತೊಬ್ಬಳು ಗೆಳತಿಯಾದ ಮಾಲತಿಯು ಸೈಕಾಲಜಿ (ಮನಶಾಸ್ತ್ರಜ್ಞೆ) ಡಾಕ್ಟರಾಗಿ ಓದಬೇಕು ಎಂಬ ಹಠವಿತ್ತು. ಮಾಲತಿ ಚಂದ್ರಾಳಿಗೆ ಯಾವಾಗಲೂ ಮುನ್ಸೂಚನೆ ಕೊಡುತ್ತಾಯಿದ್ದಳು ಆದರೆ ಚಂದ್ರಾ ಅದರ ಬಗ್ಗೆ ತಲೆಕೆಡಿಸಿಕೊಳ್ಳದೇ ತನ್ನ ಹಠದಂತೆಯೇ

ನಡೆದುಕೊಳ್ಳುತ್ತಿದ್ದಳು. ಚಂದ್ರಶೇಖರಯ್ಯ ಒಂದು ದಿನ ಚಂದ್ರಾಳನ್ನು ಭೇಟಿ ಮಾಡಿ ತನ್ನ ಮಗಳಾದ ಜಯಲಕ್ಷ್ಮಿಯ ಜೊತೆ ಸೋಮುವಿಗೆ ಮದುವೆಯನ್ನು ನಿಶ್ಚಯವಾಗಿದೆಯೆಂದು ತಿಳಿಸುತ್ತಾನೆ. ನಿನ್ನ ತಾಯಿಗೆ ಈ ವಿಷಯವನ್ನು ಮುಟ್ಟಿಸು, ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಬೇಕೆಂದು ಅವಳಿಂದ ಭಾಷೆಯನ್ನು ಪಡೆಯುತ್ತಾನೆ. ಇದಕ್ಕೆ ಒಪ್ಪಿಗೆ ನೀಡಿ ಹಾಗೂ ತನ್ನ ತಾಯಿಗೆ ಈ ವಿಷಯ ಮುಟ್ಟಿಸಿ, ಸೋಮುವಿನ ವಿವಾಹಕ್ಕೆ ಹೋಗಿಬರುತ್ತಾಳೆ. ಆ ಕಡೆ ತಂದೆಗೂ ಮತ್ತು ಸೋಮುವಿಗೂ ಇಬ್ಬರಿಬ್ಬರ ಫಜೀತಿ ನೋಡಿ ಒಳಗೊಳಗೇ ನಗು ಚಂದ್ರಾಳಿಗೆ.

ಚಂದ್ರಾ ತನ್ನ ಅಜ್ಜಿಗೆ ತಾನು ಮದುವೆಯಾಗಬೇಕೆಂದು ಪ್ರಸ್ತಾಪಿಸಿದಾಗ ಸಂಗವ್ವನಿಗೆ ತುಂಬಾ ಖುಷಿಯಾಗಿ ಆಕೆ ಎಂಟು ದಿನಗಳಲ್ಲಿ ಪ್ರಿಯಕರ ಅವಳನ್ನು ನೋಡಲು ಬರುವವನಿದ್ದಾನೆ. ಆತನ ಸ್ವಾಗತದ ಸಿದ್ಧತೆಗಳು ನಡೆದವು. ಇವರ ಮನೆಗೆ ನೆಂಟರಿಷ್ಟರು ಬಂದಿದ್ದರು ಯಾವಾಗಲೂ ಅವಳು ಬಿಳೀ ಸೀರೆ, ಎರಡು ಬಳೆಗಳಲ್ಲೇ ಎಲ್ಲರಿಗೂ ಕಾಣಿಸಿಕೊಳ್ಳುತ್ತಿದ್ದಳು. ಇಂದು ಅವಳು ಸಕಲಾಭರಣ ಸುಂದರಿ ಝುಗಝುಗಿಸುತ್ತಿದ್ದಾಳೆ. ಗಂಗಯ್ಯನಿಗೆ ಮುಂಚಿತವಾಗಿ ನನ್ನದಾಗಿ ಒಂದು ಮನೆ ಬೇಕು. ಒಂದು ಸೆಟ್ಟು ಒಡವೇನೂ ಬೇಕು, ಪ್ರತೀ ತಿಂಗಳು ಕಡೇಪಕ್ಷ ಒಂದಿನ್ನೂರು ರೂಪಾಯಿಯಾದರೂ ಬೇಕು ಖರ್ಚಿಗೆ, ಗಂಗಯ್ಯರವರು ಒಪ್ಪಿಗೆ ನೀಡುತ್ತಾರೆ. ಕೊನೆ ಸಲ ಮಾಲತಿ ಇವಳಿಗೆ ನೀನು ಮಾನಸಿಕವಾಗಿ ತುಂಬಾ ಬಳಲ್ತಾ ಇದ್ದೀಯ, ಒಂದ್ಸಾರಿ ಟೆಸ್ಟ್ ಮಾಡ್ಸಿ ಕೆಲವು ದಿವಸ ಟ್ಯಾಬ್ಲೆಟ್ಸ್ ತಗೊಂಡಿದ್ರೆ ಚೆನ್ನಾಗಿತ್ತು ಎಂದಾಗ ಚಂದ್ರಾ ಅವಳ ಮೇಲೆ ಹುಸು ಕೋಪ ತೋರಿಸಿ ಮನೆ ಕಡೆ ಹೊರಡುತ್ತಾಳೆ. ಸೋಮುವಿನ ಅಜ್ಜಿ, ತಂಗಮ್ಮ ಮತ್ತು ಸೋಮುವಿಗೆ ತಾನು 'ಗೆಜ್ಜೆ ಪೂಜೆ' ಮಾಡಿಸಿಕೊಳ್ಳುತ್ತಾಯಿದ್ದೀನಿ ಅಂತಾ ಹೇಳಿ ಅವರಿಗೆ ತಾಂಬೂಲವನ್ನು ಕೊಟ್ಟು ಮನೆಗೆ ಬಂದು ದೇವಾಲಯಕ್ಕೆ ಹೊರಡುವಳು. ಅಲ್ಲಿಂದ ಮನೆಗೆ ಬಂದ ಕೂಡಲೇ ಗೆಜ್ಜೆಪೂಜೆಯನ್ನು ಮಾಡಿಸಿಕೊಂಡು ಸಿಹಿ ಊಟವನ್ನು ಮಾಡಿದ ನಂತರ ಯಾಕೋ ತಲೆನೋವು ಎಂದು ಅಮ್ಮನಿಗೆ ಹೇಳುತ್ತಾಳೆ. ರಾತ್ರಿಯ ಹೊತ್ತು ಗಂಗಯ್ಯನವರು ಖುಷಿಯಾಗಿ ಬರಮಾಡಿಕೊಂಡು ತಿಂಡಿ ತಿನಿಸುಗಳನ್ನು ಕೊಟ್ಟು ತನಗೆ ಯಾಕೋ ಸ್ವಲ್ಪ ತಲೆನೋವು ತಾಯಿಯ ಹತ್ತಿರ ಹೋಗಿ ಮಾತ್ರೆಯನ್ನು ತೆಗೆದುಕೊಂಡು ಬರುವೆ ಅಂತಾ ಹೇಳಿ ವಜ್ರದ ಉಂಗುರದ

ಮುಡಿಯನ್ನು ತಿಂದು ಮೇಲಕ್ಕೆ ಬರುವವಳು. ಆಗ ಗಂಗಯ್ಯನವರು ಅವಳ ಹತ್ತಿರ ಬಂದಾಗ "ಮುಟ್ಟಬೇಡಿ ನನ್ನ! ದೂರ ಹೋಗಿ!" ಆತ ಮೆಟ್ಟಬಿದ್ದರು. ಇದ್ದಕ್ಕಿದ್ದಂತೆ ಇದೇನಾಯಿತೆಂದು ಅವಳ ಮುಖ ನೋಡಿದರು ಗಾಬರಿಯಿಂದ. ಹುಚ್ಚುರಾವು ಬಡಿದಿದೆ ಆ ಮುಖ, ಆ ಗೌರವವರ್ಣದ ಮುಖ ಕಡು ಕೆಂಪಾಗಿ ಆತ ನೋಡು ನೋಡುತ್ತಿದ್ದಂತೆಯೇ ನೀಲವರ್ಣಕ್ಕೆ ತಿರುಗತೊಡಗಿತು. ಅವಳು ತುಂಬಾ ಸಂಕಟಪಡ್ತಾ ಒದ್ದಾಡುತ್ತಿದ್ದಳು. "ಅಮ್ಮಾ, ಅಯ್ಯೋ! ಉರಿ ಉರಿ! ಎಂದು ಕಿರಿಚಿದಾಗ ಆ ಮನೆಯ ಎಲ್ಲಾ ಹೆಂಗಸರೂ ಬಂದು ಅವಳ ಸಂಕಟವನ್ನು ನೋಡಲಾಗದೇ ಎಲ್ಲಾರು ಒಂದೇ ಸಮ್ಮನೇ ಆಳುತ್ತಾಯಿದ್ದರು. ಸಂಗವ್ವ ಡಾಕ್ಟರ್ ಕರೆದುಕೊಂಡು ಬಂದು ಅವಳ ನಾಡಿ ಹಿಡಿದರು. ನಾಡಿ ಕ್ಷೀಣಿಸುತ್ತ ನಡೆದಿದೆ. ಕಣ್ಣು ಹಿಗ್ಗಿಸಿದರು, ಕಣ್ಣು ಕಾಂತಿಹೀನವಾಗುತ್ತಿದೆ. ನಾಲಿಗೆಯಲ್ಲಿ ನೀಲ ಪಟ್ಟೆ ಬಿದ್ದಿದೆ. ಏನೋ ಮಿಣಮಿಣನೆ ಹೊಳೆದಂತಾಯಿತು. ಮತ್ತೆ ಅವಳು ಹಲ್ಲು ಕಚ್ಚಿ ಮುಖ ಅತ್ತ ತಿರುಗಿಸಿದಳು. ಡಾಕ್ಟರ್ ಎದ್ದು ನಿಂತು ವ್ಯಥಿತರಾಗಿ ಹುಡುಗಿಯನ್ನು ನೋಡಿ ಹೊರಟರು. ಪೋಲೀಸರು ಬಂದು ನೋಡಿ ಎಲ್ಲಾ ಕಡೆ ಹುಡುಕಿದರು. ಚಂದ್ರಾಳ ಬೆರಳಲ್ಲಿ ವಜ್ರದ ಉಂಗುರವಿದ್ದುದು ಮಂಗಳೆಗೆ ನೆನಪು ಬಂದಿತು. ಅವಳು ಕೈ ನೋಡಿದಳು. ಚಂದ್ರಾ ಎಡಗೈ ಮುಷ್ಠಿಯನ್ನ ಬಲವಾಗಿ ಹಿಡಿದಿದ್ದಾಳೆ. ಡಾಕ್ಟರು, ಸಬ್–ಇನ್ಸ್‌ಪೆಕ್ಟರ್ ಚೀಟಿ ಓದಿ ಮುಖ ಮುಖ ನೋಡಿಕೊಂಡರು. ಎರಡು ಬದಿಯಲ್ಲಿ ಬರೆದ ನಾಲ್ಕು ಪದಗಳಲ್ಲಿ ಅವಳ ಸಾವಿನ ರಹಸ್ಯವೆಲ್ಲಾ ಅಡಗಿತ್ತು. "ಅಪ್ಪ, ನನಗೆ ಅಮೃತವಿತ್ತು, ನನ್ನ ಬದುಕನ್ನು ಪಾವನ ಮಾಡಿದಿರಿ. ನಾನು ನಿಮಗೆ ಚಿರಋಣಿ." ಮತ್ತೊಂದು ಚೀಟಿ..... "ನನ್ನ ಏಳು ಜನ್ಮಕ್ಕೂ 'ನಾನು ನಿನ್ನವಳು."

ಅಪರ್ಣಾ : ಗೆಜ್ಜೆಪೂಜೆಯ ಕಾದಂಬರಿಯಲ್ಲಿ ಅಪರ್ಣಾಳ ಪಾತ್ರ ಮುಖ್ಯವಾದುದು. ಅಪರ್ಣಾ ಚಂದ್ರಾಳ ತಾಯಿ. ತನ್ನ ಜೀವನ ಉದ್ದಕ್ಕೂ ವೇಶ್ಯಾಕುಲ ಎಂಬ ಹೆಸರು ಅಂಟಿಕೊಂಡಿರುತ್ತದೆ. ಅಪರ್ಣಾಳ ತುಂಬು ಮುಡಿಯ, ಹೊಳಪುಗಣ್ಣಿನ ಚೆಲುವೆಯವಳು. ಮೈತುಂಬ ನಿಗಿ ನಿಗಿ ಆಭರಣವಿಟ್ಟು ಕಾಂಜೀವರದ ಜರಿಯ ಸೀರೆಯುಟ್ಟಿದ್ದಾಳೆ. ಅಪರ್ಣಾಳಲ್ಲಿ ಗರತಿಯರನ್ನು ಮೀರಿಸುವಷ್ಟು ಲಕ್ಷಣಗಳು ಆಕೆಯಲ್ಲಿದ್ದವು. ಕೆನ್ನೆ ತುಂಬ ಹಚ್ಚಿದ ಅರಿಸಿನ, ದೊಡ್ಡ ಕುಂಕುಮ. ಮುಡಿ ತುಂಬ ಹೂವು, ಮೈ ತುಂಬ ಆಭರಣ. ರೇಷ್ಮೆಯ ಸೀರೆಗಳು ಯಾವ ಶ್ರೀಮಂತ

ಗೃಹಿಣಿಯರನ್ನೂ ಮೀರಿದ್ದವು ಆಕೆಯ ಗೃಹಕೃತ್ಯ. ಅದು ಸೂಳೆಯ ಮನೆ ಆದಮೇಲೆ ಹೆಚ್ಚು ಅಲಂಕೃತವಾಯಿತು. ಗೋಡೆ ಗೋಪಿಯನ್ನು ಲೇಪಿಸಿಕೊಂಡಿತು. ಕದ, ಕಿಟಕಿಗಳು ಕಲರ್ ಕಂಡವು. ಹಳೆಯ ತೂತು, ತೇಪೆಗಳೆಲ್ಲಾ ಮುಚ್ಚಿಕೊಂಡವು. ಆ ಮನೆಯ ಆಡಂಬರದಲ್ಲಿ ಉಳಿದ ಮನೆಗಳು ಮಂಕು, ಸಪ್ಪೆಯಾಗಿ ಕಂಡು ಬಂದಿತು.

ಶೈವ ಸಂಪ್ರದಾಯಿಕ ಕಟ್ಟುಕಟ್ಟಲೆಗಳನ್ನು ಚಾಚೂ ತಪ್ಪದೇ ಅನುಸರಿಸುತ್ತಿದ್ದಳು. ಈಗ ತಿರುಮಕೂಡ್ಲೂ ಸಾಹುಕಾರರು ಸದ್ಗೃಹಸ್ತರಂತೆ ಹಗಲು ಸಂಚಾರ ಇಟ್ಟುಕೊಂಡರು. ಅಪರ್ಣಾ "ಸೂಳೆಯೊಳಗಿನ ಗರತಿ". ಬ್ರಾಹ್ಮಣ ಕುಲಕ್ಕೆ ಸೇರಿದವರಾದ ಅಪರ್ಣಾಳ ತಂದೆ ತಾಯಿಯವರು ಇವಳು ಹುಟ್ಟಿದಾಗಲೇ ತನ್ನ ತಂದೆ ಮತ್ತು ತಾಯಿಯನ್ನು ಕಳೆದುಕೊಳ್ಳುತ್ತಾಳೆ. ಅಪರ್ಣಾಳನ್ನು ನೋಡಿಕೊಳ್ಳುವವರೂ ಯಾರು ಇಲ್ಲದೇ ಇರುವಾಗ ಸಂಗವ್ವ ನೋಡಿಕೊಳ್ಳುತ್ತಾಳೆ. ಆದರೆ ಹಣದ ವ್ಯಾಮೋಹ್ಯದಿಂದ ಇವಳನ್ನು ವೇಶ್ಯಾಗೆ ಒಳಪಡಿಸುತ್ತಾಳೆ. ತನ್ನ ಮನ ಮೆಚ್ಚಿಕೊಂಡ ಬ್ರಾಹ್ಮಣರ ಯುವಕನಿಂದ ಚಂದ್ರನನ್ನು ಪಡೆದಳು. ಆ ಪ್ರಿಯಕರನ ಚಿರನೆನಪಿಗೆ ಅವನ ಪ್ರತಿಬಿಂಬ ಚಂದ್ರಾವಾಗಿದ್ದಳು. ಅವನು ಸಂಸಾರಿಯಾದ. ಅಪರ್ಣಾ ಸೂಳೆಯಾಗಿ ಕೊನೆಯವರೆಗೆ ಜೀವನವನ್ನು ಮಾಡಬೇಕಾಯಿತು.

ಸಂಗವ್ವನ ಆಸೆಯ ಭಂಡಾರ ತುಂಬುವಷ್ಟು ಶ್ರೀಮಂತನಲ್ಲಿ ಚಂದ್ರಾಳ ತಂದೆ. ಅದನ್ನು ತುಂಬಿದವರು ಪುಟ್ಟಣ್ಣಶೆಟ್ಟರು. ಪರಿಣಾಮವಾಗಿ ಅಪರ್ಣಾ ಮೂಗೂರು ಬಿಡಬೇಕಾಯಿತು. ಹೇಳಿ ಕೇಳಿ ವೇಶ್ಯೆಯಾದ ಅಪರ್ಣಾ ತಾಯಿಯ ಮಾತು ಮೀರುವಂತಿಲ್ಲ. ಚಂದ್ರಾಳ ತಂದೆ ದೂರವಾಗಿದ್ದ, ಅಪರ್ಣಾ ಅಳುತ್ತಾ ಅಳುತ್ತಾ ಊರು ಬಿಟ್ಟು ಬಂದಳು. ಪ್ರೇಮಕ್ಕೆ ಮನ ತೆತ್ತು ಅದರ ಫಲ ಕೈಗೆ ಬಂದಾಗಿತ್ತು. ಈಗ ಧನಕ್ಕೆ ಮೈ ತೆತ್ತು ಇಡೀ ಬಾಳ್ವೆ ನಡೆಸಬೇಕು. ಕಲ್ಲೀಮೀಸೆಯ ಪುಟ್ಟಣ್ಣಶೆಟ್ಟರು ಅಪರ್ಣಾಳ ಮನ ತುಂಬಲಿಲ್ಲ. ತಮ್ಮ ಹಣದಿಂದ ಅವಳ ಮನೆ ತುಂಬಿದ್ದರು. ನಲವತ್ತೈದು ಮೀರಿದ ಅವರ ವ್ಯಕ್ತಿತ್ವ ಆಕರ್ಷಕವೂ ಅಲ್ಲ. ಅವರ ಥೈಲಿ ಸಂಗವ್ವನನ್ನು ಆಕರ್ಷಿಸಿತು.

ಅಪರ್ಣಾ ಹೃದಯ ಸಂಸ್ಕೃತಳು. ವೇಶ್ಯೆಯಾದರೂ ಗರತಿಯಂತೆ ಬಾಳಬೇಕೆಂಬ ಹಿರಿಯ ಬಯಕೆ ಹೊತ್ತವಳು. ಮಗು ಚಂದ್ರಾಳ ಬದುಕು ಹಸನು ಮಾಡಬೇಕೆಂಬ ಆಸೆಯ ಗೋಪುರ ಕಟ್ಟಿಕೊಂಡಳು. ಪುಟ್ಟಣ್ಣಶೆಟ್ಟರು ವಿನಾ ಮತ್ತೊಬ್ಬ ಪುರುಷರನ್ನು ಮನೆಯ ಹತ್ತಿರ ಕೂಡ ಸೇರಿಸಲಿಲ್ಲ. ಶೆಟ್ಟರೊಂದಿಗೆ ನಿಷ್ಠೆಯಿಂದ ನಡೆದುಕೊಂಡಳು. ಅವಳು ಎರಡನೆಯ ಮಡದಿಯಂತಾದಳು. ಶೆಟ್ಟರು ಸಂತುಷ್ಟರಾದರು. ಧನ-ಕನಕಗಳು ಅಪರ್ಣಾನ ಮನೆ ತುಂಬಿದವು. ಬ್ರಾಹ್ಮಣ ಕೇರಿಯಲ್ಲಿ ಅಪರ್ಣಾ ಮನೆ ವೇಶ್ಯೆಯೆಂಬುದು ತಾನಾಗಿಯೇ ಮರೆಯುವಂತಾಯಿತು.

ಅಪರ್ಣಾ ತನ್ನ ಮಗಳನ್ನು ಬಿ.ಎ. ವರೆಗೂ ಓದಿಸಿದಳು. ತನ್ನ ಮಗಳು ಅವಳಂತೆಯೇ ಆಗಬಾರದು ಅಂದುಕೊಂಡರೂ ಸಂಗವ್ವ ಅದಕ್ಕೆ ಅವಕಾಶ ಮಾಡಿಕೊಡುತ್ತಾಯಿರಲಿಲ್ಲ ಎಂದು ಮೌನವಾಗಿ ಇರುತ್ತಿದ್ದಳು. ತಿಂಗಳಿಂದ ಪುಟ್ಟಣ್ಣಶೆಟ್ಟರು ಕಾಯಿಲೆ ಬಿದ್ದು ಅಪರ್ಣಾನಳ ಮನೆಗೆ ಬರಲಿಲ್ಲ. ವಾತರೋಗದಿಂದ ಅವನ ಮೈ ಕೈ ಊದಿ ಮಲಗಿದ್ದಲ್ಲಿಂದ ಏಳುವಂತಿರಲಿಲ್ಲ. ಆ ಕಾಯಿಲೆಯ ಸಂಗತಿ ಅವರ ಒಂದು ಕಾರ್ಡಿನಿಂದ ತಿಳಿಯಿತು. ಅಪರ್ಣಾ ಸೂಳೆಯಾದರೂ ಹದಿನಾಲ್ಕು ವರ್ಷಗಳಿಂದ ತನ್ನನ್ನು ಒಂದೇ ಬಗೆಯ ಪ್ರೇಮದಿಂದ ನಡೆಸಿಕೊಂಡ ಶೆಟ್ಟರ ಬಗೆಗೆ ಅವಳ ಕೃತಜ್ಞತೆ ಬಹಳ. ಚರ-ಸ್ಥಿರ ಆಸ್ತಿಗಳಲ್ಲದೆ ಪ್ರತಿ ತಿಂಗಳೂ ಅವಳ ಜೀವನಾಂಶವಾಗಿ ಅವರಿಂದ ಇನ್ನೂರು ರೂಪಾಯಿಗಳು ಸಂಬಳದಂತೆ ಬರುತ್ತಿತ್ತು. ಶೆಟ್ಟರು ತಾವು ಕಾಯಿಲೆ ಮಲಗಿದ್ದರೂ ಒಬ್ಬ ಆತ್ಮೀಯರೊಡನೆ ಆ ಕಂತನ್ನು ಅಪರ್ಣೆಗೆ ತಲುಪಿಸಿದ್ದರು. ಬೇರೆಯವರ ಮುಖಾಂತರ ಬಂದ ಆ ಹಣ ತೆಗೆದುಕೊಳ್ಳುವಾಗ ಅಪರ್ಣೆಯ ಹೃದಯ ಕೈಗಳ ಜೊತೆಗೆ ಅವಳ ಬದುಕಿನ ಅಡಿಗಲ್ಲೂ ಅಲ್ಲಾಡಿತು. ಮರುತಿಂಗಳ ಕಂತಾಗಿ ಪುಟ್ಟಣ್ಣಶೆಟ್ಟರ ನಿಧನವಾರ್ತೆ ಅಪರ್ಣಾಳಿಗೆ ತಿಳಿಯಿತು. ಅಪರ್ಣನಿಗೆ ಅತೀವ ವ್ಯಥೆಯಾಗಿದ್ದರೂ ಅವಳು ಅಷ್ಟಾಗಿ ದುಃಖಿಸಲಿಲ್ಲ. ಬದಲು ತೀರಾ ಮೌನಿಯಾದಳು. ಒಂದು ದಿನ ಚಂದ್ರಶೇಖರಯ್ಯ ಇವರ ಮನೆಗೆ ಪ್ರತ್ಯಕ್ಷನಾಗಿ ಬರುತ್ತಾನೆ. ಚಂದ್ರಾನನ್ನು ನೋಡಿ ಆನಂದಪಟ್ಟು ಅವನಿಗೆ ನಾಲ್ಕು ಜನ ಮಕ್ಕಳು. ಹೆಂಡತಿ ಸಾವಿತ್ರಿ, ಅಪರ್ಣಾ ತಂದೆಯ ಹೆಸರನ್ನೇ ತನ್ನ ಮಗಳಿಗೆ ಇಟ್ಟಿರುತ್ತಾಳೆ. ಚಂದ್ರಶೇಖರಯ್ಯ ಮಗಳ ಜೊತೆ ಸ್ವಲ್ಪ ಹೊತ್ತು ಇದ್ದು ಹಾಗೆಯೇ ತನ್ನ ಊರಿಗೆ ಹೊರಡುತ್ತಾನೆ. ಹೀಗೆ ಅಪರ್ಣಾ ತನ್ನ ಜೀವನ

ಉದ್ವೇಗಕ್ಕೂ ಕಷ್ಟಗಳನ್ನೂ ಅನುಭವಿಸಿಕೊಂಡು ಕೊನೆಗೂ ತನ್ನ ಮಗಳು "ಗೆಜ್ಜೆಪೂಜೆ"ಗೆ ಒಪ್ಪಿಕೊಂಡಿದ್ದ ನಂತರ ಅವಳಿಗೆ ಮಾಡಿಸಿದಾಗ ಅವಳು ಕೊನೆಗೆ ತನ್ನ ತಂದೆ ಕೊಟ್ಟ ವಜ್ರದ ಉಂಗುರವನ್ನೇ ಪುಡಿಮಾಡಿ ಅದನ್ನು ಬಾಯಲ್ಲಿ ಹಾಕಿಕೊಂಡು ತನ್ನ ಪ್ರಾಣವನ್ನೇ ಕಳೆದುಕೊಳ್ಳುತ್ತಾಳೆ. ಈ ರೀತಿ ಅಪರ್ಣಾಳಿಗೆ ಹುಟ್ಟುವಾಗಿನಿಂದ ತನ್ನ ಇಡೀ ಜೀವನದಲ್ಲಿ ತುಂಬಲಾಗದ ನಷ್ಟವನ್ನು ತಂದೆ–ತಾಯಿ, ಪ್ರಿಯಕರ ಮತ್ತು ತನ್ನ ಮುದ್ದಾಗಿ ಸಾಕಿದ ಮಗಳನ್ನು ಕಳೆದುಕೊಂಡು ಅವಳ ಬದುಕಿನಲ್ಲಿ ಕಣ್ಣೀರಿನ ಧಾರೆಯಾಗಿ ಈ ಕಾದಂಬರಿಯ ಪಾತ್ರದಲ್ಲಿ ಮುಖ್ಯವಾಗಿ ಕಂಡು ಬರುತ್ತಾಳೆ.

ಚಂದ್ರಶೇಖರಯ್ಯ : 'ಗೆಜ್ಜೆಪೂಜೆ'ಯ ಕಾದಂಬರಿಯಲ್ಲಿ ಚಂದ್ರಶೇಖರಯ್ಯನವರ ವ್ಯಕ್ತಿತ್ವ ಬಹಳ ಪ್ರಮುಖವಾದ ಪಾತ್ರ ಆಗಿದೆ. ರಾಂಪುರದಲ್ಲಿ ನೆಲೆಸಿರುತ್ತಾನೆ. ಬ್ರಾಹ್ಮಣ ಕುಲಕ್ಕೆ ಹುಟ್ಟಿದ ಅಪರ್ಣಾಳು ಹುಟ್ಟುವಾಗಲೇ ತನ್ನ ತಂದೆ–ತಾಯಿಯರನ್ನು ಕಳೆದುಕೊಳ್ಳುವಳು. ಅವಳನ್ನು ಸಾಕುವವರು ಯಾರು ಇಲ್ಲದೇ ಇರುವಾಗ ಸಂಗವ್ವ ಸಾಕಿ, ತನ್ನ ದುಡ್ಡಿನ ಆಸೆಗೆ ಅವಳನ್ನು ವೇಶ್ಯೆಯನ್ನಾಗಿ ಮಾಡುವಳು. ಅಪರ್ಣಾಳನ್ನು ಮೊದಲು ಪ್ರೇಮಿಸಿ ನಂತರ ಅವಳನ್ನು ವಿವಾಹವಾಗದೇ ಸಾವಿತ್ರಿ ಎಂಬ ಮಹಿಳೆಯನ್ನು ವಿವಾಹವಾಗುತ್ತಾನೆ. ಚಂದ್ರಶೇಖರಯ್ಯರವರಿಗೆ ನಾಲ್ಕು ಜನ ಮಕ್ಕಳಿದ್ದರು. ಜಯಲಕ್ಷ್ಮಿ, ಸರಸ್ವತಿ, ಗಿರಿಜ ಮತ್ತು ನಂಜುಂಡ ತುಂಬು ಮನೆಯಲ್ಲಿ ಜೀವನ ನಡೆಸುತ್ತಿದ್ದರು. ಚಂದ್ರಶೇಖರಯ್ಯನವರ ಹಾಗೇ ಹೋಲಿಕೆ ಕಾಣುವ ಮುದ್ದಾದ ಮಗಳು ಚಂದ್ರಾ. ಆದರೆ ಅವಳನ್ನು ಮನಸ್ಸಿನಲ್ಲಿ ಒಪ್ಪಿಕೊಂಡರೇ ಸಮಾಜದಲ್ಲಿ ಅವಳು ನನ್ನ ಮಗಳು ಅಂತಾ ಹೇಳುವುದಕ್ಕೆ ಧೈರ್ಯವಿಲ್ಲ. ಅವಳಿಗೆ ತನ್ನ ಗುರುತಿಗಾಗಿ ವಜ್ರದ ಉಂಗುರವನ್ನು ಕೊಟ್ಟು ಹೋಗುತ್ತಾನೆ. ಆದರೆ ಚಂದ್ರಾಳಿಗೆ ಅದೇ ವಜ್ರದ ಉಂಗುರ ಸಾವಿಗೆ ಕಾರಣವಾಗುತ್ತದೆ. ಚಂದ್ರಾಳಿಂದ ಭಾಷೆಯನ್ನು ತೆಗೆದುಕೊಂಡಿರುತ್ತಾನೆ. ಯಾಕೆಂದರೆ ನೆರೆಹೊರೆಯವರಾದ ಸೋಮುವಿಗೆ ಜಯಲಕ್ಷ್ಮಿಯನ್ನು ಕೊಟ್ಟು ವಿವಾಹ ಮಾಡುತ್ತಾನೆ. ಕೊನೆಗೆ ಚಂದ್ರಾಳಿಗೆ ವೇಶ್ಯೆಯ ಕುಟುಂಬಕ್ಕೆ ಸೇರಿದವಳಲ್ಲ, ಬ್ರಾಹ್ಮಣ ಕುಲದವಳು ಎಂದು ಸಮಾಜದಲ್ಲಿ ತಿಳಿಸಲಾಗದೇ ಕೊನೆಗೂ 'ಗೆಜ್ಜೆಪೂಜೆಗೆ' ತಯಾರು ನಡೆಸಿ ಸೋಮುವಿನ ಮನೆಗೆ ಬಂದು

ಎಲ್ಲರ ಆಶೀರ್ವಾದವನ್ನು ಪಡೆಯುವಳು. ಕೊನೆಗೆ ತಾನು ಸಾಯುವಾಗ ತನ್ನ ತಂದೆಗೆ ಒಂದು ಚೀಟಿಯಲ್ಲಿ "ಅಪ್ಪ, ನನಗೆ ಅಮೃತವಿತ್ತು, ನನ್ನ ಬದುಕನ್ನು ಪಾವನ ಮಾಡಿದಿರಿ. ನಾನು ನಿಮಗೆ ಚಿರಋಣಿ." ಎಂದು ಬರೆದಿಡುತ್ತಾಳೆ. ಚಂದ್ರಶೇಖರಯ್ಯನವರು ಮಾಡಿದ ಒಂದು ಚಿಕ್ಕ ತಪ್ಪಿನಿಂದ ಅಪರ್ಣಾ ಮತ್ತು ಚಂದ್ರಾಳ ಇಡೀ ಅವರ ಬದುಕಿನಲ್ಲಿ 'ಗೆಜ್ಜೆಪೂಜೆ'ಗೆ ಅವರು ದಾರಿ ಮಾಡಿಕೊಟ್ಟಿದ್ದರು. ಈ ಕಾದಂಬರಿಗೆ ಇವರ ಪಾತ್ರ ಎಂ.ಕೆ. ಇಂದಿರಾರವರು ಬಹಳ ಚೆನ್ನಾಗಿ ನಿರೂಪಿಸಿದ್ದಾರೆ.

ಸಂಗವ್ವ : ಗೆಜ್ಜೆಪೂಜೆಯ ಕಾದಂಬರಿಯಲ್ಲಿ ಸಂಗವ್ವನ ಪಾತ್ರ ಬಹಳ ಪ್ರಮುಖವಾದುದು. ಸಂಗವ್ವ ಅಪರ್ಣಾಳ ಸಾಕು ತಾಯಿಯಾಗಿರುತ್ತಾಳೆ. ಬ್ರಾಹ್ಮಣ ಕುಲಕ್ಕೆ ಸೇರಿದವರಾದ, ಅಪರ್ಣಾಳು ಹುಟ್ಟಿದಾಗಲೇ ತನ್ನ ತಂದೆ ಮತ್ತು ತಾಯಿಯನ್ನು ಕಳೆದುಕೊಳ್ಳುತ್ತಾಳೆ. ಅಪರ್ಣಾಳನ್ನು ನೋಡಿಕೊಳ್ಳುವವರೂ ಯಾರು ಇಲ್ಲದೇ ಇರುವಾಗ ಸಂಗವ್ವ ನೋಡಿಕೊಳ್ಳುತ್ತಾಳೆ. ಅವಳನ್ನು ವೇಶ್ಯೆಯನ್ನಾಗಿ ಮಾಡುವುದೇ ಈ ಸಂಗವ್ವನೇ ಕಾರಣಕರ್ತಳಾಗಿರುತ್ತಾಳೆ. ಈ ಗೆಜ್ಜೆಪೂಜೆಗೆ ಕಾದಂಬರಿಗೆ ಸಂಗವ್ವನೇ ಆಧಾರ ಸ್ತಂಭ ಅಂತಾನೇ ಹೇಳಬಹುದು. ಸಂಗವ್ವನ ಆಸೆಯ ಭಂಡಾರ ತುಂಬುವಷ್ಟು ಅಪರ್ಣಾಳ ಬದುಕೇ ಉಸಿರಾಗಿದೆಂದು ಹೇಳಬಹುದು. ಚಂದ್ರಾಳ ಅಜ್ಜಿಯಾದ ಸಂಗವ್ವ, ಅವಳನ್ನು ಓದಿಸಿ, ಅದಷ್ಟು ಬೇಗ ಯಾರಾದರೂ ಶ್ರೀಮಂತ ಸಿಕ್ಕಿದ ಕೂಡಲೇ ಅವಳಿಗೆ ಗೆಜ್ಜೆಪೂಜೆ ಮಾಡಿಸಬೇಕೆಂದು ತಿಳಿದುಕೊಂಡಿದ್ದಳು. ಚಂದ್ರಾ ತಾನು ಬಿ.ಎ. ಓದಬೇಕೆಂದು ಹಠವಿಟ್ಟಳು. ಸೋಮುವಿಗೆ ವಿವಾಹವಾದ ನಂತರ ತಾನೇ ಖುದ್ದಾಗಿ ಬಂದು ತನ್ನ ಅಜ್ಜಿಗೆ ತಾನು ವಿವಾಹವಾಗಬೇಕೆಂದು ಪ್ರಸ್ತಾಪಿಸುತ್ತಾಳೆ ಮತ್ತು ಕೆಲವು ಷರತ್ತುಗಳಿಗೆ ಒಪ್ಪಿಕೊಂಡರೆ ಮಾತ್ರ ನನಗೆ ಸಾಹುಕಾರರನ್ನು ಹುಡುಕು ಎಂದು ತನ್ನ ಒಪ್ಪಿಗೆಯನ್ನು ನೀಡಿದಾಗ ಸಂಗವ್ವಳು ನಂಬಲಾಗದೇ ಅದಷ್ಟು ಬೇಗ ಇವಳಿಗೆ ಗಂಗಯ್ಯ ಎಂಬ ಸಾಹುಕಾರರನ್ನು ಹುಡುಕಿ, ಆತನಿಗೆ ಮೊದಲನೇಯ ಹೆಂಡತಿ ತೀರಿಹೋಗಿರುತ್ತಾಳೆ, ಒಂದು ಮುದ್ದಾದ ಮಗು ಇದ್ದು ಊರಿಗೆ ಜಮೀನ್ದಾರನು ಆಗಿರುತ್ತಾನೆ. ಅವನನ್ನು ತಂದು ಚಂದ್ರಾಳಿಗೆ ಗಂಟು ಹಾಕುತ್ತಾಳೆ. ಅವನು ಇವಳ

ಷರತ್ತಿಗೆ ಒಪ್ಪಿಗೆ ನೀಡಿ ಒಂದು ವರ್ಷವಾದರೂ ಅವಳನ್ನು ಮುಟ್ಟದೇ ಮತ್ತು ಅನುಭವಿಸದೇ ಅವಳು ಕೇಳಿರುವ ಎಲ್ಲಾ ಮಾತುಗಳನ್ನು ನಡೆಸಿಕೊಡುತ್ತಾನೆ. ಕೊನೆಗೆ ಸಂಗವ್ವನ ಮೊಮ್ಮಗಳು ಅಂದು ದಿನ ಗೆಜ್ಜೆಪೂಜೆಯನ್ನು ಮಾಡಿಸಿಕೊಂಡು ತನ್ನ ತಂದೆಯ ವಜ್ರದ ಉಂಗುರದ ಪುಡಿಮಾಡಿ ತಿಂದಿರುತ್ತಾಳೆ. ಕೊನೆಗೆ ತನ್ನ ಮೊಮ್ಮಗಳು ಸಾವಿಗೆ ಶರಣಾಗಿ, ಸಂಗವ್ವನಿಗೆ ತಾನು ಅಂದುಕೊಂಡಿದ್ದ ಕನಸುಗಳೆಲ್ಲಾ ನನಸು ಆಗುವ ಮುನ್ನವೇ ಆರಿಹೋಗುತ್ತದೆ. ಈ ಕಾದಂಬರಿಯಲ್ಲಿ ಹಣದ ಮೋಹ್ಯದಿಂದ ಅಪರ್ಣಾ ಮತ್ತು ಚಂದ್ರಾಳನ್ನು ವೇಶ್ಯೆಯನ್ನಾಗಿ ಮಾಡಿ ಅವರುಗಳ ಬದುಕಿನ ಉದ್ದಕ್ಕೂ ಹಾವು–ಏಣಿಯ ಆಟದ ಹಾಗೇ ಆಡಿಸಿ ಪ್ರಮುಖ ಪಾತ್ರದ ಭಿನ್ನವಾಗಿ ಕಾರಣವಾಗುತ್ತಾಳೆ.

ಲಲಿತೆ ಮತ್ತು ಮಾಲತಿ : ಗೆಜ್ಜೆಪೂಜೆಯ ಕಾದಂಬರಿಯಲ್ಲಿ ಲಲಿತೆ ಮತ್ತು ಮಾಲತಿಯ ಪಾತ್ರ ಮುಖ್ಯವಾಗಿದೆ. ಚಂದ್ರಾಳ ಗೆಳತಿಯಾರಾದ ಲಲಿತೆ ಮತ್ತು ಮಾಲತಿ. ಚಂದ್ರಾಳ ಮನೆಯ ಸುತ್ತಮುತ್ತಲಿನ ತನ್ನ ಸಮ ವಯಸ್ಕರರೊಡನೆ ಆಟಪಾಠ, ಕುಣಿತದಲ್ಲೂ ಎಲ್ಲರೊಡನೆ ಬೆರೆತು ಸಂಭ್ರಮಿಸುತ್ತಿದ್ದಳು. ಚಂದ್ರಾಳ ಸ್ನೇಹಿತರಾದ ಲಲಿತೆ, ವಿಶಾಲಿ ಮತ್ತು ಮಾಲತಿ. ಚಂದ್ರಿ ಮತ್ತು ಲಲಿತೆಯರು ಮಿಡ್ಲ್‌ಸ್ಕೂಲಿಗೆ ಬಂದಿದ್ದಾಗ ಈ ಹುಡುಗಿಯರಿಬ್ಬರೂ ಸಂಗೀತಾ ಕಲಿಯಲಾರಂಭಿಸಿದರು. ನಂತರ ಕಸೂತಿ, ಸಂಗೀತ ಪಾಠ – ಪ್ರವಚನಗಳಲ್ಲಿ ಲಲಿತಾ ಮತ್ತು ಚಂದ್ರಾ ಇಬ್ಬರು ಜೊತೆ ಜೊತೆಯಾಗಿ ಕಲಿತಿದ್ದರು. ಲಲಿತೆಗೆ ಅವರ ಮನೆಯಲ್ಲಿ ಹುಡುಗನನ್ನು ಹುಡುಕಿ ವಿವಾಹ ಮಾಡಿದರು. ನಂತರ ಚಂದ್ರಾ ಇನ್ನು ಮುಂದೆ ಓದಿದಳು. ಅಲ್ಲಿ ಮಾಲತಿಯು ಇವಳಿಗೆ ತುಂಬಾ ಅಚ್ಚುಮೆಚ್ಚಿನ ಗೆಳತಿಯಾದಳು. ಇವರಿಬ್ಬರೂ ಇವಳನ್ನು ಎಂದಿಗೂ ವೇಶ್ಯೆಯ ಮನೆಯ ಹುಡುಗಿ ಅಂತಾ ನೋಡಲಿಲ್ಲ. ಮಾಲತಿ ಸೈಕಾಲಜಿ ಮೆಡಿಕಲ್ ಮಾಡಿಕೊಂಡು ಚಂದ್ರಾಳಿಗೆ ಆಗಾಗ ಮುನ್ಸೂಚನೆ ಕೊಡುತ್ತಾಯಿದ್ದಳು. ಕೊನೆಯವರೆಗೂ ಮಾಲತಿಯ ಮಾತನ್ನು ಕೇಳದೇ ಚಂದ್ರಾ ಕೊನೆಗೂ ತನ್ನ ಜೀವನದಲ್ಲಿ ಮುಡುಕಿದಳು. ತನ್ನ ಸಾವಿಗೆ ಶರಣಾದಳು. ಇವರಿಬ್ಬರ ಪಾತ್ರಗಳು ಈ ಕಾದಂಬರಿಯಲ್ಲಿ ಬಂದು ಹೋಗುತ್ತದೆ.

ತಂಗಮ್ಮ ಮತ್ತು ಗುಂಡಮ್ಮ : ತಂಗಮ್ಮ ಮೈಸೂರಿನ ಕಡೆಯವರು. ಇವರ ಗಂಡನ ಹೆಸರು ಶೇಷವದಾನಿಗಳು. ಇವರ ಅತ್ತೆ ಗುಂಡಮ್ಮ, ಇವರಿಗೆ ಇಬ್ಬರೂ ಮಕ್ಕಳಾದ ಸೋಮು ಮತ್ತು ಲಲಿತೆ. ಬ್ರಾಹ್ಮಣ ವಂಶ ಆಗಿರುವುದರಿಂದ ತಂಗಮ್ಮ ಮತ್ತು ಗುಂಡಮ್ಮ ತುಂಬಾ ಮಡಿಯಲ್ಲಿರುವ ಹೆಂಗಸರಾಗಿದ್ದರು. ಒಂದು ದಿನ ಸೋಮು ಚಿಕ್ಕ ವಯಸ್ಸಿನಲ್ಲಿ ತನ್ನ ತಾಯಿಯ ಅಜ್ಜನ ಊರಾದ ಹೊನ್ನಾವರಕ್ಕೆ ಬಂದಿರುವಾಗ ಕೊಳಚೆಯ ಮಧ್ಯೆ ಅರಳಿ ನಿಂತ ಕೆಂದಾವರೆಯನ್ನು ನೋಡಿ ತುಂಬಾ ಆಕರ್ಷಿತನಾಗುತ್ತಾನೆ. ತಾಯಿಗೆ ಆ ಕೆಂದಾವರೆಯು ಬೇಕು ಅಂತಾ ಕೇಳುತ್ತಾನೆ. ತಾಯಿಯು ಅದು "ಬಲಬದಿಗೆ ಬ್ರಾಹ್ಮಣರ ಅಗ್ರಹಾರದವರ ತಿಳಿನೀರಿನ ಕೆರೆ, ಎಡಬದಿಗೆ ಊರ ಶೂದ್ರಾದಿಗಳ ಉಪಯೋಗಕ್ಕೆಂದು ಒಂದು ಕೊಳಚೆಯ ಸಣ್ಣ ಕೆರೆ ಹೆಚ್ಚಾಗಿ ಅದು ಉಪಯೋಗವಾಗುತ್ತಿದ್ದು ಊರ ಹೊಲೆ ಹದಿನೆಂಟು ಜಾತಿಯ ಶೌಚ ತೊಳೆಯಲು" ಆ ಕೊಳಚೆಯ ಮಧ್ಯೆ ಒಂದೆರಡು ಸಿರಿದಾವರೆ, ಅದರ ತಂಟೆಗೆ ಯಾರು ಹೋದವರಿಲ್ಲ, ಅದನ್ನೂ ಯಾರು ಬಯಸಿದವರಿಲ್ಲ ಎಂದು ತಾಯಿ ಮುಖ ಸಿಂಡರಿಸಿ ಸೋಮುವಿನ ಮೇಲೆ ಕಿಡಿಕಿಡಿಯಾದರು. ಕೊನೆಗೂ ಸೋಮು ಗೊಲ್ಲರ ಹುಡುಗನಿಂದ ಆ ಕೆಂದಾವರೆಯನ್ನು ಕಿತ್ತಿಸಿ, ಅದರ ಸಂಭ್ರಮದ ಅನುಭವವನ್ನು ಹೇಳತೀರದು, ಈ ಸುದ್ಧಿಯು ಮನೆಯ ಹಿರಿಯರಿಗೆ ಮುಟ್ಟಿತು. ಆ ಆಚಾರಶೀಲ ಹಿರಿಯರಿಗೆ ಇದು ತೀರ ಸೇರದ ಚೇಷ್ಟೆಯಾಗಿತ್ತು, ಸೋಮುವಿಗೆ ತಾಯಿ ಚೆನ್ನಾಗಿ ಬೈಯ್ಯುತ್ತಾ ಮನೆಗೆ ಕರೆತಂದು ನೀರು ಹೊಯ್ದರು. ಹೀಗೆ ತಂಗಮ್ಮನವರ ಜೀವನ. ಅವರ ಅಕ್ಕಪಕ್ಕದ ಮನೆಯ ಮುಂದೆ ವೇಶ್ಯೆಯರು ಬಂದು ನೆಲೆಸಿದ್ದಾರೆ ಎಂದು ಗೊತ್ತಾಗ ತಂಗಮ್ಮ ಮತ್ತು ಗುಂಡಮ್ಮನಿಗೆ ಇವರಿಬ್ಬರ ಮನಸ್ಸು ತುಂಬಾ ತಳಮಳಗೊಂಡಿದ್ದರು. ಅವರಿಬ್ಬರ ಮಕ್ಕಳಿಗೆ ಎಷ್ಟೇ ಹೇಳಿದರೂ ಅವರ ಮಾತು ಕೇಳದೇ ಪಕ್ಕದ ಮನೆಯ ಹುಡುಗಿಯ ಜೊತೆ ಶಾಲೆಗೆ ಹೋಗಿಬರುತ್ತಿದ್ದರು. ಹಾಗೆಯೇ ಆ ಪಕ್ಕದ ಮನೆಯ ಹುಡುಗಿಯು ಇವರ ಮನೆಗೆ ಬಂದು ಹೋಗುವುದು ಮಾಡುತ್ತಾಯಿದ್ದಳು. ಆಗ ಚಿಕ್ಕವರು ಎಂದು ತಲೆಕೆಡಿಸಕೊಳ್ಳದೆ ಹಾಗೆಯೇ ಮಕ್ಕಳು ದೊಡ್ಡವರಾದ ನಂತರ ಲಲಿತೆಗೆ ಆದಷ್ಟು ಬೇಗ ವಿವಾಹ ಮಾಡಿದರು. ಸೋಮುವಿನ ವಿದ್ಯಾಭ್ಯಾಸದ ಮುಗಿದ ನಂತರ ರಾಂಪುರದಲ್ಲಿರುವ ಒಳ್ಳೆಯ ಸಂಪ್ರದಾಯಸ್ಥ

ಮನೆತನಕ್ಕೆ ಸೇರಿದ ಹುಡುಗಿಯನ್ನು ತನ್ನ ಮನೆಗೆ ಸೊಸೆಯನ್ನಾಗಿ ಮಾಡಿಕೊಂಡರು. ಹೀಗೆ ತಂಗಮ್ಮ ಮತ್ತು ಗುಂಡಮ್ಮರವರ ಪಾತ್ರ ಈ ಕಾದಂಬರಿಯಲ್ಲಿ ಕಂಡು ಬರುತ್ತದೆ.

ಶೇಷವದಾನಿಗಳು : ಶೇಷವದಾನಿಗಳು ಬ್ರಾಹ್ಮಣ ಕುಲಕ್ಕೆ ಸೇರಿದವರು. ಅಮ್ಮ ಗುಂಡಮ್ಮ, ಹೆಂಡತಿ ತಂಗಮ್ಮ, ಇವರಿಗೆ ಇಬ್ಬರೂ ಮಕ್ಕಳಾದ ಸೋಮು ಮತ್ತು ಲಲಿತೆ. ಇವರ ಮನೆಯ ಮುಂದೆ ವೇಶ್ಯಾಕುಲ ದವರು ಬಂದು ನೆಲೆಸಿದ್ದಾರೆ ಎಂದು ತಂಗಮ್ಮ ತಿಳಿಸಿದಾಗ ಅವರಿಗೆ ಸಮಾಧಾನದ ಮಾತು ಹೇಳಿ ಸುಮ್ಮನಾಗುತ್ತಿದ್ದರು. ಮಕ್ಕಳು ದೊಡ್ಡವರಾದ ನಂತರ ಲಲಿತೆಗೆ ಆದಷ್ಟು ಬೇಗ ವಿವಾಹ ಮಾಡಿದರು. ಸೋಮುವಿನ ವಿದ್ಯಾಭ್ಯಾಸದ ಮುಗಿದ ನಂತರ ರಾಂಪುರದಲ್ಲಿರುವ ಒಳ್ಳೆಯ ಸಂಪ್ರದಾಯಸ್ಥ ಮನೆತನಕ್ಕೆ ಸೇರಿದ ಜಯಲಕ್ಷ್ಮಿಯನ್ನು ತನ್ನ ಮನೆಗೆ ಸೊಸೆಯನ್ನಾಗಿ ಮಾಡಿಕೊಂಡರು. ಹೀಗೆ ಶೇಷವದಾನಿಗಳ ಪಾತ್ರ ಈ ಕಾದಂಬರಿಯಲ್ಲಿ ಕಂಡು ಬರುತ್ತದೆ.

'ಶಾಪ' ಕಾದಂಬರಿಯಲ್ಲಿ ಬರುವ ಪಾತ್ರ ಚಿತ್ರಣ

ಮಾಧವ : ಶಾಪ ಕಾದಂಬರಿಯಲ್ಲಿ ಮಾಧವನ ಪಾತ್ರ ಬಹಳ ಪ್ರಮುಖವಾದುದು. ಮಾಧವನ ಮನಸ್ಸಿನಲ್ಲಿ ಯಾವಾಗಲೂ ಗೊಂದಲದಲ್ಲಿರುವ ವ್ಯಕ್ತಿಯಾಗಿ ಈ ಕಾದಂಬರಿಯಲ್ಲಿ ಕಂಡು ಬರುತ್ತಾನೆ. ತನ್ನ ತಂದೆಯು ದೊಡ್ಡ ವ್ಯಕ್ತಿಯಾಗಿ, ಹೆಸರು ವಾಸಿಯಾಗಿದ್ದರೂ ಸಹ ಅದು ಮಾಧವನ ಜೀವನಕ್ಕೆ ತುತ್ತಾಗಿ ಕಂಡು ಬರುತ್ತದೆ. ಅವನ ಜೀವನದಲ್ಲಿ ಒಮ್ಮೊಮ್ಮೆ ಹೆದರಿಕೆಯೂ ತಲೆದೋರಿ, ಮನಸ್ಸಿನ ದುಗುಡವನ್ನು ಇನ್ನು ಹೆಚ್ಚಾಗಿ ಇಮ್ಮಡಿಸುತ್ತಿತ್ತು. ಅಳುಕಿನ ಸ್ವಭಾವದವನಾದ್ದರಿಂದ ಮನೆಯಲ್ಲಿಯ ಸಣ್ಣಪುಟ್ಟ ಮಾತುಗಳೂ ಆತನ ಅಂತರಂಗವನ್ನು ಭೇದಿಸಿ, ಸಾವಿರ ಯೋಚನೆಗಳಿಗೆ ಆತನನ್ನು ಗುರಿಮಾಡುತ್ತಿದ್ದವು. ತನ್ನ ಮನಸ್ಸನ್ನೇ ಬಿಚ್ಚಿ ನೋಡಿ, ವಿವರಗಳನ್ನೆಲ್ಲವನ್ನೂ ತಿಳಿದುಕೊಳ್ಳಲು ಮಾಧವ ಶಕ್ತನಾಗಿದ್ದರೆ ವಿಮನಸ್ಕತೆಯ ಕಾರಣವನ್ನು ಗುರುತಿಸಬಹುದಾಗಿತ್ತು. ಆದರೆ ಸ್ವಭಾವತಃ ಆ ಶಕ್ತಿಯನ್ನು ಪಡೆಯದೆ ಒಂದು ಯೋಚನೆಯಿಂದ ನೂರು ಬಗೆಯ ಯೋಚನೆಗಳನ್ನು ಕಟ್ಟಿಕೊಂಡು. ಸಾವಿರ ರೀತಿಯಲ್ಲಿ ಸಂಕಟಪಡುವುದೇ ಮಾಧವನ ಪಾಲಿಗೆ ಕಟ್ಟಿಟ್ಟಂತಿತ್ತು. ಮನೆಯಲ್ಲಿಯ

ವಾತವಾರಣವಾದರೂ ಆತನನ್ನು ನೆಮ್ಮದಿಯಲ್ಲಿ ಇರಗೊಡುವಂತಹದಾಗಿರಲಿಲ್ಲ. ಎಷ್ಟೋ ಸಲ 'ನಾನು ಈ ಮನೆತನದಲ್ಲಿ ಹುಟ್ಟಲೇಬಾರದಾಗಿತ್ತು, ಯಾವ ಶಾಪಕ್ಕೆ ಇದು ಪ್ರಾಯಶ್ಚಿತ್ತವೋ? ಎಂದು ಮಾಧವ ನೊಂದುಕೊಂಡು ಅಂದದ್ದೂ ಉಂಟು. ಮಾಧವನಿಗೆ ದುಡ್ಡಿಗೆ ಕೊರತೆಯಿರಲಿಲ್ಲ ಅದನ್ನು ತೊರೆದು ದೂರವಾಗಿಯೇ ಇರಬೇಕು ಎಂಬ ಯೋಚನೆಯನ್ನು ಬಲಪಡಿಸುತ್ತಿತ್ತು. ಮಾಧವನಿಗೆ ಈ ಪ್ರಪಂಚದ ಅರಿವು ಬರತೊಡಗಿದ ಹಾಗೆ ಆ ಅನುಕೂಲ ಪರಿಸ್ಥಿತಿಯೇ ಆತನ ಮನಸ್ಸನ್ನು ಕೊರೆಯುತ್ತಿತ್ತು, ಮನಶ್ಯಾಂತಿಯನ್ನು ಹಾಳುಮಾಡುತ್ತಿತ್ತು. ಎಂದಿಗೊಮ್ಮೆ ಈ ಮನೆಯನ್ನು ಬಿಟ್ಟುಕೊಟ್ಟು ಹೋಗಲು ಸಾಧ್ಯವಾದೀತೆಂದು ದಾರಿಕಾಯುವಂತೆ ಮಾಡುತ್ತಿತ್ತು.

ಮನುಷ್ಯನ ಬದುಕಿನಲ್ಲಿ ಗತಕಾಲವೂ ಒಂದು ಪ್ರೇರಕವಾದ – ಶಕ್ತಿಯುತವಾದ ಅಂಶವಾಗಬಹುದು ಎಂದುಕೊಂಡು ತನ್ನ ತಂದೆ? ತನ್ನನ್ನು ತಾನೇ ಕೊಲೆಮಾಡಿಕೊಂಡನಲ್ಲವೇ? ಯಾವ ಸಾಮ್ಯವಿರದಿದ್ದರೂ ತನ್ನ ತಂದೆ ಬ್ಯಾಂಕಿನಲ್ಲಿಯ ಕಾರ್ಯಚಾಲಕನಾಗಿ ಎತ್ತಿಹಾಕಿದ ಒಂದೂವರೆಲಕ್ಷ ರೂಪಾಯಿಗಳ ಮೋಸ ಹೊರಬೀಳುವಂತಾದಾಗ ತಂದೆ ಆಕಸ್ಮಾತ್ತಾಗಿ ತೀರಿಹೋದರು. ಎದೆ ನೋವೆಂದು ರಾತ್ರಿ ಮಲಗಿದವರು ಬೆಳಗಾದಾಗ ಏಳಲೇ ಇಲ್ಲ. ನಂತರ ಇವರ ಅಣ್ಣ ತೀರಿಹೋಗುತ್ತಾನೆ. ಆದ್ದರಿಂದ ಮಾಧವನಿಗೆ ತನ್ನ ಕಕ್ಕನಾದ ರಾಮರಾಯರ ಜೊತೆ ಇರಲು ಇಚ್ಛೆ ಇರದೇ, ತನ್ನ ವಿದ್ಯಾಭ್ಯಾಸ ಮುಗಿದ ನಂತರ ಮುಂಬಯಿಗೆ ಹೊರಡುವುದು ಎಂದು ನಿರ್ಧಾರ ಮಾಡಿಕೊಳ್ಳುತ್ತಾನೆ. ತನ್ನ ತಾಯಿಯು ಮೊದಲಿನಿಂದಲೂ ಸುಖವಾಗಿರಲಿಲ್ಲ, ತಂದೆಯ ಆಸ್ತಿಪಾಸ್ತಿಯಿದ್ದರೂ ಸಹ ಅದನ್ನು ಬಳಸಿಕೊಳ್ಳದೇ ಕಕ್ಕ–ಕಕ್ಕಿಯವರು ಹೇಳಿದ ಹಾಗೇ ಇರಬೇಕಿತ್ತು ಆ ಮನೆಯಲ್ಲಿ. ತಾಯಿ ತಂದೆಯಿದ್ದಾಗೂ ಕೂಡ ಸುಖ ಪಡದೇ ಈಗಲೂ ಸಹ ಸುಖವನ್ನು ಅನುಭವಿಸದೇ ಇನ್ನೊಬ್ಬರ ಜೊತೆಯಲ್ಲಿ ಬಾಳಬೇಕಾಗಿತ್ತು.

ಕಾಲೇಜು ವಿದ್ಯಾಭ್ಯಾಸದ ಕೊನೆಯ ಮೆಟ್ಟಿಲಲ್ಲಿದ್ದನಾದ್ದರಿಂದ ಪರೀಕ್ಷೆಯಾದೊಡನೆಯೇ ಮುಂಬಯಿಯನ್ನು ಸೇರಿ, ಕೆಲಸ ಹಿಡಿಯತಕ್ಕದ್ದೆಂಬ ಯೋಚನೆಯೇ ಆತನಿಗೆ ಕತ್ತಲಲ್ಲಿ ಕೈದೀಪದಂತೆ ಹುರುಪು ಕೊಡುತ್ತಿತ್ತು. ಕಾಲೇಜಿನಲ್ಲಿ ಸಾಹಿತ್ಯ ಸಂಘದ ಕಾರ್ಯವಾಹಕ ಸಮಿತಿಯ ಕಾರ್ಯದರ್ಶಿಯಾಗಿದ್ದರಿಂದ ಯಾವುದೇ ಕಾಲೇಜಿನ ಕಾರ್ಯಕ್ರಮಗಳನ್ನು ನೋಡಿಕೊಳ್ಳಬೇಕಾಗಿತ್ತು. ಹಾಗೇ ನೋಡಿದರೆ ಸರೋಜಿನಿ ಒಬ್ಬ ಗಣ್ಯ ವಿದ್ಯಾರ್ಥಿನಿಯೆಂದು ಹೆಸರು ಗಳಿಸಿದ್ದಳು. ಆದ್ದರಿಂದ ಮಾಧವನಿಗೆ ಸರೋಜಿನಿ ಪರಿಚಿತಳಾಗಿದ್ದಳು. ಸರೋಜಿನಿಯ ವಿಷಯ ಬಂದಾಗಲೆಲ್ಲ ಅದೇಕೆ ಯಾವುದೋ ಒಂದು ತೆರದ ಪಕ್ಷಪಾತ ತನ್ನನ್ನು ಆಕೆಯ ಎಡೆಗೆ ಮನಸ್ಸನ್ನು ಕರೆಯುತ್ತಿದೆ ಎಂಬುದೇ ಆ ಯೋಚನೆ. ಹಾಗೆಯೇ ಸರೋಜಿನಿಯ ಸಲುಗೆಯು ಹೆಚ್ಚಾಗುತ್ತಾ, ಒಂದು ದಿನ ಅವಳನ್ನು ನೋಡದೇ ಇದ್ದರೆ, ಆ ದಿನ ಇಡೀ ಅವನ ಮನಸ್ಸಿಗೆ ಏನೋ ಒಂದು ತರಹ ತಳಮಳ ಆಗುತ್ತಿತ್ತು. ಮಾಧವನಿಗೆನಿಸಿತು ಸುಸೂತ್ರ ಸಾಗಿದರೆ ಎಲ್ಲವೂ ಸುಸೂತ್ರವೇ. ಎಲ್ಲಿಯಾದರೂ ಒಂದೆಡೆ ತಪ್ಪಿದರೆ ಎಲ್ಲವೂ ಹದಗೆಟ್ಟು ಎಲ್ಲ ಕಡೆಯಿಂದಲೂ ತೊಂದರೆ. ಜೀವನ ಎಂದರೆ ಬಲು ದೊಡ್ಡದಾದ ಯಂತ್ರ! ಎಲ್ಲ ಚಿಕ್ಕಮಟ್ಟ ಚಕ್ರಗಳು, ಸರಿಯಾಗಿ ಹೊಂದಿಕೆಯಾಗಿ ಕೆಲಸ ಮಾಡುತ್ತಿದ್ದಾಗ ಇಡೀ ಯಂತ್ರ ಒಂದು ಜೀವವಾಗಿ ಕೆಲಸ ನಡೆಸುತ್ತದೆ. ಎಲ್ಲಿಯಾದರೂ ಒಂದೆಡೆ ಒಂದು ಚಕ್ರ ಒಂದು ಭಾಗ ಸರಿಯಾಗಿ ಕೆಲಸಮಾಡದಿದ್ದರೆ ಇಡೀ ಯಂತ್ರವೇ ಭೂತಾಕಾರವಾಗಿ ನಿಂತುಬಿಡುತ್ತದೆ. ಎಂಥ ಸೋಜಿಗ! ಒಂದು ದಿನ ಮಾಧವನಿಗೆ ಸರೋಜಿನಿ ತನ್ನ ತಾಯಿಯ ಪರಂಪರೆ ವೇಶ್ಯೆಯ ಬಗ್ಗೆ ತಿಳಿಸಿದಾಗ, ಅವನಿಗೆ ನೂರಾರು ಯೋಚನೆಗಳು ಬಂದು ಹೋಗುತ್ತದೆ. ಈ ಸಮಾಜದಲ್ಲಿ ನಾನು ಅವಳ ಜೊತೆ ಇರುವುದಕ್ಕೆ ಬಿಡುವುದಿಲ್ಲ. ಆದ್ದರಿಂದ ಇಬ್ಬರೂ ಎಲ್ಲಾದರೂ ದೂರ ಹೋಗಬೇಕೆಂದು ನಿರ್ಧರಿಸಿದ್ದರು. ಸರೋಜಿನಿಯ ತಾಯಿ ಅನಾರೋಗ್ಯ ಇರುವುದರಿಂದ ಮುಂಬಯಿಯಲ್ಲಿರುವ ಆಸ್ಪತ್ರೆಗೆ ಹೋಗಬೇಕೆಂದಾಗ, ಮಾಧವ ನನ್ನ ಪರೀಕ್ಷೆ ಮುಗಿಸಿಕೊಂಡು ನಾನು ನೇರವಾಗಿ ಮುಂಬಯಿಗೆ ಬರುವೆನು. ನೀನು ನಿನ್ನ ತಾಯಿಯನ್ನು ಬಿಟ್ಟು ನಾವಿಬ್ಬರೂ ಹೊಸದಾಗಿ ಜೀವನ ಆರಂಭಿಸೋಣಾ ಎಂದು ಹೇಳಿದಾಗ ಸರೋಜಿನಿ ಸಂತೋಷದಿಂದ ಒಪ್ಪಿಗೆ ನೀಡಿ ಹೋಗುತ್ತಾಳೆ. ಮಾಧವ ಮುಂಬಯಿಗೆ ಹೋಗಿ ಸ್ನೇಹಿತನಾದ ಶ್ರೀಧರನನ್ನು ಭೇಟಿ ಮಾಡಿ ತನ್ನ ಕೆಲಸವನ್ನು

ಹುಡುಕುವಾಗ ತನ್ನ ತಂದೆಯ ಸ್ನೇಹಿತರಾದ ದೇಶಪಾಂಡೆಯವರು ನಿನ್ನ ತಂದೆಗೆ ಪರಮ ಸ್ನೇಹಿತರಾಗಿದ್ದರು. ನಿನ್ನ ತಂದೆಯ ವಿಷಯದಲ್ಲಿ ತುಂಬಾ ಗೌರವವನ್ನಿಟ್ಟುಕೊಂಡಿದ್ದಾರೆ ಅವರ ಬಳಿ ಹೋಗು ಬ್ಯಾಂಕಿನಲ್ಲಿ ನಿನಗೆ ಕೆಲಸವನ್ನು ಕೊಡಿಸುವರು ಶ್ರೀಧರ ನಿನ್ನ ತಂದೆ ನಿಜವಾಗಲೂ ದೇವರಂಥ ಮನುಷ್ಯ, ಅವರಿಂದ ಇವತ್ತು ನಾನು ಈ ಡಾಕ್ಟರ್‌ನಾಗಿದ್ದೇನೆ. ಎಷ್ಟು ಜನರಿಗೆ ಅವರು ದಾರಿದೀಪವಾಗಿದ್ದಾರೆ ಎಂದರೂ ಮಾಧವ ತನ್ನ ತಂದೆಯ ಹೆಸರನ್ನು ಹೇಳಿದರೆ ಮೊದಲೇ ಕೋಪ, ಇನ್ನು ಅವರ ಹೆಸರಿನಲ್ಲಿ ನಾನು ಬದುಕುವುದು ಸಾಧ್ಯವಿಲ್ಲ, ನಾನು ಸ್ವತಂತ್ರವಾಗಿ ಬದುಕುಬೇಕೆಂಬ ಹಂಬಲದಿಂದ ಇಲ್ಲಿಗೆ ಬಂದಿದ್ದೇನೆ. ಶ್ರೀಧರ ಯಾಕೆ ನೀನು ನಿನ್ನ ತಂದೆಯ ಬಗ್ಗೆ ಇಷ್ಟು ಕೋಪ, ತಾತ್ಸರ? ಆ ಒಂದು ವಿಷಯವನ್ನು ಬಿಟ್ಟು ಬೇರೆ ವಿಷಯವಿದ್ದರೆ ಹೇಳು. ಆಗ ಶ್ರೀಧರ ತನ್ನ ಆಸ್ಪತ್ರೆಯಲ್ಲಿ ವಿಚಿತ್ರವಾದ ಕಾಯಿಲೆಬೇನೆ ಹೊಂದಿರುವ ಒಂದು ಹೆಂಗಸು ಬಂದಿದ್ದಾರೆ, ಆಕೆಯ ದೇಹದ ರಕ್ತವೆಲ್ಲಾ ಕೆಟ್ಟಿರುವ ರಕ್ತ, ಜನ ಜೀವನಗೋಸ್ಕರ ವೇಶ್ಯೆಯಲ್ಲಿದ್ದು ಈಗ ಆರೋಗ್ಯವನ್ನು ಕೆಡಿಸಿಕೊಂಡು, ತನ್ನ ಮಗಳಿಗೂ ಕೂಡ ಅದೇ ಕಾಯಿಲೆಯು ಇದೆ ಎಂದಾಗ ಒಂದು ಕ್ಷಣ ಮಾಧವನಿಗೆ ಜೀವ ಹೋದಂಗೆ ಆಯಿತು, ಅವರು ಯಾರು ಎಂದು ಗೊತ್ತಾಗಿ ಆ ಕ್ಷಣ ಏನು ಮಾತಾಡದೇ ಹಾಗೆಯೇ ನಿಟ್ಟುಸಿರು ಬಿಡುತ್ತಾನೆ. ಅವರು ಇನ್ನು ಆಸ್ಪತ್ರೆಯಲ್ಲಿಯೇ ಉಳಿದಿದ್ದಾರೆಯೇ ಎಂದಾಗ ಶ್ರೀಧರ ಇಲ್ಲ ಅವರನ್ನು ನಿನ್ನೆಯೇ ಡಿಸ್‌ಚಾರ್ಜ್ ಮಾಡಿಸಲಾಯಿತು. ಹಾಗಾದರೆ ಒಂದು ಸಾರಿ ನಾನು ಸರೋಜಿನಿಯನ್ನು ಭೇಟಿಯಾಗಬೇಕೆಂದು ಮನಸ್ಸು ಒದ್ದಾಡುತ್ತಿರುವಾಗ ಊರಿಂದ ಭೀಮಣ್ಣನಿಂದ ಟ್ರಂಕಲ್ ಬರುತ್ತದೆ, ನೀನು ಆದಷ್ಟು ಬೇಗ ಊರಿಗೆ ಬಾ ಅಂತಾ, ತಕ್ಷಣ ಊರಿಗೆ ಬಂದಾಗ ಕಕ್ಕನು ಅಲ್ಲಿಗೆ ಬಂದು ಎಲ್ಲರ ಮೇಲೆ ಗಲಾಟೆ ಮಾಡಿ ಮಾಧವನಿಗೆ ಬೇಕಾದ ತೋಟ ಮತ್ತು ಸ್ವಲ್ಪ ಆಸ್ತಿಯನ್ನು ಕೊಡುತ್ತಾನೆ. ಮಾಧವನಿಗೆ ಬಂದ ತೋಟವನ್ನು ರಂಗಸಾನಿ ಮತ್ತು ಸರೋಜಗೆ ಕೊಡಬೇಕೆಂದು ಭೀಮಣ್ಣನಿಗೆ ಹೇಳಿ ಆಕೆಯು ನನ್ನ ತಂಗಿಯಾಗುವಳು. ಅವಳ ಮುಂದಿನ ಜೀವನಕ್ಕೆ ಈ ತೋಟವನ್ನು ಕೊಡುವುದಕ್ಕೆ ಭೀಮಣ್ಣನಿಂದ ಅಪ್ಪಣೆ ಪಡೆದು ಸರೋಜಿನಿ ಇದ್ದ ಕಡೆಗೆ ಹೋಗಿ, ನಾನು ನಿನ್ನ ಜೊತೆಯಾಗಿ ಕೊನೆಯುವರೆಗೂ ಇರುವೆನು ತೆಗೆದುಕೋ ಈ ಪತ್ರವನ್ನು, ರಂಗಸಾನಿಗೆ ಸರೋಜ ನನ್ನ ತಂಗಿ ಎಂದು ಹೇಳಿದಾಗ ಈ ವಿಷಯವನ್ನು ಕೇಳಿ ಅವಳ ಮನಸ್ಸಿಗೆ ಚುಚ್ಚಿದ ಹಾಗೇ.

ಕೊನೆಗೆ ಮಾಧವ ತನ್ನ ತಂದೆಯ ರಕ್ತದಿಂದ ಬಂದ ಗುಣವನ್ನು ತಾನು ನೆನೆದುಕೊಂಡು, ತನ್ನ ತಂದೆ ಮಾಡಿದ ತಪ್ಪಿಗೆ ಈತನು ಪಶ್ಚಾತ್ತಾಪಪಟ್ಟುಕೊಂಡು ಯಾರು ಮಾಡಿದ ತಪ್ಪಿಗೆ ಶಾಪವಾಗಿ ಅನುಭವಿಸುತ್ತಾ ಇರುವವರು ಯಾರು? ಮಾಧವ ತಾನು ಬಯಸಿದ್ದು ಒಂದು ಆದರೆ ದೈವ ಬಯಸುವುದು ಮತ್ತೊಂದು, ಮಾಧವನ ಜೀವನದಲ್ಲಿ ನಡೆಯುವುದು ಹಾಗೆಯೇ! ಹೀಗೆ ಲೇಖಕರು ಶಾಪದ ಕಾದಂಬರಿಯಲ್ಲಿ ಮಾಧವನ ಪಾತ್ರ ಮೊದಲ ವ್ಯಕ್ತಿಯ ಪಾತ್ರವಾಗಿ ಕಂಡು ಬಂದಿದೆ.

ಸರೋಜಿನಿ : ಸರೋಜಿನಿ ರಂಗಸಾನಿಯ ಮಗಳು. ರಂಗಸಾನಿ ವೇಶ್ಯೆಯ ಹೆಂಗಸು. ಸರೋಜಳ ಜೀವನದಲ್ಲಿಯ – ತನ್ನ ತಲೆಮಾರಿನ ಜೀವನದಲ್ಲಿಯ ಭೀಕರತೆಯನ್ನು ನೋಡಲಾರದವಳಾಗಿ ಆಕೆ ಹಾಗೆ ಕಣ್ಣು ಮುಚ್ಚಿದ್ದಳೆಂದೂ ಹೇಳಬಹುದಿತ್ತು. ಯಾವ ಒಂದು ಪರಂಪರೆಯನ್ನು ಮುರಿದು ಸುಖವಾಗಿ ಬಾಳಬೇಕೆಂಬ ಬಯಕೆಯಿಂದ ಸರೋಜಿನಿ ತನ್ನ ವಿದ್ಯಾಭ್ಯಾಸಕ್ಕಾಗಿ ಕಾಲೇಜಿಗೆ ಬಂದಿದ್ದಳೋ ಆ ಬಯಕೆಯನ್ನು ಸಾಧ್ಯವಿದ್ದ ಯುಕ್ತಿಗಳೆಲ್ಲವನ್ನೂ ಪ್ರಯೋಗಿಸಿ ತಾಯಿ ಮಣ್ಣುಗೂಡಿಸಬೇಕೆನ್ನುತ್ತಿರುವಂತಿತ್ತು. ರಂಗಸಾನಿ ತನ್ನ ಮಗಳ ಧ್ಯೇಯವನ್ನು ಬೆಳೆಯಗೊಡದೆ ಅದನ್ನು ಚಿಗುರುವಾಗಲೇ ಚಿವುಟಿಹಾಕಬೇಕೆಂದು ಹೊಂಚು ಹಾಕಿದ ಪ್ರಪಂಚವನ್ನು ನೋಡುವುದೇ ಬೇಡ ಎಂದು ಕಣ್ಣು ಮುಚ್ಚಿದಳು. ಪರೀಕ್ಷೆ ಸಮೀಪಿಸಿದಂತೆ ವಸತಿಗೃಹದ ವಾಸವೂ ಕೊನೆಯ ತಿಂಗಳಿಗೆಂದು ಸರೋಜಿನಿ ತಾಯಿಯ ಹತ್ತಿರ ಹಣ ಕೇಳಿದ್ದಳು, ಹಣ ಸರೋಜಿನಿಯ ಕೈಗೆ ತಲುಪುವಾಗಲೆಲ್ಲವೂ ತಾಯಿ ತನ್ನ ಕೈವಾಡವನ್ನು ತೋರಿಸುತ್ತಿದ್ದಳು. ತನ್ನಿಂದ ದೂರವಾಗಬಹುಸುತ್ತಿದ್ದ ಮಗಳನ್ನು ಹಿಡಿದು ಹತ್ತಿರವಿರಿಸಿಕೊಳ್ಳಬೇಕೆನ್ನುತ್ತಿದ್ದಳು. ಅವಳ ಮನೆಯಲ್ಲಿ ಮೂರು ನಾಲ್ಕು ತಲೆಮಾರುಗಳಿಂದಲೂ ನಡೆದು ಬಂದ ಸೂಳೆಗಾರಿಕೆಯ ಪರಂಪರೆಯನ್ನು ಮುಂದುವರಿಸುವ ಅಸಂಸ್ಕೃತವಾದ ಆಸೆಯಾಗಿತ್ತು. ಇದನ್ನು ನೆನೆದಾಗ ಸರೋಜಿನಿಯೆಂದುಕೊಳ್ಳುತ್ತಿದ್ದಳು. 'ಈಕೆ ನನ್ನ ತಾಯಿಯಲ್ಲ! ನನ್ನ ಜನ್ಮದಾರಭ್ಯದ ವೈರಿ! ಪಾಪದ ದಾರಿಗೆ ನೂಕುವ ಈ ಶಕ್ತಿ ನನ್ನ ಜನ್ಮಕ್ಕೊಂದು ಶಾಪ! ಎಂದು

ಮರುಗುತ್ತಿದ್ದಳು. ಅದೇ ಊರಿನಲ್ಲಿ ವಕೀಲಿಯ ವ್ಯವಸಾಯದ ನೆಪದಿಂದ ಸುಖವಾಗಿ ಕಾಲ ಕಳೆಯುತ್ತಿದ್ದ ಗೋವಿಂದಗೌಡರ ಕಡೆಯಿಂದ ತೆಗೆದುಕೊಳ್ಳಬಹುದೆಂದು ತಾಯಿ ಬಯಸಿದ್ದಳು. ತಾಯಿಯ ಬಯಕೆಗೆ ಹತ್ತು ಬಗೆಯಲ್ಲಿ ಸಹಕಾರವನ್ನು ನೀಡಿ ತನ್ನ ಸ್ವಾರ್ಥವನ್ನು ಸಾಧಿಸಬೇಕೆಂದಿದ್ದ ಗೋವಿಂದಗೌಡನೂ ತನ್ನ ಬದುಕಿನಲ್ಲಿಯ ಒಂದು ವಿಷಮಶಕ್ತಿಯೆಂದು ಭಾವಿಸಿದ ಸರೋಜಿನಿ ಈ ಇವರಿಬ್ಬರೂ ಹರಡುತ್ತಿದ್ದ ಬಲೆಗಳನ್ನು ದಾಟಿಹೋಗುವುದು ಎಂದಾದರೂ ಸಾಧ್ಯವಾಗಬಹುದೆಂದು ಗೌಡನ ಇಂಗಿತವಿದ್ದಿತೆಂಬುದೂ, ಆಕೆ ಕಾಲೇಜಿಗಾಗಿ ತಮ್ಮ ಊರಿಗೆ ಬಂದರೆ ಎಲ್ಲವೂ ಸರಿಹೋಗುವುದೆಂದೂ, ತಾನು ಆಕೆಯ ವೆಚ್ಚವನ್ನೆಲ್ಲ ವಹಿಸಿಕೊಳ್ಳುತ್ತೇನೆಂದು ಹೇಳಿದನು. ಸರೋಜಿನಿಗೆ ಮೂರು-ನಾಲ್ಕು ಸಂದರ್ಭಗಳಲ್ಲಿ ಗೌಡನ ಕೈಗೆ ಸಿಕ್ಕು ಏನಾದರೂ ಹೇಳಿ ಪಾರಾಗಬೇಕಾದರೆ ಸರೋಜಿನಿಗೆ ಸಾಕಾಗಿಹೋಗಿತ್ತು. ಇಂಥ ಪ್ರತಿಯೊಂದು ಸಂದರ್ಭದಲ್ಲಿಯೂ ಆಕೆ ಅಂದು ಕೊಳ್ಳುತ್ತಿದ್ದಳು: 'ಸೂಳೆಗಾರಿಕೆಯಲ್ಲಿ ಹುಟ್ಟಿದ್ದೇ ಒಂದು ಶಾಪದಂತೆ ನನ್ನನ್ನು ಬೆನ್ನಟ್ಟುತ್ತಿದೆ. ಈ ಎಲ್ಲ ಚೇಷ್ಟೆಗಳಲ್ಲಿ ಗೌಡನಿಗೆ ಬುದ್ಧಿಪೂರ್ವಕವಾಗಿ ಉತ್ತೇಜನ ಕೊಡುತ್ತಿದ್ದ ನನ್ನ ಈ ತಾಯಿ ಈ ಶಾಪದ ಮೂರ್ತಸ್ವರೂಪವಾಗಿದ್ದಾಳೆ ಎಂದು ತನಗೆ ತಾನೇ ನಿಂದಿಸುಕೊಳ್ಳುತ್ತಾಯಿದ್ದಳು. ಮಾಧವನಿಗೆ ಈ ಮಾತು ತಿಳಿಸಿದಾಗ ಮಾಧವನಿಗೆ ಸರೋಜಿನಿಗೆ ತನ್ನ ಬದುಕಿನ ಅಸಹಾಯಕತೆಯ ಬಗ್ಗೆ ಕನಿಕರವೆನಿಸತೊಡಗಿತು. ಸಮಾಜದಲ್ಲಿಯ ಸ್ಥಾನಮಾನಗಳಿಗೆ ಯಾವ ಬೆಲೆ? ವ್ಯಕ್ತಿಯ ಹಿರಿಮೆಯೆ ಮುಖ್ಯ ಎಂದು ವಾದಿಸುವುದು ಮೂರ್ಖತನವೆನಿಸಿತು. ಸರೋಜಿನಿಗೆ ವ್ಯಕ್ತಿ ಹಿರಿಯದಾದರೆ ಸಮಾಜದ ಶಕ್ತಿಯೂ ತಗ್ಗಬಹುದು. ಆದರೆ ಸಮಾಜವನ್ನೇ ಬಗ್ಗಿಸಿ, ಮೀರಿ ನಿಲ್ಲುವ ಯೋಗ್ಯತೆ ತನ್ನಲ್ಲಿದೆಯೇ, ಸಮಾಜ ತನ್ನನ್ನು ನೋಡುವ ದೃಷ್ಟಿಯೆಂದರೆ ಗೋವಿಂದಗೌಡ ತನ್ನನ್ನು ನೋಡುವ ದೃಷ್ಟಿಯಲ್ಲದೆ ಬೇರೊಂದಲ್ಲ. "ಎಲ್ಲರಂತೆ ಬದುಕಬೇಕೆಂದಿರುವ ನನ್ನನ್ನು ಹಾಗೆ ಬದುಕಗೊಡಬಾರದೆಂದು ಯಾಕೆ ಯತ್ನಿಸುತ್ತಿದ್ದೀಯ? ಎಂದು ಆತನನ್ನು – ಸಮಾಜವನ್ನು – ಕೇಳುವುದು ಹೇಗೆ? ಎಂಥ ಸಂಕಟ ಬಂದರೂ ತಾಯಿಯ ಮಾತಿಗೆ ಸರಿಯಾಗಿ ವೇಶ್ಯಾವೃತ್ತಿಯ ಕೊಳಚೆಯಲ್ಲಿ ಬಿದ್ದು ಕೊಳೆಯುವ ಹಾಗಿಲ್ಲ – ಎಂದು ಇರುಳು ಕಂಡ ಬಾವಿಯಲ್ಲಿ ಹಗಲು ಬೀಳುವುದುಂಟೆ? ಹಾಗೆ ಮಾಡುವುದು ತನ್ನ

ಬುದ್ಧಿಗೆ ವಿವೇಕಕ್ಕೆ ಸ್ತ್ರೀತ್ವಕ್ಕೆ ಖಂಡಿತವಾದ ಅವಮಾನ ಎಂದುಕೊಳ್ಳುತ್ತಿದ್ದಳು. "ನಿನ್ನ ಬುದ್ಧಿಗೆ ಅವಮಾನವಾಗಬಹುದು. ಆದರೆ ನಿನ್ನ ಸ್ತ್ರೀತ್ವಕ್ಕೆ ಅವಮಾನವಲ್ಲ! ಎಂದು ಒಂದು ದನಿ ಹೇಳಿತು. ದನಿ ಗೌಡನ ದನಿಯಂತಿತ್ತು. "ನೀನು ಸ್ತ್ರೀಯಾಗಿರಬಹುದು. ಆದರೆ ನೀನು ವೇಶ್ಯೆ! ಮೂರು ನಾಲ್ಕು ತಲೆಮಾರುಗಳಿಂದ ನಿನ್ನ ನಾಳಗಳಲ್ಲಿ ವೇಶ್ಯೆಯ ರಕ್ತ ಹರಿಯುತ್ತಿದೆ" ಆ ರಕ್ತದ ಪ್ರವಾಹವನ್ನು, ಗುಣದೋಷಗಳನ್ನು ನೀನು ನಿನ್ನ ಬುದ್ಧಿವಂತಿಕೆಯಿಂದ ಬದಲಾಯಿಸಲಾರೆ!" ಹೀಗೆ ಗೌಡನು ಹೇಳಿದಾಗ ಸರೋಜಿನಿ ತನ್ನ ತಾಯಿಯನ್ನು ಮೊದಲಿಗೆ ನಿಂದಿಸಿಕೊಳ್ಳುವಳು. ನಿನ್ನ ಸಾವು ನನ್ನ ಬದುಕು.. "ಯಾರ ಸಾವು, ಯಾರ ನೋವು", ತಂದೆ – ತಾಯಿಗಳ ಪಾಪಕ್ಕೆ ಮಕ್ಕಳಿಗೆ ಪ್ರಾಯಶ್ಚತ್ತ; ಮೊಮ್ಮಕ್ಕಳು ಮರಿಮಕ್ಕಳಿಗೆ ಪ್ರಾಯಶ್ಚಿತ್ತ; ಪೂರ್ವಜರ ಪಾಪ ಉತ್ತರೋತ್ತರವಾಗಿ ಶಾಪವಾಗಿ ಪ್ರಾಯಶ್ಚಿತ್ತಕ್ಕಾಗಿ ಕಾದು ನಿಂತಿದೆ! ಗೌಡ ಕಾಮುಕ ರಾಕ್ಷಸ. ಮಾಧವ ಉದ್ಧಾರಕ ಪುರುಷ!" "ತಿಳಿದ ಮೋಸಕ್ಕಿಂತ ತಿಳಿಯದ ಮೋಸಕ್ಕೆ ಬಲಿ ಬೀಳುವುದು ತಪ್ಪಲ್ಲ!" ಸರೋಜಿನಿಯ ತಾಯಿಯ ದೇಹಸ್ಥಿತಿ ಮಾತ್ರ ದಿನದಿನಕ್ಕೆ ಕೆಡುತ್ತಯಿತ್ತು. ತಾಯಿಯ ದೇಹ ಪರೀಕ್ಷೆಗಾಗಿ ಮುಂಬಯಿಗೆ ಹೊರಡಬೇಕಾಗಿತ್ತು. ಮುಂಬಯಿಗೆ ಬಂದು ತೋರಿಸಿದಾಗ ತಾಯಿ ಗುಣಮುಖಳಾಗುವುದು ಕಷ್ಟದ ಮಾತು ಎಂದು ಡಾಕ್ಟರ್ ಹೇಳುವರು. ಆಕೆಯ ದೇಹದ ರಕ್ತವೂ ಪೂರ್ತಿಯಾಗಿ ಕೆಟ್ಟಿತು. ಮೈಯಲ್ಲಿ ರಕ್ತವೂ ಇಲ್ಲ, ಇದ್ದುದಷ್ಟೆಲ್ಲ ವಿಷ! ಈ ಕಡೆ ಗೌಡನು ಸರೋಜಿನಿಯನ್ನು ಬಲತ್ಕರಿಸಿ ಅವಳ ಜೀವನವನ್ನು ಹಾಳು ಮಾಡುವನು. ಆಕೆಯ ಮನಸ್ಸು ಇನ್ನು ಬದುಕಿ ಏನು ಎಂಬ ವೇದನೆಯೊಂದೇ ಬದುಕನ್ನು ಕನಸನ್ನಾಗಿ ಮಾಡಿ ತೋರಿಸುತ್ತಿತ್ತು. ಹಾರಿಕೊಂಡು ಜೀವಕೊಟ್ಟು ಗೌಡನ ಮೇಲೆ ಸೇಡು ತೀರಿಸಿಕೊಂಡರೆ? ಯೋಚಿಸಿ ಬೇಸರಪಟ್ಟಿದ್ದಳು. ಡಾಕ್ಟರ್ ಗೌಡನಿಗೆ ರಂಗಸಾನಿಯ ವಿಷಯ ತಿಳಿಸಿ ಆಕೆಯ ಮಗಳಾದ ಸರೋಜಿನಿಯನ್ನು ಒಂದು ಸಾರಿ ರಕ್ತದ ಪರೀಕ್ಷೆ ಮಾಡಿಸಿದ್ದಾಗ ತಾಯಿಯ ಬೇನೆಯ ತೀವ್ರ ಸ್ಥಿತಿ ಅಲ್ಲಿರದಿದ್ದರೂ ಆಕೆಯ ರಕ್ತದಲ್ಲಿಯ ಆ ವಿಷದ ಪ್ರಮಾಣ ಅಸಾಧಾರಣವಾಗಿತ್ತು. ಸರೋಜಿನಿ ವಿಷಕನ್ಯೆ, ರಕ್ತದ ಶಾಪ! ಇದು ಅನುವಂಶಿಕವಾಗಿ ರಕ್ತದಿಂದ ಬಂದದ್ದು.... ಈ ವಿಷಯು ತಿಳಿದಾಗ ಸರೋಜಿನಿಗೆ ಪ್ರಜ್ಞೆ ತಪ್ಪುವುದರಲ್ಲಿತ್ತು. "ಅಮ್ಮಾ!" ಎಂದು ಚಿಟ್ಟನೆ ಚೀರಿ, ಇದ್ದಕ್ಕಿದ್ದ ಹಾಗೆಯೇ ಕಿಟಕಿಯ ಹತ್ತಿರ ಕುಸಿದು, ನೆಲಕ್ಕೆ ಬಿದ್ದಳು. ಸರೋಜಿನಿಯ ಕಣ್ಣೆದುರು

ಸುತ್ತಲಿನ ಪ್ರಪಂಚ ಗಿರ್ರೆಂದು ಬುಗುರಿಯಂತೆ ತಿರುಗುತ್ತಿತ್ತು. ತನ್ನ ಬದುಕನ್ನು ಮುರಿದು ಮೂರಾಬಟ್ಟೆ ಮಾಡಿದ ದುಃಖವನ್ನು ತೋಡಿಕೊಳ್ಳಲಾದರೂ ಆದೀತು ಎಂಬ ಆಸೆಯನ್ನು ಮಾತ್ರ ಆಕೆಯಿಂದ ತೊರೆಯುವುದಾಗಲಿಲ್ಲ. ಮಾಧವ ಸರೋಜಿನಿಗೆ ಅಣ್ಣನಾಗಿ ಅವಳ ಮುಂದಿನ ಜೀವನಕ್ಕೆ ತೋಟದ ಕಾಗದಗಳನ್ನು ಕೊಟ್ಟು ಹೋಗುವವನು. ಹೀಗೆ ಸರೋಜಿನಿ ಈ ಶಾಪದ ಕಾದಂಬರಿಯಲ್ಲಿ ಭಿನ್ನ ಪಾತ್ರವಾಗಿ ಕಾಣುವಳು.

ರಂಗಸಾನಿ : ರಂಗಸಾನಿ ಸರೋಜಿನಿಯ ಮಗಳು. ರಂಗಸಾನಿ ವೇಶ್ಯೆಯ ಹೆಂಗಸು. ರಂಗಸಾನಿಯ ಮನೆಯಲ್ಲಿ ಮೂರು ನಾಲ್ಕು ತಲೆಮಾರುಗಳಿಂದಲೂ ನಡೆದು ಬಂದ ಸೂಳೆಗಾರಿಕೆಯ ಪರಂಪರೆಯನ್ನು ಮುಂದುವರಿಸುವ ಅಸಂಸ್ಕೃತವಾದ ಆಸೆಯಾಗಿತ್ತು. ಸರೋಜಿನಿಯ ವಿದ್ಯಾಭ್ಯಾಸಕ್ಕಾಗಿ ರಂಗಸಾನಿ ಮಗಳ ಧ್ಯೇಯವನ್ನು ಬೆಳೆಯಗೊಡದೆ ಅದನ್ನು ಚಿಗುರುವಾಗಲೇ ಚಿವುಟಿಹಾಕಬೇಕೆಂದು ಹೊಂಚು ಹಾಕಿದಳು. ತಿಂಗಳಿಗೆಂದು ಸರೋಜಿನಿಗೆ ಹಣ ಕೈಗೆ ತಲುಪುವಾಗಲೆಲ್ಲವೂ ತನ್ನ ಕೈವಾಡವನ್ನು ತೋರಿಸುತ್ತಿದ್ದಳು. ತನ್ನಿಂದ ದೂರವಾಗಬಹುಸುತ್ತಿದ್ದ ಮಗಳನ್ನು ಹಿಡಿದು ಹತ್ತಿರವಿರಿಸಿಕೊಳ್ಳಬೇಕೆನ್ನುತ್ತಿದ್ದಳು. ಅದೇ ಊರಿನಲ್ಲಿ ವಕೀಲಿಯ ವ್ಯವಸಾಯದ ನೆಪದಿಂದ ಸುಖವಾಗಿ ಕಾಲ ಕಳೆಯುತ್ತಿದ್ದ ಗೋವಿಂದಗೌಡರ ಕಡೆಯಿಂದ ತೆಗೆದುಕೊಳ್ಳಬಹುದೆಂದು ತಾಯಿ ಬಯಸಿದ್ದಳು. ತಾಯಿಯ ದೇಹಸ್ಥಿತಿ ಮಾತ್ರ ದಿನದಿನಕ್ಕೆ ಕೆಡುತ್ತಯಿತ್ತು. ರಂಗಸಾನಿಯ ಪರಿಸ್ಥಿತಿ ಮಿತಿಮೀರಿದಾಗ ಗೌಡನು ದೇಹ ಪರೀಕ್ಷೆಗಾಗಿ ಮುಂಬಯಿಗೆ ಹೊರಡಬೇಕಾಗಿತ್ತು. ಮುಂಬಯಿಗೆ ಬಂದು ತೋರಿಸಿದಾಗ ತಾಯಿ ಗುಣಮುಖಳಾಗುವುದು ಕಷ್ಟದ ಮಾತು ಎಂದು ಡಾಕ್ಟರ್ ಹೇಳುವರು. ಆಕೆಯ ದೇಹದ ರಕ್ತವೂ ಪೂರ್ತಿಯಾಗಿ ಕೆಟ್ಟಿತು. ಮೈಯಲ್ಲಿ ರಕ್ತವೂ ಇಲ್ಲ, ಇದ್ದುದಷ್ಟೆಲ್ಲ ವಿಷ! ಡಾಕ್ಟರ್ ಗೌಡನಿಗೆ ರಂಗಸಾನಿಯ ವಿಷಯ ತಿಳಿಸಿ ಆಕೆಯ ಮಗಳಾದ ಸರೋಜಿನಿಯನ್ನು ಒಂದು ಸಾರಿ ರಕ್ತದ ಪರೀಕ್ಷೆ ಮಾಡಿಸಿದ್ದಾಗ ತಾಯಿಯ ಬೇನೆಯ ತೀವ್ರ ಸ್ಥಿತಿ ಅಲ್ಲಿರದಿದ್ದರೂ ಆಕೆಯ ರಕ್ತದಲ್ಲಿಯ ಆ ವಿಷದ ಪ್ರಮಾಣ ಅಸಾಧಾರಣವಾಗಿತ್ತು. ಸರೋಜಿನಿ ವಿಷಕನ್ಯೆ, ರಕ್ತದ ಶಾಪ! ಇದು ಆನುವಂಶಿಕವಾಗಿ ರಕ್ತದಿಂದ ಬಂದದ್ದು.... ಗೋವಿಂದಗೌಡನಿಗೆ ಇದರಿಂದ ನೀವು ದೂರವಿರಲು

ಇರುವುದು ಉತ್ತಮ ಎಂದಾಗ, ಒಂದು ಕ್ಷಣ ಏನು ಮಾಡುವುದು ಅಂತಾ ಗೊತ್ತಾಗದೇ ರಂಗಸಾನಿಗೆ ಈ ವಿಷಯವನ್ನು ತಿಳಿಸಿದಾಗ ಅವಳಿಗೆ ಹೇಳಲಾಗದಷ್ಟು ದುಃಖ ಬಂದು ಗೌಡನಿಗೆ ನೀವು ಮಧ್ಯೆದಲ್ಲಿ ನಮ್ಮನ್ನು ಕೈಬಿಟ್ಟರೆ ಮುಂದೆ ಯಾರು ಗತಿ ನನಗೆ ಮತ್ತು ನನ್ನ ಮಗಳಿಗೆ ಎಂದಾಗ ಗೌಡ ಏನು ಹೇಳದೇ ನನಗೆ ಇನ್ನು ಬದುಕಬೇಕು, ನನಗೆ ನನ್ನ ಕುಟುಂಬಯಿದೆ. ನಿಮ್ಮನ್ನು ಊರಿಗೆ ಬಿಟ್ಟು ನಾನು ಹೊರಡುವೆನು. ಮಾಧವನ ತಂದೆಯ ಜೊತೆ ರಂಗಸಾನಿಯ ಸಂಬಂಧವಿರುವುದರಿಂದ ಸರೋಜಳಿಗೆ ಮುಂದಿನ ಬದುಕಿಗೆ ತಮ್ಮ ತೋಟದ ಪತ್ರಗಳನ್ನು ತಂದುಕೊಟ್ಟು ಹೋಗುತ್ತಾನೆ. ಹೀಗೆ ರಂಗಸಾನಿ ತಾನು ಮಾಡಿದ ತಪ್ಪು ತನ್ನ ಮಗಳಿಗೂ ಅದೂ ಶಾಪವಾಗಿ ಕೊಡುಗೆಯಾಗಿ ನೀಡಿದ್ದಾರೆ.

ಗೋವಿಂದಗೌಡ : ಊರಿನಲ್ಲಿ ವಕೀಲಿಯ ವ್ಯವಸಾಯದ ನೆಪದಿಂದ ಸುಖವಾಗಿ ಕಾಲ ಕಳೆಯುತ್ತಿದ್ದ ಗೋವಿಂದಗೌಡರು, ರಂಗಸಾನಿಯ ಮಗಳಾದ ಸರೋಜಳನ್ನು ತಾನು ಹೇಗಾದರೂ ಪಡೆಯಬೇಕು ಎಂಬ ಹಠವಿತ್ತು. ಒಂದು ಸಾರಿ ಸರೋಜಳ ಕಾಲೇಜಿಗೆ ಹೋಗಿದ್ದಾಗ ಸರೋಜಳು ತನ್ನನ್ನು ಯಾಕೆ ಸಮಾಜದಲ್ಲಿ ಬದುಕುಲು ಬಿಡುತ್ತಿಲ್ಲ. ಗೌಡ ನಿನ್ನ ಸ್ತ್ರೀತ್ವಕ್ಕೆ ಅವಮಾನವಲ್ಲ! ಎಂದು ಒಂದು ದನಿ ಹೇಳಿತು. ದನಿ ಗೌಡನ ದನಿಯಂತಿತ್ತು. "ನೀನು ಸ್ತ್ರೀಯಾಗಿರಬಹುದು. ಆದರೆ ನೀನು ವೇಶ್ಯೆ! ಮೂರು ನಾಲ್ಕು ತಲೆಮಾರುಗಳಿಂದ ನಿನ್ನ ನಾಳಗಳಲ್ಲಿ ವೇಶ್ಯೆಯ ರಕ್ತ ಹರಿಯುತ್ತಿದೆ" ಆ ರಕ್ತದ ಪ್ರವಾಹವನ್ನು, ಗುಣದೋಷಗಳನ್ನು ನೀನು ನಿನ್ನ ಬುದ್ಧಿವಂತಿಕೆಯಿಂದ ಬದಲಾಯಿಸಲಾರೆ!" ಹೀಗೆ ಗೌಡನು ಹೇಳಿದಾಗ ಸರೋಜಿನಿ ತನ್ನ ತಾಯಿಯನ್ನು ಮೊದಲಿಗೆ ನಿಂದಿಸಿಕೊಳ್ಳುವಳು. ಗೌಡ ಕಾಮುಕ ರಾಕ್ಷಸ. ಗೌಡನು ಸರೋಜಿನಿಯನ್ನು ಬಲತ್ಕರಿಸಿ ಅವಳ ಜೀವನವನ್ನು ಹಾಳು ಮಾಡುವನು. ತಾಯಿ ಗುಣಮುಖಳಾಗುವುದು ಕಷ್ಟದ ಮಾತು ಎಂದು ಡಾಕ್ಟರ್ ಹೇಳುವರು. ಆಕೆಯ ದೇಹದ ರಕ್ತವೂ ಪೂರ್ತಿಯಾಗಿ ಕೆಟ್ಟಿತು. ಮೈಯಲ್ಲಿ ರಕ್ತವೂ ಇಲ್ಲ, ಇದ್ದುದಷ್ಟೆಲ್ಲ ವಿಷ! ಡಾಕ್ಟರ್ ಗೌಡನಿಗೆ ರಂಗಸಾನಿಯ ವಿಷಯ ತಿಳಿಸಿ ಆಕೆಯ ಮಗಳಾದ ಸರೋಜಿನಿಯನ್ನು ಒಂದು ಸಾರಿ ರಕ್ತದ ಪರೀಕ್ಷೆ ಮಾಡಿಸಿದ್ದಾಗ ತಾಯಿಯ ಬೇನೆಯ ತೀವ್ರ ಸ್ಥಿತಿ ಅಲ್ಲಿರದಿದ್ದರೂ ಆಕೆಯ ರಕ್ತದಲ್ಲಿಯು

ಆ ವಿಷದ ಪ್ರಮಾಣ ಅಸಾಧಾರಣವಾಗಿತ್ತು. ಸರೋಜಿನಿ ವಿಷಕನ್ಯೆ, ರಕ್ತದ ಶಾಪ! ಇದು ಅನುವಂಶಿಕವಾಗಿ ರಕ್ತದಿಂದ ಬಂದದ್ದು.... ಗೋವಿಂದಗೌಡನಿಗೆ ಇದರಿಂದ ನೀವು ದೂರವಿರಲು ಇರುವುದು ಉತ್ತಮ ಎಂದಾಗ, ಒಂದು ಕ್ಷಣ ಏನು ಮಾಡುವುದು ಅಂತಾ ಗೊತ್ತಾಗದೇ ರಂಗಸಾನಿಗೆ ಈ ವಿಷಯವನ್ನು ತಿಳಿಸಿದಾಗ ಅವಳಿಗೆ ಹೇಳಲಾಗದಷ್ಟು ದುಃಖ ಬಂದು ಗೌಡನಿಗೆ ನೀವು ಮಧ್ಯೆದಲ್ಲಿ ನಮ್ಮನ್ನು ಕೈಬಿಟ್ಟರೆ ಮುಂದೆ ಯಾರು ಗತಿ ನನಗೆ ಮತ್ತು ನನ್ನ ಮಗಳಿಗೆ ಎಂದಾಗ ಗೌಡ ಏನು ಹೇಳದೇ ನಾನು ಇನ್ನು ಬದುಕಬೇಕು, ನನಗೆ ನನ್ನದೇ ಆದ ಕುಟುಂಬ ಇದೆ ಎಂದು ಹೇಳಿ ತನ್ನ ಹಳ್ಳಿಗೆ ಹಿಂದಿರುಗವನು. ಹೀಗೆ ಈ ಶಾಪದ ಕಾದಂಬರಿಯಲ್ಲಿ ಗೋವಿಂದಗೌಡನು ರಂಗಸಾನಿಯ ಮೂರು ನಾಲ್ಕು ತಲೆಮಾರಿನಿಂದ ಬಂದ ವೇಶ್ಯೆಯ ವೃತ್ತಿಯನ್ನು ಮುಂದುವರಿಸುವುದಕ್ಕೆ ಕಾರಣನಾಗುತ್ತಾನೆ ಎಂದು ನಿರೂಪಕರು ಹೇಳುವವರು.

ರಾಧಕ್ಕ ಮಾಧವನ ತಾಯಿ, ರಾಧಕ್ಕನ ಗಂಡ ತೀರಿದ ನಂತರ ಈಕೆ ತನ್ನ ಮಗನಗೋಸ್ಕರ ಕಕ್ಕ ಮತ್ತು ಕಕ್ಕಿಯರ ಜೊತೆ ಜೀವನ ನಡೆಸಿಕೊಂಡು ಹೋಗುತ್ತಾಳೆ. ತನ್ನ ಮಗನ ವಿದ್ಯಾಭ್ಯಾಸದ ಮುಗಿದ ನಂತರ ತಮ್ಮ ಆಸ್ತಿಯನ್ನು ತೆಗೆದುಕೊಂಡು ಬೇರೆ ಹೋಗುವುದು ಅಂತಾ ಯೋಚನೆ ಮಾಡಿರುತ್ತಾಳೆ. ಭೀಮಣ್ಣ ರಾಧಕ್ಕನ ತಮ್ಮ, ಮಾಧವನಿಗೆ ಸೋದರಮಾವ, ರಾಮರಾಯರು ಮಾಧವ ತನ್ನ ವಿದ್ಯಾಭ್ಯಾಸ ಮುಗಿದ ನಂತರ ತನ್ನ ಅಕ್ಕನನ್ನು ಹಳ್ಳಿಗೆ ಕರೆದುಕೊಂಡು ಬರಬೇಕು, ಮಾಧವನಿಗೆ ಬರಬೇಕಾದ ಆಸ್ತಿಯನ್ನು ಕೊಡಿಸಿ ಅವನಿಗೆ ಒಂದು ಒಳ್ಳೆಯ ಹುಡುಗಿಯನ್ನು ನೋಡಿ ಮದುವೆ ಮಾಡಿಸಬೇಕು ಅಂದುಕೊಂಡಾಗ ಆದರೆ ಮಾಧವ ಅದಕ್ಕೆ ವಿರುದ್ಧವಾಗಿ ನಾನು ಓದಿದ ನಂತರ ಮುಂಬಯಿಗೆ ಹೊರಡುವೆನು, ರಾಮರಾಯರು ಮಾಧವನಿಗೆ ತೋಟ ಮತ್ತು ಸ್ವಲ್ಪ ಆಸ್ತಿಯನ್ನು ಕೊಟ್ಟಾಗ, ಮಾಧವ ಭೀಮಣ್ಣನಿಂದ ಹತ್ತಿರ ತನ್ನ ತಂದೆ ಮಾಡಿದ ತಪ್ಪಿಗೆ ನಾನು ಈ ತೋಟವನ್ನು ಸರೋಜಳಿಗೆ ಕೊಡುವೆನು, ಯಾಕೆಂದರೆ ಅವಳು ನನ್ನ ತಂಗಿಯಾಗುವಳು ಎಂದಾಗ ಭೀಮಣ್ಣ ಏನು ಮಾತಾಡದೇ ಅದಕ್ಕೆ ಒಪ್ಪಿಗೆ ನೀಡುತ್ತಾರೆ. ಹಾಗೆಯೇ ರಾಮರಾಯರು ಮತ್ತು ಕಕ್ಕಿಸವರು ಈ ಶಾಪ ಕಾದಂಬರಿಯಲ್ಲಿ ಪ್ರಮುಖ ಪಾತ್ರಗಳಾಗಿ ಕಂಡು ಬರುತ್ತಾರೆ.

ಅಧ್ಯಾಯ – ೪

ಕಾದಂಬರಿಗಳಲ್ಲಿ ಕಂಡು ಬರುವ ವೇಶ್ಯಾಸಮಸ್ಯೆ

ಗೆಜ್ಜೆಪೂಜೆ ಕಾದಂಬರಿಯಲ್ಲಿ ಕಂಡು ಬರುವ ವೇಶ್ಯಾ ಸಮಸ್ಯೆಗಳು :

ಮೈಸೂರಿನ ಅಂಬಾವಿಲಾಸ ಅಗ್ರಹಾರದ ನಾಲ್ಕು ರಸ್ತೆಗಳು ಸೇರುವ ಒಂದು ಬದಿಯ ಮೂಲೆ ಮನೆಯಲ್ಲಿ ಶೇಷಾವಧಾನಿಗಳದು, ಆ ಮನೆಯಲ್ಲಿ ಪ್ರಾಯ ಇಪ್ಪತ್ತಾರರ ಸುಪುಷ್ಟ ಅಂಗಸೌಷ್ಟವ, ಕೇದಿಗೆಯ ಕಾಂತಿಯ ಮೈ ತುಂಬು ಮುಡಿಯ, ಹೊಳಪುಗಣ್ಣಿನ ಚೆಲುವೆಯವಳು, ಮೈತುಂಬ ನಿಗಿ ನಿಗಿ ಆಭರಣವಿಟ್ಟು ಕಾಂಜೀವರದ ಜರಿಯ ಸೀರೆಯುಟ್ಟಿದ್ದಾಳೆ. "ಅದ್ಯಾಗೆ ಕಾಣ್ತವೇ? ಮೂಗೂರ ಸೂಳೇರು ಅವು. ಅದ್ಯಾವೋನೋ ತಿರುಮಕೂಡ್ಲು ಸಾವಕಾರ್‍ನಂತೆ, ಈ ಮನೆ ಕೊಂಡ್ಕೊಂಡು ಇಲ್ಲಿ ತಂದಿಟ್ಟಿದ್ದಾನೆ. ಆತು, ಇನ್ನು ಇವು ಗೂಟ ಬಡ್ಕಂಡ್ ಕೂತಿರೋವೆ ಸೈ, ಒಳ್ಳೆ ನೆರೆ ತಂದಿಟ್ಟು ಹೋದ ಈ ಹಾಳ್ ಜೋಯ್ಸ!"

ನಿಷ್ಠಾವಂತ ಶ್ರೋತ್ರೀಯರಿರುವ ಈ ಬ್ರಾಹ್ಮಣ ಅಗ್ರಹಾರದ ಹೆಂಗಸರ ಮಧ್ಯಕ್ಕೆ ವೇಶ್ಯೆಯೊಬ್ಬಳು ಬಂದು ಸೇರಿಕೊಂಡಿದ್ದು ಈ ಹೆಂಗಸರಿಗೆ ಅಹಿತವನ್ನುಂಟುಮಾಡಿತು. ಹಜಾರ, ಊಟದ ಮನೆ, ಅಡಿಗೆ ಮನೆ ಎಲ್ಲಾ ಕಿಟಕಿಗಳೂ ಎಡ ಬದಿಯ ರಸ್ತೆಯ ಕಡೆಗಿವೆ. ಯಾವ ಕಿಟಕಿಯಲ್ಲಿ ತಲೆ ಇಟ್ಟರೂ ಎದುರಿಗೆ ಕಾಣುವುದು ಆ ಸೂಳೆಯ ಮನೆ. ನಿಜ, ಅದು ಸೂಳೆಯ ಮನೆ ಆದಮೇಲೆ ಹೆಚ್ಚು ಅಲಂಕೃತವಾಯಿತು. ಗೋಡೆ ಗೋಪಿಯನ್ನು ಲೇಪಿಸಿಕೊಂಡಿತು. ಕದ, ಕಿಟಕಿಗಳು ಕಲರ್ ಕಂಡವು. ಹಳೆಯ ತೂತು, ತೇಪೆಗಳೆಲ್ಲಾ ಮುಚ್ಚಿಕೊಂಡವು. ಆ ಮನೆಯ ಆಡಂಬರದಲ್ಲಿ ಉಳಿದ ಮನೆಗಳು ಮಂಕು, ಸಪ್ಪೆ.

ಮಡಿಸೀರೆ ಹರವುವಾಗ ಸಹಜವಾಗಿ ಕಿಟಕಿಯಲ್ಲಿ ಪಕ್ಕದ ಮನೆ ಕಾಣಿಸಿತು, ಜಗುಲಿಯ ಮೇಲೆ ಐದಾರು ವರ್ಷದ ಪುಟ್ಟ ಮುದ್ದು ಹುಡುಗಿಯೊಂದು ನಿಂತಿದೆ. ಕಣದ

ಲಂಗ, ಹಸಿರು ವೆಲ್ವೆಟ್ ಕೋಟು, ಮೈಯಲ್ಲಿ ಪುಟ್ಟ ಪುಟ್ಟ ಒಡವೆಗಳು, ಕಿಟಕಿಯಲ್ಲಿ ಕುಲುಕಾಡುವ ಮುತ್ತಿನ ಝುಮುಕಿ. ತಾಯಿಗಿಂತ ಮುದ್ದಾಗಿದೆ ಹುಡುಗಿ. ಅಬ್ಬಾ! ಜಾತಿಗೆ ತಕ್ಕ ರೂಪು, ರೂಪಿಗೆ ತಕ್ಕ ನಗು! ಇಷ್ಟಲ್ದೇ ಗಂಡಸರು ಜೋತು ಬೀಳುತ್ತಾರೆಯೆ?[1]

ಅವಧಾನಿಗಳು : "ನಾ ಏನು ಆ ಸೂಳೇಮನೆಗ್ಹೋಡಿಲ್ಲ ಕಣೇ. ಧೈರ್ಯವಾಗಿರು, ಯಾರೇನಾದ್ರೂ ಮಾಡ್ಕಳ್ಳಿ. ನಂ ಪಾಡಿಗೆ ನಾವಿದ್ರಾತು." ಸ್ಕೂಲಿನಲ್ಲಿ ವಿಜಯ "ಅವ್ರು ಲಿಂಗಾಯತ್ರಲ್ಲಾ ಮೇಡಂ, ಅವರು ಸೂಳೇರು."

ವಿಮಲಾ ಟೀಚರ್: ನೀಲಮಣಿಯಂತಹ, ಮನಮೋಹಕ ಕಣ್ಣುಗಳು; ಚುಂಬನಕ್ಕೆ ಆಹ್ವಾನ ಕೊಡುವ ಮುದ್ದು ತುಟಿಗಳು; ಹುಡುಗಿಯ ಲೋಲಾಕಿನಂತೆಯೇ ಹಣೆಯ ಮೇಲೆ ನರ್ತಿಸುವ ಕುರುಳು; ಸ್ವಲ್ಪ ದೊಡ್ಡವೆನಿಸಿದರೂ ಜಗನ್ಮೋಹಕ ನಗೆಯನ್ನು ಚೆಲ್ಲುವ ಹಲ್ಲುಗಳು! 'ಅಂತೂ ವೇಶ್ಯಾಲಕ್ಷಣಗಳೆಲ್ಲವೂ ಇವೆ' ಎಂದು ವಿಮಲಾ ಯೋಚಿಸಿದರು. ಮರುಗಳಿಗೆ ಚಂದ್ರಾ ಯುವತಿಯಾದರೆ ಹೇಗಾಗಬಹುದೆಂಬ ಕಲ್ಪನೆಯೇ ಅವರ ಚಿತ್ತವನ್ನು ಕಲಕಿತು.

ಗುಂಡಮ್ಮ: "ಅದೇನು ರೂಪೋ ಈ ಹಾಳು ಜಾತಿಗೆ. ಬೆಡಗು, ಬಿನ್ನಾಣ ಎಲ್ಲ ಹೇಳ್ಕೊಟ್ಟಿದ್ದಕ್ಕಿಂತ ಹೆಚ್ಚಾಗಿ ಬಂದಿರುತ್ತೆ ಹುಟ್ಟೋವಾಗ್ಲೇ."[2] ಸಂಗವ್ವ ಘಾಟಿ ಹೆಂಗಸಾದರೂ ಅಪರ್ಣಾ ಬಹಳ ಒಳ್ಳೆಯವಳೆಂದು ಆ ಸುತ್ತು ವಲಯದ ಹೆಂಗಸರು ತೀರ್ಮಾನಿಸಿದರು. ತಿರುಮಕೊಡ್ಲು ಸಾಹುಕಾರರು ತೆಗೆದುಕೊಟ್ಟ ಮನೆಯಲ್ಲಿ ಅಪರ್ಣಾ ಬಂದು ನೆಲೆಸಿದ್ದಳು. ಅವಳಿನ್ನು ಇಲ್ಲಿಯೇ ಶಾಶ್ವತ. ಅವಳಿಂದ ತಮಗೇನು ತೊಂದರೆಯಿಲ್ಲ ಎಂದು ತಿಳಿದ ಮೇಲೆ ಸುತ್ತಮುತ್ತಲಿನವರು ಮೆಲ್ಲಮೆಲ್ಲನೆ ಸಂಗವ್ವನ ಪರಿಚಯ ಮಾಡಿಕೊಂಡರು. ಗರತಿಯರನ್ನು

1 ಮತ್ತು 2 ಗೆಜ್ಜೆಪೂಜೆ – ಎಂ.ಕೆ. ಇಂದಿರಾ–ಪುಟ ಸಂಖ್ಯೆ – 23

ಮೀರಿಸುವಷ್ಟು ಲಕ್ಷಣಗಳು ಆಕೆಯಲ್ಲಿದ್ದವು. ಕೆನ್ನೆ ತುಂಬ ಹಚ್ಚಿದ ಅರಿಸಿನ, ದೊಡ್ಡ ಕುಂಕುಮ, ಮುಡಿ ತುಂಬ ಹೂವು, ಮೈತುಂಬ ಆಭರಣ, ರೇಷ್ಮೆಯ ಸೀರೆಗಳು. ಯಾವ ಶ್ರೀಮಂತ ಗೃಹಿಣಿಯರನ್ನೂ ಮೀರಿದ್ದವು ಆಕೆಯ ಗೃಹಕೃತ್ಯ. ಶೈವ ಸಂಪ್ರದಾಯಿಕ ಕಟ್ಟುಕಟ್ಟಲೆಗಳನ್ನು ಚಾಚು ತಪ್ಪದೇ ಅನುಸರಿಸುತ್ತಿದ್ದಳು. ಈಗ ತಿರುಮಕೂಡ್ಲು ಸಾಹುಕಾರರು ಸದ್ಗೃಹಸ್ತರಂತೆ ಹಗಲು ಸಂಚಾರ ಇಟ್ಟುಕೊಂಡರು. ಅಪರ್ಣಾ 'ಸೂಳೆಯೊಳಗಿನ ಗರತಿ'[3]. ತನ್ನ ಮನ ಮೆಚ್ಚಿಕೊಂಡ ಬ್ರಾಹ್ಮಣರ ಯುವಕನಿಂದ ಚಂದ್ರನನ್ನು ಪಡೆದಳು. ಆ ಪ್ರಿಯಕರನ ಚಿರನೆನಪಿಗೆ ಅವನ ಪ್ರತಿಬಿಂಬ ಚಂದ್ರಾ. ಅವನು ಸಂಸಾರಿಯಾದ, ಸಂಗವ್ವನ ಆಸೆಯ ಭಂಡಾರ ತುಂಬುವಷ್ಟು ಶ್ರೀಮಂತನಲ್ಲ ಚಂದ್ರಾಳ ತಂದೆ. ಅದನ್ನು ತುಂಬಿದವರು ಪುಟ್ಟಣ್ಣಶೆಟ್ಟರು. ಪರಿಣಾಮವಾಗಿ ಅಪರ್ಣಾ ಮೂಗೂರು ಬಿಡಬೇಕಾಯಿತು. ಹೇಳಿಕೇಳಿ ವೇಶ್ಯಾಕುಲ. ಪ್ರೇಮಕ್ಕೆ ಮನ ತೆತ್ತು ಅದರ ಫಲ ಕೈಗೆ ಬಂದಾಗಿತ್ತು. ಈಗ ಧನಕ್ಕೆ ಮೈ ತೆತ್ತು ಇಡೀ ಬಾಳ್ವೆ ನಡೆಸಬೇಕು. ಕಲ್ಲೀಮೀಸೆಯ ಪುಟ್ಟಣ್ಣಶೆಟ್ಟರು ಅಪರ್ಣೆಯ ಮನ ತುಂಬಲಿಲ್ಲ. ತಮ್ಮ ಹಣದಿಂದ ಅವಳ ಮನೆ ತುಂಬಿದ್ದರು. ಅಪರ್ಣಾ ಹೃದಯಸಂಸ್ಕೃತಳು. ವೇಶ್ಯೆಯಾದರೂ ಗರತಿಯಂತೆ ಬಾಳಬೇಕೆಂಬ ಹಿರಿಯ ಬಯಕೆ ಹೊತ್ತವಳು. ಮಗು ಚಂದ್ರಾಳ ಬದುಕು ಹಸನು ಮಾಡಬೇಕೆಂಬ ಆಸೆಯ ಗೋಪುರ ಕಟ್ಟಿಕೊಂಡಳು. ಪುಟ್ಟಣ್ಣಶೆಟ್ಟರು ವಿನಾ ಮತ್ತೊಬ್ಬ ಪುರುಷರನ್ನು ಮನೆಯ ಹತ್ತಿರ ಕೂಡ ಸೇರಿಸಲಿಲ್ಲ. ಶೆಟ್ಟರೊಂದಿಗೆ ನಿಷ್ಠೆಯಿಂದ ನಡೆದುಕೊಂಡಳು. ಅವಳು ಎರಡನೆಯ ಮಡದಿಯಂತಾದಳು. ಶೆಟ್ಟರು ಸಂತುಷ್ಟರಾದರು. ಧನ-ಕನಕಗಳು ಅಪರ್ಣಾನ ಮನೆ ತುಂಬಿದವು. ಬ್ರಾಹ್ಮಣ ಕೇರಿಯಲ್ಲಿ ಅಪರ್ಣಾ ವೇಶ್ಯೆಯೆಂಬುದು ತಾನಾಗಿಯೇ ಮರೆಯುವಂತಾಯಿತು. 'ಅರಮನೇಲಿ ಹುಟ್ಟಬೇಕಾದ ಹುಡುಗಿ, ಈ ಸೂಳೇ ಹೊಟ್ಟೇಲಿ ಹುಟ್ಟಿದೆ. ಯಾವ ಕೇಡಿಗೆ ಈ ರೂಪೋ'[4] ಎಂದು ಗುಂಡಮ್ಮನವರು ಅನೇಕ ಬಾರಿ ಅಡಿಗೆ ಮನೆಯಲ್ಲಿ ಅಂದುಕೊಂಡದ್ದುಂಟು. "ಬಾವಿ ಆಳ ಇಳಿದ್ನೋಡು, ಮನುಷ್ಯನ ಗುಣ ಇದ್ದು ನೋಡೂಂತ ಮೊದ್ಲಿಗೆ ಹ್ಯಾಗಪ್ಪ ಅವರ ಗುಣ ಹೇಳೋಕಾಗುತ್ತೆ? ಬಂಗಾರ್ದಂತಾ ಹುಡುಗಿ ಅಪರ್ಣಾ. ಆ

[illegible]

ಜಾತೀಲಿ ಹುಟ್ಟೋ ಹೆಣ್ಣಲ್ಲ ಪಾಪ! ಅವರ ಅಮ್ಮ ಇದೆಯಲ್ಲಾ ಧೂರ್ಜಟಿ! ಮಹಾ ಮನೆಹಾಳಿ ಅದು.' "ಏನೇ ಸೂಳೆ! ನಿಂಗೆ ಮದ್ವಿಲ್ಲ, ನಾ ಸೋಮೂನ್ನೇ ಮದ್ವೆ ಮಾಡ್ಕೋತೀನಿ." ಸುನಂದ ಹಂಗಿಸಿದಳು: "ಥೂ! ಸೂಳೇರನ್ನ ಯಾರೇ ಮದಿವ್ಯಾಗ್ತಾರೆ? ಸೋಮು ನಿನ್ನೇನ್ ಮದಿವ್ಯಾಗಲ್ಲ." ವಿಜಯ ಜಗುಲಿ ಇಳಿದು ಓಡುತ್ತ ಬಾಯಿ ಮೇಲೆ ಬೆರಳಿಟ್ಟು ಕೂಗಿದಳು: "ಸೂಳೇ-ಸೂಳೇ ಸುಪ್ಪಾಣೆ, ಸೂಳೆ ಮನೇಲ್ ಶಿಪ್ಪಾಣಿ; ಬೇಲಿ ಮೇಲೆ ಬೆಲ್ಲ ಇಟ್ಟು ಬಾಯ್ ಮೇಲೆ ಬೆರಳಿಟ್ಟು – ಊ ಊ ಊ!"[5] "ಸೂಳೇ ಅಂದ್ರೇನೇ ಲಲ್ತಾ?" ಸಿನಿಮಾದಲ್ಲಿ ಡ್ಯಾನ್ಸ್ ಮಾಡ್ತಾರಲ್ಲ ಅವರೇ ಸೂಳೇರೂ, ಅದ್ಕೇ ಅವರು ಮದ್ವೆ ಮಾಡ್ಕೊಳ್ಳಲ್ಲ." "ನೋಡವ್ವ, ಆ ವಿಜಿ ನನ್ನ ಸೂಳೆ-ಸೂಳೇಂತಾಳೆ. ಹಂಗನ್ದ್ರೇನವ್ವ?" "ಯಾವೋಳೇ ಅವ್ಳು ಬೋಸೂಡಿ! ಸೂಳೇನಚಿತೆ ಸೂಳೆ!! ಅವ್ಳೇ ಆಗಿದ್ದಾಳು ಕಳ್ಳಸೂಳೆ! ಎಲ್ಲಿ ಹಂಗನ್ಲಿ ನನ್ನೆದುರ್ಗೆ. ಅವಳ ನಾಲ್ಗೆ ಸೀಳಿ ಕೊಟ್ಟೇನು!" "ಇಲ್ಲ ಕಣಮ್ಮಾ.... ನಾ ಜಗ್ಳ ಮಾಡ್ಲಿಲ್ಲ. ನಾ ಸೋಮು ಮದ್ವೆ ಮಾಡ್ಕಾತೀನೀಂತಂದ್ರೆ, ನೀ ಸೂಳೆ, ನಿನ್ನ್ಯಾರೂ ಮದುವ್ಯಾಗಲ್ಲಾಂತಾಳೆ ಆ ವಿಜಿ!" ಸಂಗವ್ವ "ಅದ್ಯಾವೋಳು ತೋರ್ಸು ಬಾ ನಂಗೆ, ಸೂಳೆ ಯಾರೂಂತ ತೋರಿಸ್ಕೊಟ್ಟೇನು" ಎಂದು ಸಿಂಗವ್ವ ಲೊಟಗುಟ್ಟುತ್ತಾ ಅಡಿಗೆ ಮನೆಗೆ ಹೋಯಿತು. ಚಂದ್ರ "ನಾ ಯೇನು ಸೂಳೆ ಅಲ್ಲ ಅಲ್ಲೇನಮ್ಮ?" "ಇಲ್ಲ ಕಣವ್ವ, ಇದೆಲ್ಲ ಸುಳ್ಮಾತು. ಅಂತ ಮಾತೆಲ್ಲ ಆಡ್ಬಾರ್ದು." ವಿಜಯ ಮೂರು ನಾಲ್ಕು ಬಾರಿ ತನ್ನನ್ನು 'ಸೂಳೆ' ಎಂದು ಹಂಗಿಸಿದುದರ ತಾತ್ಪರ್ಯ ಇಂದು ಅವಳೆದುರು ಸ್ಪಷ್ಟವಾಗಿ ನಿಂತಿತ್ತು. ಈಗ ಅವಳು ವಿಜಯನೆದುರು ವಾದಕ್ಕೂ ನಿಲ್ಲುತ್ತಿರಲಿಲ್ಲ. ವಯಸ್ಸಿಗೆ ಸಹಜವಾದ ಲಜ್ಜೆ, ಗಂಭೀರ್ಯಗಳ ಜೊತೆಗೆ ಪ್ರಕೃತಿ ಸಹಜವಾದ ತಾರುಣ್ಯವೂ ಸಿಡಿದೆದ್ದು ಪಾರುಪತ್ಯ ನಡೆಸಿತು. ತನ್ನ ತಾಯಿಯ ಕನಸಿಗೂ, ಮಗಳ ಕನಸಿಗೂ ಪೂರ್ವ-ಪಶ್ಚಿಮದಷ್ಟು ಅಂತರ ಚಂದ್ರಿಗೆ ಹದಿನೆಂಟು ತುಂಬಿದೊಡನೆ ಒಬ್ಬ ಲಕ್ಷಾಧಿಪತಿಯೊಡನೆ 'ಗೆಜ್ಜೆಮೂಜೆ' ನಡೆಸಬೇಕೆಂಬುದು ಸಂಗವ್ವನ ಕನಸು. ತಾನೂ ಪದವೀಧರೆಯಾಗಿ ಕುಲೀನ ಪದವೀಧರ ಯುವಕನೊಡನೆ ವಿವಾಹವಾಗಿ ಸುರಮ್ಯ ಬಾಳ್ವೆ ನಡೆಸಬೇಕೆಂಬುದು ಚಂದ್ರಾಳ ಕನಸು. ತನ್ನ ಬದುಕಿನ ಬೇರಾದ ತಾಯಿ. ಮೇಲಿನ

ಚಿಗುರಾದ ಮಗಳು ಎರಡಕ್ಕೂ ನೋವು ಕೊಡಲಾರದೆ ಇಕ್ಕಡಿಯಲ್ಲಿ ಸಿಕ್ಕಿ ಒಳಗೊಳಗೇ ಕೊರಗಿದಳು, ಅಪರ್ಣಾ. ಚಂದ್ರ ಸೂಳೆಯರ ಹುಡುಗಿಯೆಂದು ಶಾಂತಿಯ ಮನೆಯವರಿಗೆ ಮಾತ್ರ ಗೊತ್ತು. ಸಾವಿರ ಮಂದಿಯ ಎದುರಿಗೆ ಅಗ್ನಿದೇವನ ಸಾಕ್ಷಿಯಾಗಿ ತನ್ನ ಮನ ಮೆಚ್ಚಿದ ಹೃದಯೇಶ್ವರನ ಕೈ ಹಿಡಿದು ಸಂಸಾರಿಯಾಗಿ ಬಾಳುವುದೆಲ್ಲಿ? ಕಳ್ಳತನದ ಸೂಳೆ ಬಾಳು ನಡೆಸುವುದೆಲ್ಲಿ? ದಿನ ಬೆಳಗಾದರೆ ಸಾವಿರ ತರುಣರನ್ನು ತಾನು ಕಾಣುತ್ತೇನೆ. ಆದರೆ ಯಾರು ತನ್ನನ್ನು ಮದುವೆಯಾಗುವುದಿಲ್ಲ. ತಾನು ಸೂಳೆಯ ಮಗಳು! ಆ ನಡುರಾತ್ರಿಯಲ್ಲಿ ತಬ್ಬಲಿಯಂತೆ ಬಿಕ್ಕಿ ಬಿಕ್ಕಿ ರೋದನೆಗೈದಳು ಚಂದ್ರಾ. 'ಏನಾದರಾಗಲಿ, ತಾನು ಸೂಳೆಯಲ್ಲವೆಂದು ಎಲ್ಲರಿಗೂ ತೋರಿಸಬೇಕು. ನಾನು ಮದುವೆ ಆಗ್ತೀನಿ.' ಯಾರನ್ನ ಮದುವೆ ಆಗೂದು? ಅಯ್ಯೋ, ನಾನು ಈ ಸೂಳೇ ಜಾತೀಲಿ ಅಲ್ದೆ ಬೇರೆ ಯಾವ ಜಾತೀಲಿ ಹುಟ್ಟಿದ್ರೂ ಲಕ್ಷಣವಾಗಿ ಮದುವೆ ಆಗಬಹುದಿತ್ತು. ಈಗ ಯಾರಪ್ಪಾ ನನ್ನ ಮದುವೆ ಆಗೋರು? ನಾ ಸೂಳೇ ಅನ್ನೋದು ಎಲ್ಲರಿಗೂ ಗೊತ್ತಲ್ಲ? "ಕಳ್ಳ ಸೂಳೆ ಮಗನೆ, ಎಷ್ಟ್ ಜನಕ್ಕೆ ಹುಟ್ಟಿದೋನೋ ನೀನು!?" "ಕತ್ತೆಸೂಳೆ ಮಗನೆ, ನೀನೀ ನೂರ್ ಜನದ ಪಿಂಡ. ನಿಮ್ಮಮ್ಮ ದಿನಕ್ಕೆ ಇಪ್ಪತ್ತು ಜನಕ್ಕೆ...." "ಸೂಳೆ–ಸೂಳೆ ಅನ್ನದೆ ಮಾತಾಡೋಕೆ ಬರೋಲ್ಲ ಈ ಜನಕ್ಕೆ. ಮಾತೆತ್ತಿದರೆ ಸೂಳೆಮಗನೆ ಅಂತಾರೆ, ಸೂಳೆ ಅಷ್ಟ್ ಕೆಟ್ಟೋರು ಇನ್ಯಾರು ಇಲ್ವೇ ಇಲ್ವೇನೋ ಪ್ರಪಂಚದಲ್ಲಿ."(6) "ಸುಮ್ನಿರೆ ಸಾಕು. ಕಳ್ಳನ ಮನಸ್ಸು ಹುಳ್ಳಗೇಂತ. ನಾ ಸೂಳೇಂತ ನೀನೇ ಮೂರ್ಹೊತ್ತು ಯೋಚ್ನೆ ಮಾಡ್ತೀಯೇನೋ, ಅದಕ್ಕೆ ನಿಂಗೇ ಈ ಕೆಲಸಕ್ಕೆ ಬಾರದ ಚಿಂತೆ. "ನಮ್ಮ ಅವಸ್ಥೆ ನಿಂಗೂ ತಿಳಿಯೋಲ್ವೆ ಮಾಲಾ. ನಮ್ಮ ತಾಯಿ ನೋಡು, ನಮ್ಮಪ್ಪಾಜೀಗೆ ಮದ್ವೆ ಆದ ಹೆಂಡ್ತೀಗಿಂತ ಹೆಚ್ಚಾಗಿದ್ದಾರೆ. ಇನ್ನೆಂದು ಗಂಡುನೊಣ ನಮ್ಮ ಹತ್ರ ಬರೋಲ್ಲ. ಆದ್ರೂ ಈ ಸೂಳೇ ಅನ್ನೊ ಹೆಸರು ಮಾತ್ರ ಎಂದಿಗೂ ತಪ್ಪೊ ಹಾಗೆ ಇಲ್ಲ." "ಪ್ರಪಂಚಾನೆ ಹಾಗೆ, ಬಿಡೆ ಚಂದ್ರಾ. ಇದೇನು ಇವತ್ತಿನ ಕಥೆ ಅಲ್ಲ ಯುಗಯುಗಾಂತ್ರದಿಂದ ಬಂದ ಪದ್ಧತಿ. ನೀ ಒಬ್ಳು ಮದ್ವೆ ಮಾಡ್ಕಂಡ್ರೆ ಇದೆಲ್ಲ ಸರಿಯಾಗ್ಹೋಗುತ್ತೇಂತ ಅಂದ್ಕೊಂಡಿದ್ದೀಯಾ? ನಿಂಗೊಂದು ಭ್ರಮೆ ಅಷ್ಟೆ." "ಏನಿಲ್ಲ

6 – [illegible]

ನೋಡು. ಸೂಳೇರ ಜಾತಿ ಅಲ್ದೆ ಬೇರೆ ಎಲ್ಲಾ ಜಾತೀಲೂ ಕೂಡ ಎಷ್ಟೋ ಜನ ಹೆಂಗಸ್ರು ಮದ್ವೇಗೆ ಮುಂಚೇನೇ, ಮದ್ವೆ ಆದ್ಮೇಲೆ ಕೆಟ್ಟೋಗಿರ್ತಾರೆ. ಅವರನ್ನ ಮಾತ್ರ ಯಾರೂ ಸೂಳೇಂತ ಅನ್ನೋಲ್ಲ. ನಾವು ಗರತೀಗಿಂತ ಸರಿಯಾಗಿದ್ರೂ ಹೀಗಂತಾರಲ್ಲ?" ವೇಶ್ಯಾಕುಲ ಅನ್ನೋದು ಮೊದಲ್ನಿಂದ ಇರೂದೇ ಅಲ್ವೇನೆ? ನಿಮ್ಮದು ಮದುವೆ ಆಗೋ ಪದ್ಧತಿ ಅಲ್ಲ. ಹೇಗಿದ್ರೂ ಪರವಾಗಿಲ್ಲ ಸೂಳೆ ಅನ್ನೋದು ರೂಢಿ ಅಷ್ಟೇ. ಗರತಿಯರು ಕೆಟ್ಟೋದ್ರೆ ನರಕದ ನಾಯಿ ಸಮಾನ. ಸೂಳೆ ಅಂತ ಒಂದು ಮಾತು ಅಂದೇ ಇದ್ರೂ ಅದಕ್ಕೆ ಹತ್ರಷ್ಟು ಬೇರೆ ಥರ ಅಂದಿರ್ತಾರೆ. ಅದಕ್ಕೆಲ್ಲ ನೀ ಯಾಕೆ ತಲೆ ಕೆಡಿಸ್ಕೋತಿ ಸುಮ್ನಿರು." ಪಾಪ ಆ ಸೂಳೇ ದೆಸೆಯಿಂದ ಅವರು ಊರೇ ಬಿಟ್ಟು ಹೋಗ್ಬೇಕಾಯ್ತಲ್ಲ. ಅದಕ್ಕೇ ಹೇಳೋದು; ಇಟ್ಕೊಂಡೋಳು ಇರೋ ತನಕ; ಕಟ್ಕೊಂಡೋಳು ಕಡೇತನಕ ಅಂತ." ಥೂ ಹಾಳು ಸೂಳೆಯ ಜನ್ಮ, ಯಾರಿಗೆ ಬೇಕು ಈ ಬಾಳು? ಅಪರ್ಣಾ ಸೂಳೆಯಾದರೂ ಹದಿನಾಲ್ಕು ವರ್ಷಗಳಿಂದ ತನ್ನನ್ನು ಒಂದೇ ಬಗೆಯ ಪ್ರೇಮದಿಂದ ನಡೆಸಿಕೊಂಡ ಶೆಟ್ಟರ ಬಗೆಗೆ ಅವಳ ಕೃತಜ್ಞತೆ ಬಹಳ. ಶೆಟ್ರು ನಿಧನ ವಾರ್ತೆ ತಿಳಿದ ನಂತರ ಚಂದ್ರಶೇಖರಯ್ಯನವರು ಅಪರ್ಣಾಳ ಮನೆಗೆ ಬರುತ್ತಾನೆ. ತನ್ನ ಮಗಳಿಗೆ "ನಿಮ್ಮಮ್ಮ ಸೂಳೇರ ಹುಡುಗಿ ಅಲ್ಲ ಕಣಮ್ಮ." ಚಂದ್ರ ಬೆಚ್ಚಿ ತಂದೆಯ ಮುಖ ನೋಡಿದಳು. "ಅಪ್ಪ! ನೀವ್ ಏನ್ಹೇಳ್ತಾ ಇದ್ದೀರಿ?" ನಿಮ್ಮಮ್ಮ ಬ್ರಾಹ್ಮಣರ ಹುಡುಗಿ. ನಿಮ್ಮಜ್ಜಿ ಅವಳನ್ನ ತಂದು ಸಾಕ್ಕೊಂಡಿದ್ದು" ನಮ್ಮೂರ ಹತ್ರ ಒಂದು ಹಳ್ಳೀಲಿ ಇವಳು ಹುಟ್ಟಿದ್ದಂತೆ. ಹುಟ್ಟಿದ ಕೂಡ್ಲೆ ಇವಳ ತಾಯಿ ಸತ್ರಂತೆ. ಮತ್ತೆ ಒಂದೇ ತಿಂಗಳಲ್ಲಿ ತಂದೇನೂ ಹೋದ್ರಂತೆ. ಯಾರೋ ನೆಂಟ್ರು ಈ ಪರದೇಶಿ ಮಗು ಸಾಕ್ಲಾರ್ದೆ ಒದ್ದಾಡ್ತಿದ್ರಂತೆ. ಆಗ ಸಂಗವ್ವ ತಂದು ಸಾಕಿದ್ಲಂತೆ. ಹಾಗಂತ ನಮ್ತಾಯಿ ಅಂತಿದ್ಲು." "ಅಪ್ಪಾ, ಏನೇ ಆದ್ರೂ ನನಗ್ಮಾತ್ರ ಸೂಳೇರ ಹುಡುಗಿ ಅನ್ನೋ ಕೆಟ್ಟೆಸರು ತಪ್ಪಿಲ್ಲ. ಈಗಾಗ್ಲೆ ನಮ್ಮಜ್ಜಿ ಏನೇನೋ ಏರ್ಪಾಟು ಮಾಡ್ತಾ ಇದ್ದಾರೆ. ಆದ್ರೆ ನಾ ಮಾತ್ರಾ ಅದಕ್ಕೆಲ್ಲ ಸೊಪ್ಪಾಕೋಳಲ್ಲ."

ಚಂದ್ರಾಗೆ ಕುಣಿಯುವಂತಾಗಿತ್ತು. ಮಾಲತಿ, ಲಲಿತ, ಸೋಮು ಎಲ್ಲರಿಗೂ ತನ್ನ ಜನ್ಮವೃತ್ತಾಂತವೆಲ್ಲ ತಿಳಿಸಿ, ತಾನು ಸೂಳೆಯರ ಹುಡುಗಿಯಲ್ಲವೆಂದು ತೋರಿಸಬೇಕೆಂದು ತಹತಹ. 'ಯಾಕೆ ಹೀಗಾಯ್ತು? ಚಂದ್ರಾ ದಿನ ನೋಡುವ ಹುಡುಗಿ. ಇನ್ನು ಮುಂದೆ ನನ್ನ ಗತಿಯೇನು? ತಾರುಣ್ಯದ ಮೊದಲ ಬಾರಿಯ ಅಪ್ಪುಗೆ; ಚುಂಬನ ಏನೂ ಸಾಲದು. ಇನ್ನೊಂದು ಬಾರಿ ಸಿಕ್ಕಿದರೆ ಮನಸಾರೆ ಮುದ್ದಿಸಬೇಕು. ಎಲ್ಲಾದರೂ ಮನೆಯವರಿಗೆ ಗೊತ್ತಾದರೆ? ತನ್ನ ತಂದೆ ಎಂತಹ ನಿಷ್ಠಾವಂತರು. ನಾನು ಮೊಟ್ಟಮೊದಲಿಗೇ, ಸೂಳೆಯರ ಹುಡುಗಿಯರ ಸಹವಾಸ? ಇಲ್ಲ; ಚಂದ್ರ ಸೂಳೆಯಂತಿಲ್ಲ.' "ಹೌದು ಮಾರಾಯ್ತಿ, ಸೂಳೇರಿಗೆ ನಾಚಿಕೆ ಅನ್ನೋದೇ ಇರೋದಿಲ್ವಂತೆ. ನೀನು ಮಾತ್‌ಮಾತ್‌ಗೂ ನಾಚಿಕೊಳ್ತಿ. ಆದ್ದರಿಂದ ನೀನು ಸೂಳೇರ ಹುಡುಗಿ ಅಲ್ಲ. ನಮ್ಮಜ್ಜಿ, ನಮ್ತಾಯಿಯೆಲ್ಲಾರೂ ಹಾಗೆ ಅಂತಾ ಇದ್ರು. ಇದು ಸೂಳೇರ ಹುಡುಗಿ ಇದ್ದಾಗೆ ಇಲ್ಲಾಂತ, ಜಾತಿ, ಗುಣ ಎಷ್ಟಾದ್ರೂ ಗೊತ್ತಾಗುತ್ತೆ ಬಿಡು. ನಿಮ್ಮ ತಾಯಿನೂ ಅಷ್ಟೇ. ಅವರು ಸೂಳೇರೂಂತ ಯಾರೂ ಹೇಳೋಕಾಗಲ್ಲ. ಅವಳು ಸೋಮುವಿನ ಎರಡೂ ಕೈಯನ್ನು ಹಿಡಿದು ಕಣ್ಣಿಗೊತ್ತಿಕೊಂಡಳು. "ನಾನು ನಿನ್ನವಳು" "ನಿನಗೊತ್ತಿಲ್ಲ ಚಂದ್ರ. ಇದುವರೆಗೂ ನನ್ನ ತಿಳವಳಿಕೆ ಬೇರೆ ಇತ್ತು. ನಿಮ್ಮ ಸಂಪ್ರದಾಯದಂತೆ ನಿನಗೆ 'ಗೆಜ್ಜೆಪೂಜೆ' ಆಗುತ್ತೇಂತ ನಮ್ಮನೆಯೋರೆಲ್ಲ ತಿಳಕೊಂಡಿದ್ದಾರೆ. ನಾನೂ ಹಾಗೇ ತಿಳಿದಿದ್ದೆ. ಹಾಗೆಲ್ಲ ಮೊಂಡಾಟ ಮಾಡಿ ನಿಮ್ತಾಯಿಗೆ ಬ್ಬೆಜಾರ್ಮಾಡ್ಬೇಡ ಹುಡುಗಿ. ಹದಿನೈದು ವರ್ಷದಿಂದ ನಿಮ್ಮ ತಾಯಿ ಒಬ್ಬನ್ನೇ ನೆಚ್ಕೊಂಡಿರಲಿಲ್ವೆ? ಸೂಳೇರೆಂದ ಮಾತ್ರಕ್ಕೆ ಎಲ್ಲಾರೂ ಹೊಲಸು ಅಂತ ತಿಳಕೋಬಾರದು ಚಂದ್ರ. ಸೂಳೇರಲ್ಲಿ ಸಂಗೀತ, ನಾಟ್ಯ, ವಿದ್ಯೆ, ಎಲ್ಲ ಕಲ್ತು ಎಷ್ಟ್ ಸುಂಸ್ಕೃತರಾಗಿರ್ತಾತೆ ಒಬ್ಬೊಬ್ರು. ವೇಶ್ಯಾ ಕುಲದಲ್ಲಿ ಹುಟ್ಟಿದೋರೆಲ್ಲ ಅದೇ ವೃತ್ತಿ ಮಾಡೋದಿಲ್ಲ. ಏನೋ ಆ ಹೆಸರು ಬರುತ್ತೆ ಅಷ್ಟೆ. ನೋಡು, ಯಾರಾದರೂ ಸರಿಯಾದವರು ಮದುವೆಯಾಗ್ತೀನೀಂದ್ರೆ ಸುಖವಾಗಿ ಮದುವೆಯಾಗು." ಅವಳಿಗೆ ರೇಗಿಹೋಯಿತು. ಒಂದೇ ಮಾತು ಸೋಮು, ತಿಳಕೋ. ನಾನು ನಿನ್ನವಳೇ ಹೊರತು ನೀನು ನನ್ನವನಲ್ಲ. ನಂದು ಹೇಳಿ ಕೇಳಿ ಸೂಳೆ ಬದುಕು. ನಿಂದು ಹಾಗಲ್ಲ. ಎಲ್ಲಾ ನಂಗೊತ್ತಿದೆ. ಅದನ್ನ ಎಷ್ಟು ಸರ್ತಿ ಮಾತಾಡಿದ್ರೂ ಒಂದೆ. ತ್ರಿಶಂಕು ನರಕದಲ್ಲಿರೋಳು ನಾನೊಬ್ಳೇ." "ಥೂ

ನನ್ನ ಬಾಳೆ? ಎಂದು ತಾನೇ ಹಳಿದುಕೊಂಡಳು. 'ಇದೆಂಥ ಕಳ್ಳ ಬಾಳು? ರಾಜಾರೋಷವಾಗಿ ತಿರುಗಾಡುವ ಸ್ವತಂತ್ರವೆಲ್ಲಿ? ವಂಚನೆಯ ಬದುಕೆಲ್ಲಿ ಥೂ' ಅಂದು ಕೊಂಡಳು.

ಮತ್ತೆಂಟು ದಿನದಲ್ಲಿ ಅತ್ತಿಗುಪ್ಪೆಯ ಸಾಹುಕಾರರು ಬಂದರು ಕಾರಿನಲ್ಲಿ. ಆದರೆ ಬಂದದ್ದು ರಾತ್ರಿ ಎಂಟು ಗಂಟೆಯಲ್ಲಿ , ಚಂದ್ರಾ ತಾಯಿಯದು, ತನ್ನದು ಎಲ್ಲಾ ಒಡವೆಗಳನ್ನೂ ಹೇರಿಕೊಂಡು ಟಿಸ್ಯೂ ಸೀರೆಯುಟ್ಟು ತುಂಬಾ ಅಲಂಕಾರ ಮಾಡಿಕೊಂಡಿದ್ದಳು. ಬಂದವರು ಚಂದ್ರಾನನ್ನು ಹಿಂದೆ ಎರಡು ಮೂರು ಬಾರಿ ನೋಡಿದ್ದರು. ಆದರೆ ಅವಳು ಮಾತ್ರ ಅವರನ್ನು ನೋಡಿರಲಿಲ್ಲ. ಅವಳೂ ನಖಶಿಕಾಂತ ಆತನನ್ನು ನೋಡಿದಳು. ಆತ ದೇವಾಂಗದವರೆಂದು ತಿಳಿದಿತ್ತು. ಕೆಂಪನೆಯ ಎತ್ತರದ ಮನುಷ್ಯ, ಲಕ್ಷಾಧೀಶ್ವರನ ಕುರುಹುಗಳೆಲ್ಲ ಆತನಲ್ಲಿದ್ದವು. ಒಂದೊಂದು ಕೈಯಲ್ಲಿ ಮೂರು ಮೂರು ಉಂಗುರಗಳು, ಚಿನ್ನದ ಚೈನಿನ ರಿಸ್ಟ್ ವಾಚು, ದಪ್ಪವಾದ ಉಲ್ಲನ್ ಕೋಟು, ಸಿಲ್ಕಿನ ಶರಟು, ನವಿರು ಮಲ್ಲಿನ ಪಂಚೆ, ಆತನ ಮುಖದ ಮೇಲೆ ಎದ್ದು ಕಾಣುತ್ತಿದ್ದುದು ಕಠ್ರಗಿನ ದುಂಡುಮೀಸೆ.

ವಯಸ್ಸು ಸುಮಾರು ನಲವತ್ತು ಅಂದುಕೊಂಡಳು ಚಂದ್ರಾ. ನಮ್ಮ ಪರಿಸ್ಥಿತಿ ಎಲ್ಲಾ ನಿಮಗ್ಗೊತ್ತಿದೆಯಲ್ಲ. ನಮ್ಮ ತಂದೆ ಹೋದಲಾಗಾಯ್ತು ನಮಗೆ ತುಂಬಾ ತೊಂದ್ರೆ ಆಗಿದೆ. ಈಗ ನನ್ನಿಂದಾನೇ ಜೀವನ ನಡೀಬೇಕು. ಈ ಮನೆ ನಮ್ಮ ತಾಯಿದು. ನಾ ಇಟ್ಟಿರೋ ಒಡವೆ ಎಲ್ಲಾ ನಮ್ತಾಯಿದು. ಈಗ ಒಂದ್ವರ್ಷದಿಂದ ತುಂಬಾ ತೊಂದ್ರೆ ಆಗಿ ಸ್ವಲ್ಪ ಒಡವೆ ಮಾರಿಬಿಟ್ವಿ. ನನ್ನದಾಗಿ ಒಂದು ಮನೆ ಬೇಕು. ನನ್ನದಾಗಿ ಒಂದ್ ಸೆಟ್ಟು ಒಡವೇನೂ ಬೇಕು. ಪ್ರತೀ ತಿಂಗಳು ಕಡೇಪಕ್ಷ ಒಂದಿನ್ನೂರು ರೂಪಾಯಿಯಾದರೂ ಬೇಕು ಖರ್ಚಿಗೆ. ಇದನ್ನೆಲ್ಲ ನಮ್ಮಜ್ಜಿ ಹೇಳಿದ್ರೇನೋ ನಿಮಗೆ?" "ಹೂಂ, ಎಲ್ಲ ಹೇಳಿದಾರೆ. ಮನೆ ಈಗ ಸದ್ಯಕ್ಕೆ ಇದೆಯಲ್ಲ, ನಿಧಾನವಾಗಿ ತಕ್ಕೊಟ್ರೆ ಆದೀತಲ್ಲ?" "ಇಲ್ಲ, ನನ್ನ ಹೊಸ ಮನೇಲೆ ಈ ಶಾಸ್ತ್ರ ನಡೀಬೇಕೊಂತ ನನ್ನಿಷ್ಟ. ನನ್ನ ಒಡವೆ ಇಟ್ಕೊಂಡೇ ನಾನು ನಿಮ್ಮ ಹತ್ರ ಬರಬೇಕೂಂತ ನನ್ನ ಇಷ್ಟ." ಆತ ಬೆಚ್ಚಿದರು. ಆದರೂ ಚಂದ್ರಾಳಚಿಥ ಸುಂದರ ಹೆಣ್ಣಿನ ಸಹವಾಸ ಆತನಿಗೆ ಈವರೆಗೆ ಸಿಕ್ಕಿಲ್ಲ, ಅವಳುದ್ದಕ್ಕೂ ಹಣ ಸುರಿದು ಜೀವನಪರ್ಯಂತ ಅವಳನ್ನು ಖಾಯಂ ಮಾಡಿ

ಇಟ್ಟುಕೊಳ್ಳಲು ತಯಾರಾಗಿ ಬಂದಿದ್ದರು. ತನ್ನಂಥ ಲಕ್ಷಾಧೀಶ್ವರ ಈ ಹೆಣ್ಣಿನೆದುರು ಜಿಪುಣತನ ತೋರುವುದು ಆತನಿಗೆ ಸರಿಬರಲಿಲ್ಲ. ಕಡೆಯ ಮಾತಾಗಿ ಆತ ಹೇಳಿದರು:

"ಇನ್ನೊಂದು ಕೆಲಸ ಮಾಡಬಹುದು. ನಿಮ್ಮ ಒಡವೆಗೆ, ಮನೆಗೆ ತಗಲುವ ಹಣ ನಾನು ನಾಳೆಯೇ ನಿಮಗೆ ತಲ್ಪಿಸುತ್ತೇನೆ. ಒಡವೆ ಬಂದ ನಂತರ ಈ ಶುಭಕಾರ್ಯ ನೆರವೇರಲಿ. ನಿಧಾನವಾಗಿ ಮನೆ ಕೊಂಡರಾಯಿತು."

"ಎಷ್ಟು ವಿದ್ಯೆ ಕಲ್ತ್ರೇನು, ಏನ್ಮಾಡಿದ್ರೇನು. ಆ ಜಾತಿ ಸ್ವಭಾವ ಎಲ್ಲೋಗುತ್ತೆ ಹೇಳು? ಆ ಹುಡುಗಿ ನೋಡಿದ್ರೆ ಮೂರ್ಹೊತ್ತೂ ಒಂದು ಬಿಳೀ ಸೀರೆ ಉಟ್ಕಂಡು ಓಡಾಡಿತ್ತು. ಈಗ ನೋಡ್ದ್ಯಾ, ಮೈತುಂಬಾ ವಡವೆ ಹೇರ್ಕೊಂಡಿದೆ. ಅಜ್ಜಿ, ಅಮ್ಮ ಎಲ್ಲ ತರಪೇತಿ ಕೊಟ್ಟಿದ್ದಾರೆ. ಪಾಪ! ಒಳ್ಳೆ ಹುಡುಗಿ ಮುಂಡೇದು!" ಚಂದ್ರಾಳ ಮನೆ ಮದುವೆ ಮನೆಯಂತೆ ಅಲಂಕೃತವಾಯಿತು. ಆ ಹಳೆಯ ಮನೆ ನವಯೌವನ ತಳೆಯಿತು. ಗಂಗಯ್ಯ ಪ್ರತಿದಿನ ರಾತ್ರಿ ಎಂಟರ ನಂತರ ಚಂದ್ರಾರ ಮನೆಗೆ ಬಂದು ಹೋಗುತ್ತಿದ್ದರು. ಹಾಸಿಗೆ ಮಂಚಗಗಳ ಖರ್ಚಿಗೆಂದು ಚಂದ್ರಾ ಮತ್ತೆ ಒಂದು ಸಾವಿರ ಕಿತ್ತಳು ಅವರಿಂದ. ರಂಭೆಯಂಥ ತನ್ನ ಪ್ರೇಯಸಿಯನ್ನು ದಿನಕ್ಕೊಂದು ಬಾರಿ ನೋಡಿ ಮಾತ್ರ ತೃಪ್ತಿಗೊಳ್ಳಬೇಕಾಗಿತ್ತು ಈಗ.

ಚಂದ್ರಾ ತಾನೇ ಖುದ್ದಾಗಿ ಆತನಿಗೆ ಕಾಫಿ ಫಲಾಹಾರ ನೀಡುವಳು. ತಾನು ಆತನಿಗಾಗಿ ಮಾಡಿದ ಏರ್ಪಾಡುಗಳನ್ನೆಲ್ಲ ತೋರಿಸುವಳು. ತನ್ನ ಧರ್ಮಪತ್ನಿ ಇದ್ದಾಗ ಸಹ ತನಗೆ ಒಂದು ದಿನ ಕೂಡ ಇಂತಹ ಆದರಣೆ ನಡೆದಿರಲಿಲ್ಲವೆಂಬುದು ನೆನಪಾಯಿತು. ನಿಜವಾಗಿ ಇದು ವೇಶ್ಯೆಯ ಲಕ್ಷಣಗಳೇ ಅಲ್ಲವೆಂದು ಅನಿಸಿತು. ಹತ್ತೆಂಟು ಬಗೆಯ ವೇಶ್ಯೆಯರಲ್ಲಿ ಬೆರೆತ ಆತನಿಗೆ ಚಂದ್ರಾಳ ಸತೀತ್ವದ ಉಪಚಾರ ಕಂಡು ಲಜ್ಜೆಯಾಯಿತು. ತಾನು ಇದುವರೆಗೆ ಅವಳಿಗೆ ಕೊಟ್ಟಿರುವ ಹನ್ನೆರಡು ಸಾವಿರ ಹಣ ಅವಳ ಉಂಗುಷ್ಟಕ್ಕೂ ಸಾಲದು ಅನಿಸಿತು. ಮುಂದೆ ಅವಳ ಸೌಂದರ್ಯಕ್ಕೆ, ವಿದ್ಯೆಗೆ, ಯೋಗ್ಯತೆಗೆ ತಕ್ಕಂತೆ ಅವಳನ್ನು ನಡೆಸಿಕೊಳ್ಳಬೇಕೆಂದು ಆತ ಮನದಲ್ಲೇ ಸಂಕಲ್ಪ ಮಾಡಿದ.

"ದಯವಿಟ್ಟು ನೀವು ಇನ್ನು ಎರಡ್ದಿನ ತಡಕೋಬೇಕು. ಎಲ್ಲ ನಮ್ಮ ಸಂಪ್ರದಾಯದಂತೆ

ನದೀಲೀಂತ ಒಂದು ಆಸೆ. ಅವತ್ತು ಪಂಚಕಲಶ ಇಟ್ಟು ಐದು ಜನ ಮುತ್ತೈದೇರು ಪೂಜೆಮಾಡಬೇಕು. ನಮ್ಮ ಕುಲದೇವತೆಗೆ ಐದು ತಂಬಿಟ್ಟಿನ ದೀಪ ಉರಿಸಬೇಕು. ಹಾಗೇ ಹೊಸ ಬೆಳ್ಳಿ ಗೆಜ್ಜೆಯ ಪೂಜೆ ಆಗಬೇಕು. ಹಾಗೇ ನಮ್ಮ ಜನದ ನಾಲ್ಕು ಮಂದಿಗೆ ಕಜ್ಜಾಯದ ಸಮಾರಾಧನೆ ಆಗಬೇಕು. ಆವತ್ತು ನಂಜನಗೂಡು, ಚಾಮುಂಡಿ ಬೆಟ್ಟದಲ್ಲಿ ವಿಶೇಷ ಪೂಜೆಗೆ ಏರ್ಪಾಟು ಮಾಡಿದೀನಿ. ಇವೆಲ್ಲ ಲಕ್ಷಣಗಳು ನಡೆದ ನಂತರ ನಾನು ನಿಮ್ಮವಳು, ಎಂದಿದ್ದರೂ ನಿಮ್ಮವಳು. ಇನ್ನೆರಡು ದಿನ ತಡಕೋಬೇಕು ನೀವು." "ಹಾಗೇ ಆಗಲಿ ಚಂದ್ರಾ. ನಾಳೆ ಸಂಜೆ ಮತ್ತೆ ಬರ್ತೇನೆ. ಏನೂ ತಿಳಕೋಬೇಡ."

ಪಂಚಕಲಶಗಳು ಅಲಂಕೃತವಾಗಿ ಕುಳಿತಿದ್ದವು. ಪಾವು ಪಾವು ತುಪ್ಪ ಹಿಡಿಸುವ ಐದು ತಂಬಿಟ್ಟಿನ ಸೊಡರುಗಳು ಬೆಳಗಿದವು. ಜೋಡಿ ಗೆಜ್ಜೆಯ ಸರಗಳು ಬೆಳ್ಳಿಯ ತಟ್ಟೆಯಲ್ಲಿ ಪೂಜೆಗಣಿಯಾಗಿ ಕುಳಿತವು. ಮಂಗಳದ್ರವ್ಯಗಳು ಕುಲದೇವತೆ ತಾರಕೇಶ್ವರಿಯ ಮುಂದೆ ಮಡಿಮಡಿಯಾಗಿ ಅಣಿಗೊಳಿಸಲ್ಪಟ್ಟಿದ್ದವು. ಚಂದ್ರ ತೈಲಾಭ್ಯಂಜನ ಮಾಡಿ, ಶುಭ ತಿಲಕವಿಟ್ಟು, ಹೊಸ ಆಭರಣಗಳನ್ನಿಟ್ಟು ಪೀತಾಂಬರ ಉಟ್ಟು ಸಾಲಂಕೃತಳಾದಳು. ಮಗಳ ವರ್ತನೆ ಅಪರ್ಣನಿಗೆ ತುಂಬಾ ಸಮಾಧಾನ ತಂದಿದ್ದರೂ ಒಳಗೊಳಗೇ ದಿಗಿಲು ಹುಟ್ಟಿಸುತ್ತಿತ್ತು. ಹುಟ್ಟಾ ಹಠದ ಹುಡುಗಿಯಾದ ಅವಳು ಈಗ ಕೇವಲ ಒಚಿದೆರಡು ತಿಂಗಳಿಂದ ಯಾರು ಹೇಗೆ ಹೇಳಿದರೆ ಹಾಗೆ ಕೇಳುತ್ತಿದ್ದಾಳೆ. ಅದು ಅವಳ ಸಹಜ ಗುಣವಲ್ಲ; ಇತ್ತೀಚೆಗಂತೂ ತುಂಬಾ ಗಂಭೀರ ತಳೆದಿದ್ದಾಳೆ. ಮೂಗೂರಿನಿಂದ ಬಂದ ಮೂರು-ನಾಲ್ಕು ಮಂದಿ ಮುದುಕಿಯರು ಕುಳಿತು ಅವಳಿಗೆ ಗೆಜ್ಜೆಪೂಜೆ ವಿಧಾನ ತಿಳಿಸಿದರು. ಮೊದಲ ಕುಲದೇವತೆಯ ಪೂಜೆ, ನಂತರ ಪಂಚಮುತ್ತೈದೆಯರ ಪೂಜೆ, ಅನಂತರ ಗೆಜ್ಜೆಪೂಜೆ.

ವಿಧಿಪೂರ್ವಕ ಪೂಜೆ ನಟಿಸಿದಳು ಚಂದ್ರ. ನಂತರ ಕಾಲಿಗೆ ಗೆಜ್ಜೆ ಕಟ್ಟಿ ಕುಲದೇವತೆಯ ಮುಂದೆ ಶಾಸ್ತ್ರೋಕ್ತ ನರ್ತಿಸಬೇಕು. ಚಂದ್ರಾಗೆ ನರ್ತನದ ಅಭ್ಯಾಸವೇ ಇಲ್ಲ; ಶಾಸ್ತ್ರದ ಮಟ್ಟಿಗೆ ಮಂಗಳ ನರ್ತನ ಕಲಿಸಿದಳು. ನರ್ತನ ಸೇವೆಯಾಯಿತು. ರಾತ್ರಿ ಇವರು ಶಯ್ಯಾಗೃಹಕ್ಕೆ ಹೋಗುವವರೆಗೂ ಈ ತಂಬಿಟ್ಟಿನ ದೀಪಗಳು ಉರಿಯುತ್ತಿರಬೇಕು. ಅದು ಆರದಂತೆ

ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿರಬೇಕು.

ಮುತ್ತೈದೆಯರಿಗೆ ಸೀರೆ-ರವಿಕೆಗಳ ಉಡುಗೊರೆ ಕೊಟ್ಟಾಯಿತು. ಮತ್ತೆ ಯಾರಾದರೂ ಮುತ್ತೈದೆ ಬ್ರಾಹ್ಮಣರಿಗೆ ಫಲ ತಾಂಬೂಲ ಕೊಡಬೇಕು. ಎಂದಿಲ್ಲದ ತೇಜಸ್ಸು ಚಂದ್ರಾಳ ಮುಖದಲ್ಲಿ ಗೆಜ್ಜೆಯ 'ಘಿಲ್‌ಘಿಲ್' ನಾದದೊಂದಿಗೆ ಸೋಮುವಿನ ಮನೆಯ ಮೆಟ್ಟಿಲೇರಿದಳು ಚಂದ್ರ. ತಾಂಬೂಲದ ತಟ್ಟೆಯೊಂದಿಗೆ ಅವಳನ್ನು ಹಿಂಬಾಲಿಸಿದಳು ಮಂಗಳ. ಹಜಾರದಲ್ಲಿಯೇ ಕೃಷ್ಣಾಜಿನದ ಮೇಲೆ ಕುಳಿತಿದ್ದಾರೆ ಅವಧಾನಿಗಳು. ಸ್ವಲ್ಪ ದೂರದಲ್ಲಿ ಚಾಪೆಯ ಮೇಲೆ ಕುಳಿತಿದ್ದಾರೆ ಚಂದ್ರಶೇಖರಯ್ಯ. ಚಂದ್ರ ಒಂದು ಗಳಿಗೆ ತಡೆದು ನಿಂತವಳು ಮತ್ತೆ ಒಳಗೆ ಹೆಜ್ಜೆ ಇಟ್ಟಳು. ಚಂದ್ರಶೇಖರಯ್ಯ ಬೆಚ್ಚಿದರು. ಯಾವುದೋ ಮಂತ್ರಬಂಧನದಿಂದ ಕಟ್ಟಿದಂತೆ ಅವರು ಪಿಳಿಪಿಳಿ ಕಣ್ಣು ಬಿಟ್ಟು ಕುಳಿತರು. ಅವರಿಗೆ ಈ ಗೆಜ್ಜೆಪೂಜೆಯ ಸಂಗತಿ ತಿಳಿದಿತ್ತು. ತಿಳಿಯದವರಂತೆ; "ಏನಮ್ಮ ವಿಶೇಷ?" ಚಂದ್ರ "ಇವತ್ತು ನನಗೆ ಗೆಜ್ಜೆಪೂಜೆ ಅಪ್ಪಾ" ಎಂದು ತಂಗಮ್ಮ "ಅಯ್ತನೆ ನನ್ನಮ್ಮ ನಿಮ್ಮ ಶಾಸ್ತ್ರ?" "ಹೂಂ ಆಯ್ತು ಅಮ್ಮ. ಅರಿಶಿನ ಕುಂಕುಮ ಕೊಡ್ತೀನಿ." ಚಂದ್ರ ಎಲ್ಲವನ್ನೂ ದೂರದಿಂದ ಕೊಟ್ಟು ಮಂಗಳದ್ರವ್ಯಗಳ ತಟ್ಟೆಯನ್ನು ಅವರ ಮುಂದಿಟ್ಟು ನಮಸ್ಕರಿಸಿದಳು. "ಮುತ್ತೈದೆ ಸಾವಿತ್ರಿಯಾಗಿ ಬಾಳು ನನ್ನಮ್ಮ." "ಸುಮಂಗಲೀ ವಧೂ ರಿಮಾಂ" – ಎಂದು ಆಶೀರ್ವದಿಸಿದರು. ತಂದೆ ತುಟಿಯನ್ನು ಮತ್ತಷ್ಟು ಬಿಗಿದರು. ಅವರ ಮೂಗು ಕೆಂಪಾಯಿತು. ಅವರ ಮಾನ ಕೂದಲೆಳೆಯ ತುದಿಯ ಕತ್ತಿಯಂತೆ ನೇತಾಡಿತು. ಅದೇ ಸ್ನಾನ ಮುಗಿಸಿ ಸೋಮು ಬಚ್ಚಲು ಮನೆಯಿಂದ ಹೊರಬಂದ. ಅವನ ಹಿಂದೆ ಜಯಲಕ್ಷ್ಮಿಯೂ ಬಂದಳು. ಊಟದ ಮನೆಯ ಬಾಗಿಲಲ್ಲಿ ಅವನ ಕಾಲು ಗಕ್ಕನೆ ನಿಂತಿತು. ಅಡಿಗೆಯಲ್ಲಿದ್ದ ಗುಂಡಮ್ಮನವರೂ ಒಳ ಬಾಗಿಲಲ್ಲಿ ಬಂದು ನಿಂತು ಚಂದ್ರಾಳನ್ನು ಮಾತಾಡಿಸಿದರು. "ಎಲ್ಲೇ ಹುಡುಗಿ, ನಿನ್ನ ಗಂಡನ್ನ ನಮಗೆ ತೋರಿಸ್ಲೇ ಇಲ್ಲ?" "ಆಗ್ಲಿ ಅಜ್ಜಿ, ಇನ್ನೊಂದಿವ್ಸ ತೋರಿಸ್ತೀನಿ."

ಇದುವರೆಗೆ ನಿರಾಡಂಬರವಾಗಿದ್ದು ವಿದ್ಯೆ ಕಲಿಯುತ್ತಿದ್ದ ಚಂದ್ರಾಳ ಬಗೆಗೆ ಬೀದಿಯವರಿಗೆಲ್ಲ ಒಂದು ಬಗೆಯ ವಿಶ್ವಾಸ, ಗೌರವಗಳಿದ್ದವು. ಈಗ ಚಂದ್ರ ಮಾಮೂಲು ಸೂಳೆಯಾಗುತ್ತಾಳೆ ಎಂದು ಬೀದಿಯವರಿಗೆ ತಿಳಿದಿದ್ದು ಕೇವಲ ನಾಲ್ಕೈದು ದಿನಗಳಿಗೆ ಮೊದಲು.

ಅಲ್ಲಿಯ ಸಂಸಾರಿಗಳಿಗೆ ಏಕೋ ಅದು ಅಷ್ಟು ಹಿತವೆನಿಸಲಿಲ್ಲ. ಎರಡು ದಿನಗಳಿಂದ ಅವಳ ಮನೆಯ ಚಲನವಲನಗಳನ್ನು ಕಿಟಕಿಯ ಸಂದುಗಳಲ್ಲಿ, ಬಾಗಿಲ ಬಿರುಕಿನಲ್ಲಿ ಕಣ್ಣಿಟ್ಟು ನೋಡಿಯಾಯಿತು. ಎಂಟು ಹತ್ತು ದಿನಗಳಿಂದ ದಿನಾ ರಾತ್ರಿ ಕಾರು ಬಂದು ಮನೆಯ ಮುಂದೆ ನಿಲ್ಲುತ್ತದೆ. ಸರ್ವಾಲಂಕೃತಿ ಚಂದ್ರ ಗೆಜ್ಜೆ ಧ್ವನಿಗೆಯುತ್ತಾ ಒಯ್ಯಾರದಿಂದ ಮನೆಗೆ ಬಂದುದನ್ನು ಸುತ್ತಮುತ್ತಲಿನ ಗಂಡಸರೂ ಕಂಡೂ ಕಾಣದಂತೆ ನೋಡಿದರು. ಮೊದಲು ನಿರಾಭರಣ ಸುಂದರಿಯಾಗಿದ್ದ ಚಂದ್ರ ಈಗ ಸಕಲಾಭರಣ ಸುಂದರಿ, ವೇಶ್ಯೆ ಚಂದ್ರಾಳ ಮೇಲೆ ಅನೇಕ ರಸಿಕರ ಕಣ್ಣುಗಳು ಹರಿದಾಡಿದವು. ಆದರೆ ಅವಳ ಗಗನಕುಸುಮ. ತಮಗೆ ದೊರಕುವವಳಲ್ಲವೆಂದು ಎಲ್ಲರಿಗೂ ಗೊತ್ತು ನೋಡಿ ದಣಿದರು. ಸಂಪ್ರದಾಯಕ್ಕೋಸ್ಕರ ಈ ಗೆಜ್ಜೆಯನ್ನು ಕಟ್ಕೊಂಡೆ. ಒಳ್ಳೇ ಕುಶಲತೆಯಿಂದ ಅಲಂಕೃತವಾಗಿದೆ ಶಯ್ಯಾಗೃಹ. ತಾನು ಕೊಟ್ಟ ಹಣವನ್ನು ಸದುಪಯೋಗಪಡಿಸಿದ್ದಾಳೆ. ತನ್ನ ರಾಣಿ ಚಂದ್ರಮತಿ ಅಂದುಕೊಂಡರು ಗಂಗಯ್ಯ. ಚಂದ್ರ ಬಳುಕುತ್ತ ಬಂದು ಅವರೆದುರು ನಿಂತಳು. ನಿರಾತಂಕವಾಗಿ ಅವಳ ರೂಪ ಸುಧೆಯನ್ನು ಸವಿದರು ಆತ. ಅವಳ ಕಿರಿನಡುವಿನಲ್ಲಿ ಹರಳು, ಚಿನ್ನದ ಗೆಜ್ಜೆಯ ವಡ್ಯಾಣ ಮಿಣಮಿಣನೆ ಮಿನುಗಿತು. ಯಾಕೋ ಸಂಜೆಯಿಂದ ತುಂಬಾ ತಲೆನೋವು.

ಶಾಪ ಕಾದಂಬರಿಯಲ್ಲಿ ಕಂಡು ಬರುವ ವೇಶ್ಯಾ ಸಮಸ್ಯೆಗಳು :

ಸರೋಜಿನಿ ರಂಗಸಾನಿಯ ಮಗಳು. ರಂಗಸಾನಿ ವೇಶ್ಯೆಯ ಹೆಂಗಸು. ತನ್ನ ಜೀವನದಲ್ಲಿಯ – ತನ್ನ ಮನೆಮಾರಿನ ಜೀವನದಲ್ಲಿಯ ಭೀಕರತೆಯನ್ನು ನೋಡಲಾರದವಳಾಗಿ ಆಕೆ ಹಾಗೆ ಕಣ್ಣು ಮುಚ್ಚಿದ್ದಳೆಂದೂ ಹೇಳಬಹುದಿತ್ತು. ಯಾವ ಒಂದು ಪರಂಪರೆಯನ್ನು ಮುರಿದು ಸುಖವಾಗಿ ಬಾಳಬೇಕೆಂಬ ಬಯಕೆಯಿಂದ ಸರೋಜಿನಿ ತನ್ನ ವಿದ್ಯಾಭ್ಯಾಸಕ್ಕಾಗಿ ಕಾಲೇಜಿಗೆ ಬಂದಿದ್ದಳೋ ಆ ಬಯಕೆಯನ್ನು ಸಾಧ್ಯವಿದ್ದ ಯುಕ್ತಿಗಳೆಲ್ಲವನ್ನೂ ಪ್ರಯೋಗಿಸಿ ತನ್ನ ತಾಯಿ ಮಣ್ಣುಗೂಡಿಸಬೇಕೆನ್ನುತ್ತಿರುವಂತಿತ್ತು. ತನ್ನ ಧ್ಯೇಯವನ್ನು ಬೆಳೆಯಗೊಡದೆ ಅದನ್ನು ಚಿಗುರುವಾಗಲೇ ಚಿವುಟಿಹಾಕಬೇಕೆಂದು ಹೊಂಚು ಹಾಕಿದ ಪ್ರಪಂಚವನ್ನು ನೋಡುವುದೇ ಬೇಡ ಎಂದು ಕಣ್ಣು ಮುಚ್ಚಿದಳು. ಪರೀಕ್ಷೆ ಸಮೀಪಿಸಿದಂತೆ ವಸತಿಗೃಹದ ವಾಸವೂ ಕೊನೆಯ ತಿಂಗಳಿಗೆಂದು ಸರೋಜಿನಿ ತಾಯಿಯ ಹತ್ತಿರ ಹಣ ಕೇಳಿದ್ದಳು. ಆದರೆ ಹಣ

ಸರೋಜಿನಿಯ ಕೈಗೆ ತಲುಪುವಾಗಲೆಲ್ಲವೂ ತಾಯಿ ತನ್ನ ಕೈವಾಡವನ್ನು ತೋರಿಸುತ್ತಿದ್ದಳು. ತನ್ನಿಂದ ದೂರವಾಗಬಹುಸುತ್ತಿದ್ದ ಮಗಳನ್ನು ಹಿಡಿದು ಹತ್ತಿರವಿರಿಸಿಕೊಳ್ಳಬೇಕೆನ್ನುತ್ತಿದ್ದಳು. ಅವಳ ಮನೆಯಲ್ಲಿ ಮೂರು ನಾಲ್ಕು ತಲೆಮಾರುಗಳಿಂದಲೂ ನಡೆದು ಬಂದ ಸೂಳೆಗಾರಿಕೆಯ ಪರಂಪರೆಯನ್ನು ಮುಂದುವರಿಸುವ ಅಸಂಸ್ಕೃತವಾದ ಆಸೆಯಾಗಿತ್ತು. ಇದನ್ನು ನೆನೆದಾಗ ಸರೋಜಿನಿಯೆಂದುಕೊಳ್ಳುತ್ತಿದ್ದಳು. 'ಈಕೆ ನನ್ನ ತಾಯಿಯಲ್ಲ! ನನ್ನ ಜನ್ಮದಾರಭ್ಯದ ವೈರಿ![1] ಪಾಪದ ದಾರಿಗೆ ನೂಕುವ ಈ ಶಕ್ತಿ ನನ್ನ ಜನ್ಮಕ್ಕೊಂದು ಶಾಪ! ಎಂದು ಮರುಗುತ್ತಿದ್ದಳು. ಅದೇ ಊರಿನಲ್ಲಿ ವಕೀಲಿಯ ವ್ಯವಸಾಯದ ನೆಪದಿಂದ ಸುಖವಾಗಿ ಕಾಲ ಕಳೆಯುತ್ತಿದ್ದ ಗೋವಿಂದಗೌಡರ ಕಡೆಯಿಂದ ತೆಗೆದುಕೊಳ್ಳಬಹುದೆಂದು ತಾಯಿ ಬಯಸಿದ್ದಳು. ತನ್ನ ತಾಯಿಯ ಬಯಕೆಗೆ ಹತ್ತು ಬಗೆಯಲ್ಲಿ ಸಹಕಾರವನ್ನು ನೀಡಿ ತನ್ನ ಸ್ವಾರ್ಥವನ್ನು ಸಾಧಿಸಬೇಕೆಂದಿದ್ದ ಗೋವಿಂದಗೌಡನೂ ತನ್ನ ಬದುಕಿನಲ್ಲಿಯ ಒಂದು ವಿಷಮಶಕ್ತಿಯೆಂದು ಭಾವಿಸಿದ ಸರೋಜಿನಿ ಈ ಇವರಿಬ್ಬರೂ ಹರಡುತ್ತಿದ್ದ ಬಲೆಗಳನ್ನು ದಾಟಿಹೋಗುವುದು ಎಂದಾದರೂ ಸಾಧ್ಯವಾಗಬಹುದೆಂದು ಗೌಡನ ಇಂಗಿತವಿದ್ದಿತೆಂಬುದೂ, ಆಕೆ ಕಾಲೇಜಿಗಾಗಿ ತಮ್ಮ ಊರಿಗೆ ಬಂದರೆ ಎಲ್ಲವೂ ಸರಿಹೋಗುವುದೆಂದೂ, ತಾನು ಆಕೆಯ ವೆಚ್ಚವನ್ನೆಲ್ಲ ವಹಿಸಿಕೊಳ್ಳುತ್ತೇನೆಂದು ಹೇಳಿದನು. ಸರೋಜಿನಿಗೆ ಮೂರು-ನಾಲ್ಕು ಸಂದರ್ಭಗಳಲ್ಲಿ ಗೌಡನ ಕೈಗೆ ಸಿಕ್ಕು ಏನಾದರೂ ಹೇಳಿ ಪಾರಾಗಬೇಕಾದರೆ ಸರೋಜಿನಿಗೆ ಸಾಕಾಗಿಹೋಗಿತ್ತು. ಇಂಥ ಪ್ರತಿಯೊಂದು ಸಂದರ್ಭದಲ್ಲಿಯೂ ಆಕೆ ಅಂದು ಕೊಳ್ಳುತ್ತಿದ್ದಳು: 'ಸೂಳೆಗಾರಿಕೆಯಲ್ಲಿ ಹುಟ್ಟಿದ್ದೇ ಒಂದು ಶಾಪದಂತೆ ನನ್ನನ್ನು ಬೆನ್ನಟ್ಟುತ್ತಿದೆ.[2] ಈ ಎಲ್ಲ ಚೇಷ್ಟೆಗಳಲ್ಲಿ ಗೌಡನಿಗೆ ಬುದ್ಧಿಪೂರ್ವಕವಾಗಿ ಉತ್ತೇಜನ ಕೊಡುತ್ತಿದ್ದ ನನ್ನ ಈ ತಾಯಿ ಈ ಶಾಪದ ಮೂರ್ತಸ್ವರೂಪವಾಗಿದ್ದಾಳೆ ಎಂದು ತನಗೆ ತಾನೇ ನಿಂದಿಸುಕೊಳ್ಳುತ್ತಾಯಿದ್ದಳು. ಮಾಧವನಿಗೆ ಈ ಮಾತು ತಿಳಿಸಿದಾಗ ಮಾಧವನಿಗೆ ಸರೋಜಿನಿಗೆ ತನ್ನ ಬದುಕಿನ ಅಸಹಾಯಕತೆಯ ಬಗ್ಗೆ ಕನಿಕರವೆನಿಸತೊಡಗಿತು. ಸಮಾಜದಲ್ಲಿಯ ಸ್ಥಾನಮಾನಗಳಿಗೆ ಯಾವ ಬೆಲೆ? ವ್ಯಕ್ತಿಯ ಹಿರಿಮೆಯೆ ಮುಖ್ಯ ಎಂದು ವಾದಿಸುವುದು ಮೂರ್ಖತನವೆನಿಸಿತು.

1 – 2 [illegible] – 19 [illegible] 22

ಸರೋಜಿನಿಗೆ ವ್ಯಕ್ತಿ ಹಿರಿಯದಾದರೆ ಸಮಾಜದ ಶಕ್ತಿಯೂ ತಗ್ಗಬಹುದು. ಆದರೆ ಸಮಾಜವನ್ನೇ ಬಗ್ಗಿಸಿ, ಮೀರಿ ನಿಲ್ಲುವ ಯೋಗ್ಯತೆ ತನ್ನಲ್ಲಿದೆಯೇ, ಸಮಾಜ ತನ್ನನ್ನು ನೋಡುವ ದೃಷ್ಟಿಯೆಂದರೆ ಗೋವಿಂದಗೌಡ ತನ್ನನ್ನು ನೋಡುವ ದೃಷ್ಟಿಯಲ್ಲದೆ ಬೇರೊಂದಲ್ಲ. "ಎಲ್ಲರಂತೆ ಬದುಕಬೇಕೆಂದಿರುವ ನನ್ನನ್ನು ಹಾಗೆ ಬದುಕಗೊಡಬಾರದೆಂದು ಯಾಕೆ ಯತ್ನಿಸುತ್ತಿದ್ದೀಯ? ಎಂದು ಆತನನ್ನು – ಸಮಾಜವನ್ನು – ಕೇಳುವುದು ಹೇಗೆ? ಎಂಥ ಸಂಕಟ ಬಂದರೂ ತಾಯಿಯ ಮಾತಿಗೆ ಸರಿಯಾಗಿ ವೇಶ್ಯಾವೃತ್ತಿಯ ಕೊಳಚೆಯಲ್ಲಿ ಬಿದ್ದು ಕೊಳೆಯುವ ಹಾಗಿಲ್ಲ – ಎಂದು ಇರುಳು ಕಂಡ ಬಾವಿಯಲ್ಲಿ ಹಗಲು ಬೀಳುವುದುಂಟೆ? ಹಾಗೆ ಮಾಡುವುದು ತನ್ನ ಬುದ್ಧಿಗೆ ವಿವೇಕಕ್ಕೆ ಸ್ತ್ರೀತ್ವಕ್ಕೆ ಖಂಡಿತವಾದ ಅವಮಾನ ಎಂದುಕೊಳ್ಳುತ್ತಿದ್ದಳು. "ನಿನ್ನ ಬುದ್ಧಿಗೆ ಅವಮಾನವಾಗಬಹುದು. ಆದರೆ ನಿನ್ನ ಸ್ತ್ರೀತ್ವಕ್ಕೆ ಅವಮಾನವಲ್ಲ![3] ಎಂದು ಒಂದು ದನಿ ಹೇಳಿತು. ದನಿ ಗೌಡನ ದನಿಯಂತಿತ್ತು. "ನೀನು ಸ್ತ್ರೀಯಾಗಿರಬಹುದು. ಆದರೆ ನೀನು ವೇಶ್ಯೆ! ಮೂರು ನಾಲ್ಕು ತಲೆಮಾರುಗಳಿಂದ ನಿನ್ನ ನಾಳಗಳಲ್ಲಿ ವೇಶ್ಯೆಯ ರಕ್ತ ಹರಿಯುತ್ತಿದೆ" ಆ ರಕ್ತದ ಪ್ರವಾಹವನ್ನು, ಗುಣದೋಷಗಳನ್ನು ನೀನು ನಿನ್ನ ಬುದ್ಧಿವಂತಿಕೆಯಿಂದ ಬದಲಾಯಿಸಲಾರೆ!" ಹೀಗೆ ಗೌಡನು ಹೇಳಿದಾಗ ಸರೋಜಿನಿ ತನ್ನ ತಾಯಿಯನ್ನು ಮೊದಲಿಗೆ ನಿಂದಿಸಿಕೊಳ್ಳುವಳು. ನಿನ್ನ ಸಾವು ನನ್ನ ಬದುಕು.. "ಯಾರ ಸಾವು, ಯಾರ ನೋವು"[4], ತಂದೆ – ತಾಯಿಗಳ ಪಾಪಕ್ಕೆ ಮಕ್ಕಳಿಗೆ ಪ್ರಾಯಶ್ಚಿತ್ತ; ಮೊಮ್ಮಕ್ಕಳು ಮರಿಮಕ್ಕಳಿಗೆ ಪ್ರಾಯಶ್ಚಿತ್ತ; ಪೂರ್ವಜರ ಪಾಪ ಉತ್ತರೋತ್ತರವಾಗಿ ಶಾಪವಾಗಿ ಪ್ರಾಯಶ್ಚಿತ್ತಕ್ಕಾಗಿ ಕಾದು ನಿಂತಿದೆ! ಗೌಡ ಕಾಮುಕ ರಾಕ್ಷಸ. ಮಾಧವ ಉದ್ಧಾರಕ ಪುರುಷ!" "ತಿಳಿದ ಮೋಸಕ್ಕಿಂತ ತಿಳಿಯದ ಮೋಸಕ್ಕೆ ಬಲಿ ಬೀಳುವುದು ತಪ್ಪಲ್ಲ!" ಸರೋಜಿನಿಯ ತಾಯಿಯ ದೇಹಸ್ಥಿತಿ ಮಾತ್ರ ದಿನದಿನಕ್ಕೆ ಕೆಡುತ್ತಯಿತ್ತು. ತಾಯಿಯ ದೇಹ ಪರೀಕ್ಷೆಗಾಗಿ ಮುಂಬಯಿಗೆ ಹೊರಡಬೇಕಾಗಿತ್ತು. ಮುಂಬಯಿಗೆ ಬಂದು ತೋರಿಸಿದಾಗ ತಾಯಿ ಗುಣಮುಖಳಾಗುವುದು ಕಷ್ಟದ ಮಾತು ಎಂದು ಡಾಕ್ಟರ್ ಹೇಳುವರು. ಆಕೆಯ ದೇಹದ ರಕ್ತವೂ ಪೂರ್ತಿಯಾಗಿ ಕೆಟ್ಟಿತು. ಮೈಯಲ್ಲಿ ರಕ್ತವೂ ಇಲ್ಲ, ಇದ್ದುದಷ್ಟೆಲ್ಲ ವಿಷ! ಈ ಕಡೆ ಗೌಡನು ಸರೋಜಿನಿಯನ್ನು ಬಲತ್ಕರಿಸಿ ಅವಳ ಜೀವನವನ್ನು ಹಾಳು ಮಾಡುವನು. ಆಕೆಯ ಮನಸ್ಸು

[illegible]

ಇನ್ನು ಬದುಕಿ ಏನು ಎಂಬ ವೇದನೆಯೊಂದೇ ಬದುಕನ್ನು ಕನಸನ್ನಾಗಿ ಮಾಡಿ ತೋರಿಸುತ್ತಿತ್ತು. ಹಾರಿಕೊಂಡು ಜೀವಕೊಟ್ಟು ಗೌಡನ ಮೇಲೆ ಸೇಡು ತೀರಿಸಿಕೊಂಡರೆ? ಯೋಚಿಸಿ ಬೇಸರಪಟ್ಟಿದ್ದಳು. ಡಾಕ್ಟರ್ ಗೌಡನಿಗೆ ರಂಗಸಾನಿಯ ವಿಷಯ ತಿಳಿಸಿ ಆಕೆಯ ಮಗಳಾದ ಸರೋಜಿನಿಯನ್ನು ಒಂದು ಸಾರಿ ರಕ್ತದ ಪರೀಕ್ಷೆ ಮಾಡಿಸಿದ್ದಾಗ ತಾಯಿಯ ಬೇನೆಯ ತೀವ್ರ ಸ್ಥಿತಿ ಅಲ್ಲಿರದಿದ್ದರೂ ಆಕೆಯ ರಕ್ತದಲ್ಲಿಯ ಆ ವಿಷದ ಪ್ರಮಾಣ ಅಸಾಧಾರಣವಾಗಿತ್ತು. ಸರೋಜಿನಿ ವಿಷಕನ್ಯೆ, ರಕ್ತದ ಶಾಪ! ಇದು ಅನುವಂಶಿಕವಾಗಿ ರಕ್ತದಿಂದ ಬಂದದ್ದು.... ಈ ವಿಷಯ ತಿಳಿದಾಗ ಸರೋಜಿನಿಗೆ ಪ್ರಜ್ಞೆ ತಪ್ಪುವುದರಲ್ಲಿತ್ತು. "ಅಮ್ಮಾ!" ಎಂದು ಚಿಟ್ಟನೆ ಚೀರಿ, ಇದ್ದಕ್ಕಿದ್ದ ಹಾಗೆಯೇ ಕಿಟಕಿಯ ಹತ್ತಿರ ಕುಸಿದು, ನೆಲಕ್ಕೆ ಬಿದ್ದಳು. ಸರೋಜಿನಿಯ ಕಣ್ಣೆದುರು ಸುತ್ತಲಿನ ಪ್ರಪಂಚ ಗಿರ್ರೆಂದು ಬುಗುರಿಯಂತೆ ತಿರುಗುತ್ತಿತ್ತು. ತನ್ನ ಬದುಕನ್ನು ಮುರಿದು ಮೂರಾಬಟ್ಟೆ ಮಾಡಿದ ದುಃಖವನ್ನು ತೋಡಿಕೊಳ್ಳಲಾದರೂ ಆದೀತು ಎಂಬ ಆಸೆಯನ್ನು ಮಾತ್ರ ಆಕೆಯಿಂದ ತೊರೆಯುವುದಾಗಲಿಲ್ಲ. ಮಾಧವ ಸರೋಜಿನಿಗೆ ಅಣ್ಣನಾಗಿ ಅವಳ ಮುಂದಿನ ಜೀವನಕ್ಕೆ ತೋಟದ ಕಾಗದಗಳನ್ನು ಕೊಟ್ಟು ಹೋಗುವವನು. ಹೀಗೆ ಸರೋಜಿನಿ ಈ ಶಾಪದ ಕಾದಂಬರಿಯಲ್ಲಿ ಭಿನ್ನ ಪಾತ್ರವಾಗಿ ಕಾಣುವಳು.

ಅಧ್ಯಾಯ – ೫

ಕಾದಂಬರಿಗಳಲ್ಲಿ ಕಂಡು ಬರುವ ಭಾಷಾ ಮತ್ತು ನಿರೂಪಣಾ ಶೈಲಿ

ಭಾಷೆ ಸಮಾಜದ ಒಂದು ಅವಿಭಾಜ್ಯ ಅಂಗ ಮತ್ತು ಅಭಿವ್ಯಕ್ತಿಯ ಸಾಧನ. ಮೌಖಿಕವಾಗಿದ್ದ ಭಾಷೆ ಕಾಲಾಂತರದಲ್ಲಿ ಬರವಣಿಗೆಯ ರೂಪ ಪಡೆದುಕೊಂಡಿತು. ಮನುಷ್ಯ ತನ್ನ ಭಾವನೆಗಳನ್ನು ಅನುಭವಗಳನ್ನು ವ್ಯಕ್ತಪಡಿಸಲು ಭಾಷೆ ಬಹಳ ಮುಖ್ಯ. ಭಾಷೆ ಇಲ್ಲದೆ ಭಾವನೆಗಳಿಗೆ ನಿರ್ದಿಷ್ಟ ರೂಪ ಕೊಡಲು ಸಾಧ್ಯವಿಲ್ಲ. ಹಾಗಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಭಾಷಾ ಶೈಲಿಯೂ ಬದಲಾಗುತ್ತದೆ. ಪ್ರಾದೇಶಿಕತೆ ಮತ್ತು ಸ್ಥಳೀಯತೆಯನ್ನು ಸಾಂಸ್ಕೃತಿಕವಾಗಿ ನಿರ್ಧರಿಸುವಲ್ಲಿ ಭಾಷೆ ಒಂದು ಊರುಗೋಲು. ಸಾಹಿತ್ಯಕ್ಕೂ ಮತ್ತು ಭಾಷೆಗೂ ಅವಿನಾಭಾವ ಸಂಬಂಧವಿದೆ. ಏಕೆಂದರೆ ಸಾಹಿತ್ಯ ಸಂಭವಿಸುವುದೇ ಭಾಷೆಯ ಮೂಲಕ.

ಭಾಷೆ ಕಾದಂಬರಿ ಸೃಷ್ಟಿಗೆ ಅನಿವಾರ್ಯ ಅದರ ಜೀವಂತಿಕೆ ಇರುವುದೇ ಭಾಷೆಯಲ್ಲಿ. ಕಾದಂಬರಿಯಲ್ಲಿ ಸಂಭವಿಸುವ ಘಟನೆಗಳನ್ನು ತಾರ್ಕಿಕವಾಗಿ, ಭಾಷಿಕವಾಗಿ ವಿವರಿಸಿಕೊಳ್ಳಲು ಭಾಷಾ ಪರಿಕರಗಳು ನೆರವು ನೀಡುತ್ತದೆ ಮತ್ತು ಗ್ರಹಿಸಬೇಕಾದ ನೆಲೆಯನ್ನು ತಾನೇ ಸೂಚಿಸುತ್ತದೆ. ತಂತ್ರ, ಶೈಲಿ, ನಿರೂಪಣಾ ವಿಧಾನ, ಸ್ವರೂಪ, ಸಂಕೇತ, ಪ್ರತಿಮೆಗಳು, ಅಲಂಕಾರಗಳು, ಗಾದೆ, ಒಗಟು, ನುಡಿಗಟ್ಟು ವರ್ಣನೆಗಳು ಮುಂತಾದ ಭಾಷಾ ಪರಿಕರಗಳ ಬಳಕೆಯಿಂದ ಕಾದಂಬರಿಗಳ ತೂಕ ಹೆಚ್ಚಾಗುತ್ತದೆ. ದೃಶ್ಯ ನಿರ್ಮಾಣ, ಪಾತ್ರಸೃಷ್ಟಿಯಲ್ಲಿ ಇವುಗಳನ್ನು ಬಳಸಿಕೊಂಡಾಗ ಭಾಷೆಯ ಶಕ್ತಿ ಮತ್ತು ಕೃತಿಯ ಮೌಲ್ಯವೂ ಕೂಡ ಹೆಚ್ಚಾಗುತ್ತದೆ. ಹಾಗಾಗಿ ಒಟ್ಟಾರೆಯಾಗಿ ಅಧ್ಯಯನ ಮಾಡಲು ಭಾಷೆ ಮತ್ತು ನಿರೂಪಣಾ ಶೈಲಿಯೂ ಬಹಳ ಮುಖ್ಯವೆನಿಸುತ್ತದೆ.

"ಗೆಜ್ಜೆಪೂಜೆ" ಮತ್ತು "ಶಾಪ" ಕಾದಂಬರಿಗಳಲ್ಲಿ ಕಂಡು ಬರುವ ಭಾಷಾ ಶೈಲಿಯನ್ನು ಕುರಿತು ಹೇಳುವುದಾದರೆ ಜನರ ಆಡು ಭಾಷೆಯ ಅತ್ಯಂತ ಯಶಸ್ವಿ ಬಳಕೆ ಈ ಕಾದಂಬರಿಗಳಲ್ಲಿದೆ. ಭಾಷೆ ಕೆಲವೊಮ್ಮೆ ತೀರ ಪ್ರಾದೇಶಿಕವೆನ್ನಿಸಿದರೂ ಅದು ಕಾದಂಬರಿಗಳ

ವೈಶಿಷ್ಟ್ಯವಾಗಿದೆ. ಓದುಗರ ಈ ಪ್ರಾದೇಶಿಕತೆಯ ಕೋಟೆಯನ್ನು ಭೇಧಿಸಿಕೊಂಡು ಒಳಹೊಕ್ಕರೆ ಮಾತ್ರ ಅಲ್ಲಿ ಹುದುಗಿರುವ ನಿಜವಾದ ಆನಂದಾನುಭವವನ್ನು ಪಡೆಯುತ್ತಾರೆ. ಪ್ರಾರಬ್ಧ ಮುಂಡೇಗಂಡ, ಪೋಲಕ್, ಇಸ್ಕೂಲು, ಗಳಸ್ಯ-ಕಂಠಸ್ಯ, ಧೂರ್ಜಟಿ, ಕುಚೋದ್ಯ, ಗೊಳ್, ಗೊರಟೂ, ಸೂಳೇ-ಸೂಳೇ ಸುಪ್ಪಾಣಿ, ರಿಪ್ಪಾಣಿ, ಇದ್‌ಬದ್, ಯಾವಾಟಿ, ತುಗುರಾ ಬುಗರಿ, ಐಲ್‌ಪೈಲ್, ಇಕ್ಕೊಳಪ್ಪ, ಲಟಲಟ ಲಟಿಕೆ, ಚಿಳ್ಳೆ-ಪಿಳ್ಳೆ, ಅತೋಭ್ರಷ್ಟ-ತತ್ರೋಭ್ರಷ್ಟ, ನೆಚ್ಕೋಬೇಡವ್ವ, ಗಿಲಗಿಚ್ಚಿ, ಇಪ್ರೀತ, ರಿಮಾಂ, ಶಯ್ಯಾಗೃಹ, ಗಿಲ್‌ಗಿಲ್, ಕಕ್ಕ, ಇಂಗಿತ, ಗಾಳಿ ಗುಂಟ, ಸುಂಕ, ವಿಂಣ್ಸ್, ನೆಳಲು, ಪವಣಿಸುವ, ವೀಳ್ಯ, ಔಚಿತ್ಯ, ಟಾಂಗೇ, ಆಗಾಣರಿ, ನಾಕಾಣೆ, ಪಾವಟಿಗೆ, ಸ್ಲೆಂಡಿಡ್, ಭೆಟ್ಟಿ, ಓರಣ ಹ್ಯಾಂಲೆಟ್, ಡಿವಿನಿಟಿ, ಆನರ್ಸ್, ದಾದೂ, ಗುಪಿತ, ಜೋಡs, ಪೂರ್ವಾಪರ, ಮೂಕವೃತ್ತಿ, ಪಟಪಟ, ನಸ್ಯ, ನಡುಮನೆ, ಮಾರ್ದನಿ, ಬೆಳ್ಳಬೆಳತನಕ, ಎರಕ, ಹೃದ್ಯಸೌಂದರ್ಯ, ಫೀಸ್ಟು, ಆರ್ತ ದಾದರ್ ನಿಲ್ದಾಣ, ವೈಯ್ಯಾರ, ಟ್ರಾಮು, ನೆನಹು, ಗಾಸಿ ಮುಂತಾದ ಇಂಗ್ಲೀಷ್ ಪದಗಳು ಸಮರಸವಾಗಿ ಬೆರತುಕೊಂಡಿದೆ. ಇಲ್ಲಿಯ ಭಾಷೆ ಎರಡು ಪ್ರಮುಖ ಪ್ರವಾಹಗಳಾಗಿ ಹರಿದಿದೆ. ಒಂದು ಬ್ರಾಹ್ಮಣ ವರ್ಗಕ್ಕೆ ಸೇರಿದ ಶಿಷ್ಟ ಭಾಷೆ ಮತ್ತೊಂದು ಸಾಮಾನ್ಯ ಭಾಷೆ ವರ್ಗಕ್ಕೆ ಸೇರಿದ ಆಡು ಭಾಷೆಯಾಗಿದೆ. ಅವರವರು ಬಳಸಿದ ಭಾಷೆಯ ಮೇಲಿಂದಲೇ ಅವರ ಜಾತಿಗಳನ್ನು ಗುರುತಿಸಬಹುದು.

ಗ್ರಾಮ ಜೀವನದ ಗಾಢ ಸಂಪರ್ಕ ಕಾದಂಬರಿಗಳ ಭಾಷೆಯಾಗಿರುವುದರಿಂದ ಗಾದೆಗಳು, ಒಗಟುಗಳು, ನುಡಿಗಟ್ಟುಗಳು ಬರವಣಿಗೆ ಶೈಲಿಯಲ್ಲಿ ಆಕರ್ಷಣೆಯನ್ನು ಮೂಡಿಸುತ್ತದೆ. ಇವುಗಳನ್ನು ಲೇಖಕಿ ಮತ್ತು ಲೇಖಕರು ಸಮಯೋಚಿತವಾಗಿ ಬಳಸಿಕೊಂಡು ಕಾದಂಬರಿಗಳಿಗೊಂದು ಮೆರಗನ್ನು ಮತ್ತು ಕಲಾತ್ಮಕತೆಯನ್ನು ನೀಡಿದ್ದಾರೆ. ಪ್ರಾರಂಭದಲ್ಲಿ ಗ್ರಾಮ್ಯ ಭಾಷೆಯ ಬಳಕೆ ಓದುಗರಿಗೆ ಕ್ಲಿಷ್ಟವೆನಿಸಿದರೂ, ತದನಂತರದಲ್ಲಿ ಅದರ ಆಳಕ್ಕೆ ಇಳಿದಾಗ ಅದರಲ್ಲಿರುವ ಜ್ವಲಂತ ಗುಣಾತ್ಮಕ ಅಂಶಗಳು, ಹೃದಯವಂತಿಕೆ ಮಾನವೀಯ ಅನುಭವ, ಅನುಕಂಪಗಳ, ನೆಲೆಯಿಂದ ಉಕ್ಕಿ ಬಂದಂಥ ಸೃಜನಾತ್ಮಕ ಕಾದಂಬರಿಯಾಗಿ, ಆ ಭಾಷೆಯು ಸಹಜ ಕಾವ್ಯಮಯತೆಯಿಂದ ಕೂಡಿದೆ ಎಂದನ್ನಿಸುತ್ತದೆ.

"ಗೆಜ್ಜೆಪೂಜೆ" ಮತ್ತು "ಶಾಪ" ಕಾದಂಬರಿಗಳಲ್ಲಿ ರೂಪಿಸಿಕೊಂಡಿರುವ ಭಾಷೆಯ ಹದಕ್ಕೆ ಸಂಬಂಧಿಸಿದಂತೆ ಎರಡು ವಿಚಾರಗಳು ಹೇಳುವುದು ಅವಶ್ಯವೆನಿಸುತ್ತದೆ. ಸೋಮು ಮತ್ತು ಚಂದ್ರಮತಿ ಬ್ರಾಹ್ಮಣರ ಜಾತಿಗೂ ಸೇರಿದ್ದರೂ ಸಹ ಚಂದ್ರಮತಿ ಈ ವೇಶ್ಯೆಯ ಜಾತಿಗೆ ಹುಟ್ಟಿರುವ ಹಾಗೇ ಪ್ರಕಟಗೊಳ್ಳುವ ಹಾಗೂ ಲೋಕದ ಭಾಷೆ ಮತ್ತು ಅನ್ನಪೂರ್ಣ ಮತ್ತು ಚಂದ್ರಮತಿಯೊಂದಿಗೆ ಪ್ರಕಟವಾಗುವ ಶಿಷ್ಟಲೋಕದ ಭಾಷೆ ಪ್ರಯೋಗದ ರೀತಿಯಿಂದ ಆಕರ್ಷಕವಾಗಿದೆ. ಸೋಮುವಿನ ಲೋಕದ ಭಾಷೆಯಲ್ಲಿ ವ್ಯಕ್ತವಾಗಿರುವ ಜೀವಂತಿಕೆ ಜೀವನಾನುಭವ ಚಂದ್ರಾಳ ಶಿಷ್ಟ ಲೋಕದ ಭಾಷೆಯಲಿಲ್ಲ. ವೇಶ್ಯೆಯರ ತಮ್ಮ ಆಡು ಭಾಷೆಯ ಕುರಿತು ತಾಳಿದ ಸ್ವಾಭಿಮಾನ, ಅನುಮಾನ, ಸಂಕೋಚ ಹಾಗೂ ಸಂದಿಗ್ಧತೆ ಎಂಬ ಅನುಭವದ ರೂಪಕ್ಕೆ ದೂಕುತ್ತದೆ. ಶಿಷ್ಟರ ಆಡು ಭಾಷೆಯೊಂದಿಗೆ ಬ್ರಾಹ್ಮಣರ ಆಡುಭಾಷೆಯನ್ನು ಅಕ್ಕಪಕ್ಕದಲ್ಲಿಯೇ ದಾಖಲಾಗುವುದರಿಂದ ಸೋಮುವಿನ ಲೋಕದ ಭಾಷೆಯಲ್ಲಾಗುವ ಉಚ್ಚಾರದ ಲೋಪದೋಷಗಳು ಕಾದಂಬರಿಯ ಉದ್ದಕ್ಕೂ ಕಣ್ಣಿಗೆ ರಾಚುವಂತೆ ಕಾಣುತ್ತದೆ. ಈ ಗೆಜ್ಜೆಪೂಜೆಯ ಕಾದಂಬರಿಯಲ್ಲಿ ಕಂಡು ಬರುವ "ಘಟಸ್ಫೋಟ' ಕರ್ಮಾಚರಣೆಯ ಸಂದರ್ಭದಲ್ಲಿ ಅನ್ನಪೂರ್ಣಳೂ ಬ್ರಾಹ್ಮಣ ಜಾತಿಗೆ ಸೇರಿದವಳೆಂದು ಚಂದ್ರಶೇಖರಯ್ಯರವರು ನಿಜ ಹೇಳಿದ ಪಾತ್ರದ ಪ್ರಸಂಗವೂ ಕೈಯಲ್ಲಿ ಕನ್ನಡಿಕೊಟ್ಟು ಮುಖ ನೋಡಿಕೊಳ್ಳಲು ಹೇಳಿದಂತಹ ಅನುಭವವಾಗುತ್ತದೆ ಚಂದ್ರಾಳಿಗೆ. ಸತ್ಯ ಯಾವಾಗಲೂ ಕಹಿಯಾಗಿಯೇ ಇರುತ್ತದೆ. ಅದನ್ನು ಸ್ವೀಕರಿಸುವ ಅನಿವಾರ್ಯವೇನೋ ಎನಿಸುತ್ತದೆ.

ಒಂದು ಭಾಷೆ ಕೃತಿಯಲ್ಲಿ ದಾಖಲಾದಾಗ ಅಲ್ಲಿ ಕೇವಲ ಭಾಷೆ ಮಾತ್ರ ಮೂಡಿ ಬರುವುದಿಲ್ಲ. ಬದಲಾಗಿ ಭಾಷೆಯೊಂದಿಗೆ ಆಯಾ ಜನಾಂಗದ ಸಂಸ್ಕೃತಿಯು ಮೂಡಿಬರುತ್ತದೆ. ಪ್ರತಿ ಜನಾಂಗವೂ ತನ್ನದೇ ಆದ ಭಾಷಾ ಶೈಲಿಯನ್ನು ಹೊಂದಿರುತ್ತದೆ. ಈ ಕಾದಂಬರಿಗಳಲ್ಲಿ ಪಾತ್ರಗಳ ಮನೋಜಗತ್ತನ್ನು ಮಂಡಿಸುವಾಗ ಶಿಷ್ಟಭಾಷೆಯ ವಾಕ್ಯಗಳು, ಪದರಚನೆ, ಸಾಮಾಜಿಕ ಉಪಭಾಷೆ ದಾಖಲಾಗುತ್ತದೆ. ಈ ಕಾದಂಬರಿಗಳಲ್ಲಿ ಶೈಲಿಗೆ ಬಹುತ್ವವನ್ನು ತಂದಿದೆ. ಆದರೆ ಈ ರೀತಿಯು

ಬಹುತ್ತ, ಭಾಷೆ ತಾಳುವ ವಿವಿಧರೂಪದ ಬಗ್ಗೆ ಅರಿವಿದ್ದರಿಗೆ ತೊಡಕಾಗುವುದಿಲ್ಲ. ಏನೇ ಆದರೂ ಶಿಷ್ಟ ಮತ್ತು ಸಾಮಾನ್ಯ ಆಡುಭಾಷೆ ಓದುಗರಲ್ಲಿ ಚಿತ್ತಾಕರ್ಷಕ ಶಕ್ತಿಯನ್ನು ಉಂಟುಮಾಡುತ್ತದೆ ಮತ್ತು ಕಾದಂಬರಿಗಳಲ್ಲಿನ ಪಾತ್ರಗಳ ಮನೋಜಗತ್ತನ್ನು ವಿಶ್ಲೇಷಿಸುವಲ್ಲಿ ತನ್ನದೇ ಆದ ಭಿನ್ನ ಸ್ವರೂಪವನ್ನು ರೂಪಿಸಿಕೊಂಡಿದೆ ಎಂದರೆ ತಪ್ಪಾಗಲಾರದು.

ಕಾದಂಬರಿಗಳ ತಂತ್ರಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಲೇಖಕಿ ಮತ್ತು ಲೇಖಕರು ಕಥೆಯನ್ನು ನೇರವಾಗಿ ಹೇಳುತ್ತಾ ಹೋಗುವುದಿಲ್ಲ. ಕಾದಂಬರಿಯಲ್ಲಿ ಮುಖ್ಯವಾದ ಪಾತ್ರಗಳು ಮನಸ್ಸಿನ ಸಂದರ್ಭದಲ್ಲಿ ಸನ್ನಿವೇಶಗಳು ಕಾಣಿಸಿಕೊಳ್ಳುತ್ತದೆ. ಹೆಚ್ಚು ಸಂದರ್ಭಗಳಲ್ಲಿ ನೆನಪುಗಳಾಗಿ ಕಾಣಿಸಿಕೊಳ್ಳುತ್ತದೆ. ಮತ್ತೊಂದು ಸಂದರ್ಭದಲ್ಲಿ ನೇರ, ಮುಖಾಮುಖಿ ಸಂಭಾಷಣೆ ಮೂಢಿ ಬಂದಿರುತ್ತದೆ. ಎದುರುಗಡೆ ಘಟನೆಗಳು ನಡೆಯುತ್ತಿರುವಾಗ ಯಾವ ಪಾತ್ರದ ಮನಸ್ಸು ಅದಕ್ಕೆ ಸ್ಪಂದಿಸುತ್ತಿರುವಂಥಹ ತಂತ್ರ ಯೋಜನೆ ಇದೆಯೋ ಆ ಪಾತ್ರಕ್ಕೆ ನಿತ್ಯ ಜೀವನದ ಸಂದರ್ಭದಲ್ಲಿ ಸಹಜವಾದ ಭಾಷಾ ರೂಪಗಳನ್ನು ಇಲ್ಲಿ ಬಳಸಲಾಗಿದೆ.

ಬ್ರಾಹ್ಮಣರ ಹುಡುಗ ಸೋಮು ಇಲ್ಲಿ ಬಹಳ ಮುಖ್ಯವಾದ ಪಾತ್ರ, ಇನ್ನೊಂದು ಮುಖ್ಯ ಪಾತ್ರ ಒಬ್ಬ ಸಾಮಾನ್ಯ ಜಾತಿಗೆ ಸೇರಿದ ಮಾಧವ, ಸೋಮು ಮತ್ತು ಚಂದ್ರಾಳ ಗೆಜ್ಜೆಪೂಜೆಯ ಕಾದಂಬರಿಯಾದರೆ ಮತ್ತೊಂದು ಕಾದಂಬರಿಯಲ್ಲಿ ಮಾಧವ ಮತ್ತು ಸರೋಜ "ಶಾಪ"ದ ಸಂಗತಿಗಳನ್ನು, ಘಟನೆಗಳನ್ನು ಗ್ರಹಿಸುತ್ತಿರುವಂತ ಕಡೆಗಳಲ್ಲೆಲ್ಲ ಅವರ ದಿನ ನಿತ್ಯದ ಆಡು ಭಾಷೆಯ ಮೂಲಕವೇ ಸಂಗತಿಗಳು, ಘಟನೆಗಳು ದಾಖಲಾಗುತ್ತದೆ. ಆ ಎರಡು ಕಾದಂಬರಿಗಳ ಸಂದರ್ಭಗಳಲ್ಲಿಯೂ ಬಳಕೆಯಾಗುವ ಭಾಷೆ ಆಯಾ ಪಾತ್ರಗಳ ಸಾಂಸ್ಕೃತಿಕ ಸಾಮಾಜಿಕ ಮತ್ತು ವೈಯಕ್ತಿಕ ಪರಿಸರಕ್ಕೆ ಇರುವಿಕೆಗೆ ಸಹಜವೆಂಬಂಥಹ ಹದದಲ್ಲಿಯೇ ಇವೆ. ಭಾಷೆಗೆ ಅಂಥ ಪಾಕ ಬಂದಿದೆ. ಚಂದ್ರಾ ಮತ್ತು ಸರೋಜಳ ಅನಂತರದ ಸ್ವಲ್ಪ ಭಾಗದ ಬರವಣಿಗೆಯ ವಿವರ ಅವರ ಮನಸ್ಸಿನ ಒಳಗೆ ಅವರಿಬ್ಬರ ಗ್ರಹಿಕೆಯ ಚೌಕಟ್ಟಿನಲ್ಲಿ ನಡೆಯುತ್ತದೆ. ಇದು ಲೇಖಕಿ ಮತ್ತು ಲೇಖಕರ ತಂತ್ರ ವಿಧಾನವೂ ಆಗಿರಬಹುದು.

ಈಗಾಗಲೇ ಹೇಳಿದ ಹಾಗೆ ಸಾಮಾನ್ಯ ಆಡು ಭಾಷೆ ಓದುಗರಲ್ಲಿ ತೊಡಕೆನಿಸಿದರೂ ಚಂದ್ರಾ ಮತ್ತು ಸರೋಜಳ ಪ್ರಜ್ಞೆಯಲ್ಲಿ ಸೋಸಿ ಸೋಸಿ ಬರುವ ಅನುಭವಗಳು. ಆ ಅನುಭವಗಳು ಅವರಿಬ್ಬರ ಮನಸ್ಸಿನ ಸಿದ್ಧತೆ ಸಂಸ್ಕಾರದ ಹದ, ಪಾಕ ಕಡೆದಂತೆ ಪಡದುಕೊಳ್ಳುವ ನುಡಿಕಟ್ಟು ಅಭಿವ್ಯಕ್ತಿ ಗದ್ಯದಲ್ಲಿದ್ದರೂ ಹಲವು ಕಡೆಗಳಲ್ಲಿ ಕಾವ್ಯಗಂಧಿಯಾಗಿದೆ. ಇಲ್ಲಿ ಗ್ರಾಮ್ಯ ಮತ್ತು ಆಡುಭಾಷೆ ಬಳಕೆ ಮತ್ತು ಘಟನೆಗಳಿಗೆ ಸಂಬಂಧಿಸಿದಂತೆ ಎಂ.ಕೆ. ಇಂದಿರಾ ಮತ್ತು ಇನಾಂದಾರ್‌ರ ಬರವಣಿಗೆಯ ನೆನಪು ಈ ಕಾದಂಬರಿಗಳಲ್ಲಿ ಓದುತ್ತಿರುವಾಗ ಸ್ವಲ್ಪಮಟ್ಟಿಗಾದರೂ ಎಂತವರಿಗೂ ಆಗಿದ್ದರೂ ಆಶ್ಚರ್ಯವಿಲ್ಲ. ಅದೇನೇ ಇದ್ದರೂ ಎಂ.ಕೆ. ಇಂದಿರಾ ಮತ್ತು ಇನಾಂದಾರ್‌ರ ಆಡುನುಡಿಯ ನಾಡಿ ಹಿಡಿದು ಅದರ ಸಹಜಲಯದಲ್ಲಿ ತಮ್ಮದೇ ಆದ ವಿಶಿಷ್ಟ ಬಗೆಯಲ್ಲಿ ಬಳಸಿದ್ದಾರೆ. ಆಡುನುಡಿಯನ್ನು ಯಾವ ಹದದಲ್ಲಿ, ಎಷ್ಟು ಸಹಜತೆಯಲ್ಲಿ ಮನವರಿಕೆಯಾಗುವ ರೀತಿಯಲ್ಲಿ ಎಂ.ಕೆ. ಇಂದಿರಾ ಮತ್ತು ಇನಾಂದಾರ್‌ರ ದುಡಿಸಿಕೊಂಡಿದ್ದಾರೆ ಎಂಬುದು ಓದಿ ಅನುಭವಿಸಿ ಮೆಚ್ಚಬೇಕಾದ ಅಂಶ. ಅದು ಅವರ ನಿರೂಪಣಾ ಶೈಲಿಯಲ್ಲಿಯೇ ಸ್ಪಷ್ಟವಾಗುತ್ತಾ ಹೋಗುತ್ತದೆ.

"ಎಂ.ಕೆ. ಇಂದಿರಾ ಮತ್ತು ಇನಾಂದಾರ್‌ರ ಕಾದಂಬರಿಗಳಲ್ಲಿ ತನ್ನ ಮಹತ್ವಾಕಾಂಕ್ಷೆ ಮತ್ತು ತಂತ್ರದ ದೃಷ್ಟಿಯಿಂದ 'ಗೆಜ್ಜೆಪೂಜೆ ಮತ್ತು ಶಾಪ' ಕಾದಂಬರಿಗಳ ಪ್ರಭಾವದಲ್ಲಿ ಮೂಡಿಬಂದಿದ್ದೆಂದು ಅನಿಸುತ್ತದೆ. 'ಗೆಜ್ಜೆಪೂಜೆ ಮತ್ತು ಶಾಪ' ಕಾದಂಬರಿಗಳಲ್ಲಿ ಗಂಡು-ಹೆಣ್ಣಿನ ಲೈಂಗಿಕ ಸಂಬಂಧದ ಘಟನಾವಳಿಗಳು ಬರುತ್ತದೆ. ಅನುಭವ ಸಮೃದ್ಧಿಯ ಹಿನ್ನೆಲೆಯಲ್ಲಿ ಕೂಡ ಹೋಲಿಕೆ ಕಂಡುಬರುತ್ತದೆ.

ವಸ್ತುವಿನ ಗಾಢತೆಯಲ್ಲಿ ಅದು ಹೊಳೆಯುವ ಕಾದಂಬರಿಗಳಲ್ಲಿ ವೇಶ್ಯೆಯ ಇತ್ತೀಚಿನ ತುಂಬ ಮಹತ್ವದ್ದೆನಿಸುವ ಆಡುಭಾಷೆಯ ಬಳಕೆಯಲ್ಲಿ ವಿಶೇಷ ಸೃಜನಶೀಲತೆಯನ್ನು ತೋರುತ್ತಾದರೂ ಅದು ತನ್ನ ಬಂಧದಿಂದ ನಮ್ಮಲ್ಲಿ ಒಂದಿನಿತು ಅತೃಪ್ತಿಯನ್ನು ಉಂಟು ಮಾಡುತ್ತದೆ. ವಿವರಗಳು ಅನೇಕ ಕಡೆ ಕೇಂದ್ರೀಯವಾಗಿ ಹೊಂದಿಕೊಳ್ಳದೆ ಮಾತುಗಾರಿಕೆಯ ಚಪಲವಾಗಿಯೋ,

ಗೊತ್ತಿರುವುದನ್ನೆಲ್ಲಾ ಹೇಳುವ ಪ್ರಯಾಸಕರ, ಪ್ರಯತ್ನವಾಗಿಯೂ ಮೂಢಿಬರುತ್ತದೆ. "ಎಂ.ಕೆ. ಇಂದಿರಾ ಮತ್ತು ಇನಾಂದಾರ್‌ರ ಕಾದಂಬರಿಗಳಲ್ಲಿ ಮೂಲಭೂತವಾಗಿ ನವೋದಯದ ರಮ್ಯ ಮನೋಭಾವದ ಶೈಲಿ, ಅದು ಸಂಕ್ಷೇಪತೆಗಿಂತ ಸಮೃದ್ಧತೆಗೆ ಒಲಿಯುವಂಥದು. ಇದಲ್ಲದೆ ಅನುಭವದ ಒಂದೊಂದು ವಿವರನ್ನು ಕಾದಂಬರಿಗಳಲ್ಲಿ ಹರಹಿನಲ್ಲಿ ಹೊಂದಿಸುವ ಎಳೆದಾಟದ ಫ್ಲ್ಯಾಶ್ ಬ್ಯಾಕ್ ತಂತ್ರ ಪ್ರಯಾಣ ಮೀರಿ ದುಡಿದಂತೆ ತೋರುತ್ತದೆ. ಈ ಹಿನ್ನೆಲೆಯಲ್ಲಿ ವಾಸ್ತವ ಮಾರ್ಗದ ಗೆಜ್ಜೆಪೂಜೆ ಮತ್ತು ಶಾಪ ಕಾದಂಬರಿಗಳ ವಸ್ತುವಿನ ದೃಷ್ಟಿಯಿಂದ ಬಹುಮುಖ್ಯವಾದ ಪ್ರಶ್ನೆಗಳನ್ನು ಎತ್ತುತ್ತ ಮಹತ್ವಾಕಾಂಕ್ಷೆಯ ಕಾದಂಬರಿಯಾಗುತ್ತದಾದರೂ ತಂತ್ರದ ಸಡಿಲತನದಿಂದ ನಮ್ಮಲ್ಲಿ ಅತೃಪ್ತಿಯನ್ನುಂಟು ಮಾಡುತ್ತದೆ"

ಹೀಗೆ ಕಾದಂಬರಿಗಳಲ್ಲಿ ಭಾಷೆಯ ಸತ್ವವನ್ನು ಸಶಕ್ತವಾಗಿ ದುಡಿಸಿಕೊಂಡಿದ್ದಾರೆ. ಭಾಷಾ ಬಳಕೆ ಕಾವ್ಯಕ್ಕೆ ಹತ್ತಿರವಾಗುವ ಗುಣಗಳನ್ನು ಒಳಗೊಳ್ಳುತ್ತದೆ. ಗಾದೆಗಳು, ಒಗಟುಗಳು, ನುಡಿಗಟ್ಟುಗಳು, ಭಾಷೆಯ ಸಾಧ್ಯತೆಗಳನ್ನು ಹೆಚ್ಚಿಸುತ್ತದೆ. ಇವುಗಳ ಬಳಕೆ ಕಾದಂಬರಿಗಳಲ್ಲಿ ಇಲ್ಲದಿದ್ದರೆ ಎಲ್ಲೋ ಒಂದು ಕಡೆ ಅದು ಸಪ್ಪೆ ಎಂದೆನ್ನಿಸಿಕೊಳ್ಳುತ್ತಿತ್ತೇನೋ. ಇವುಗಳ ಬಳಕೆಯಿಂದ ಕಾದಂಬರಿಗೊಂದು ಮಹತ್ವದಸ್ಥಾನ ಮತ್ತು ಪ್ರಭಾವಶಾಲಿಯಾದ ಭಾಷಾ ಶೈಲಿಯೂ ಗೋಚರವಾಗುತ್ತದೆ ಎಂದರೆ ತಪ್ಪಾಗಲಾರದು.

"ಎಂ.ಕೆ. ಇಂದಿರಾ ಮತ್ತು ಇನಾಂದಾರ್‌ರ ಕಾದಂಬರಿಗಳ ಸನ್ನಿವೇಶದ ಪಾತ್ರಕ್ಕೆ ತಕ್ಕಂತೆ ಆಕರ್ಷಣಿಯವಾಗಿ ಬೈಯುವ ಮಾತುಗಳನ್ನು ಬಳಸಿಕೊಂಡಿದ್ದಾರೆ. "ಥೂ, ಪ್ರಾರಬ್ಧ ಮುಂಡೇಗಂಡ! ಯಾಕೋ ತಂದೆ ಆದ್ನ? ನಡಿ ಬಚ್ಚಲ ಮನೆಗೆ, ಬಿಸಾಕು ಅದ್ನ ತಿಪ್ಪೇಗುಂಡಿಗೆ, ಎಲ್ಲಾ ಬಿಟ್ಟು ಆ ಹದ್ನೆಂಟ್ ಜಾತಿ ಹೊಲಸ್ ತರೋಕೋಗಿದ್ದಾನೆ! ನಡೀ ಬಟ್ಟೆ ನೆನ್ಸು", ಅಬ್ಬಾ! ಜಾತಿಗೆ ತಕ್ಕ ರೂಪು, ರೂಪಿಗೆ ತಕ್ಕ ನಗು! ಇಷ್ಟಲ್ದೇ ಗಂಡಸರು ಜೋತು ಬೀಳ್ತಾರೆಯೆ?, "ಅದೇನು ರೂಪೋ ಈ ಹಾಳು ಜಾತಿಗೆ, ಬೆಡಗು, ಬಿನ್ನಾಣ ಎಲ್ಲಾ ಹೇಳ್ಕೊಟ್ಟದ್ದಕ್ಕಿಂತ ಹೆಚ್ಚಾಗಿ ಬಂದಿರುತ್ತೆ ಹುಟ್ಟೋವಾಗ್ಲೇ". "ಸೂಳೇ-ಸೂಳೇ ಸುಪ್ಪಾಣೆ, ಸೂಳೆ ಮನೇಲ್ ರಿಪ್ಪಾಣಿ; ಬೇಲಿ ಮೇಲೆ ಬೆಲ್ಲ ಇಟ್ಟು ಬಾಯ್ ಮೇಲೆ ಬೆರಳಿಟ್ಟು, ಥೂ-ಥೂ-ಥೂ!, "ಎಲ್ಲಾರ ಮನೆಗಳಂತೆ ನಾಸಿಲ್ಲ, ಎದುರಿಗಿಲ್ಲದಿದ್ದರೂ ಹಿಂಬದಿಯಿಂದ ನಮಗೆ 'ಸೂಳೆ' ಎಂಬ ಹೆಸರೇ ಶಾಶ್ವತವಾಗಿದೆ. ಎರಡು

ಅಕ್ಷರ 'ಸೂಳೆ'!. "ಅಬ್ಬ! ನಾಟಕ, ಸಿನಿಮಾ, ಕತೆ, ಕಾದಂಬರಿ ಎಲ್ಲೆಲ್ಲೂ ಸೂಳೆಯದು ಬಂದ ಅಸ್ಪೃಶ್ಯ ಸ್ಥಾನವಾಗಿದೆಯಲ್ಲ?, "ಯಾವ ಕೇಡಿಗೆ ಈ ಹಾಳು ರೂಪೋ ಈ ಹುಡುಗೀಗೆ.. ಹಿಂದೆಲ್ಲ ಹೇಳ್ತಿದ್ರಪ್ಪ ಮೋಹಿನಿಂತ ಗಂಡಸರ ಕಣ್ಣಿಗೆ ಮಾತ್ರ ಕ್ಷಣದಂತೆ, ಮಾರುದ್ದ ಕೂದ್ಲ್ ಬಿಟ್ಕಂಡು, ಬಿಳೀ ಸೀರೆ ಉಟ್ಟಿರ್ತಿತ್ರಂತೆ, ನಮ್ಮ ಕಣ್ಣಿಗಂತೂ ಕಂಡದ್ದಲ್ಲ. ಈಗ ಈ ಹುಡುಗಿ ನೋಡಿದ ಕೂಡ್ಲೆ ಪಕ್ಕನೇ ಅದೇ ಮೋಹಿನಿ ಗ್ಯಾಪಕ ಬರುತ್ತೆ ಕಣೆ", ಜಾತ್ಕ-ಪಾತ್ಕಾ, ಕುಲ-ಗೋತ್ರ, ಮಣ್ಣು-ಮಸೀಂತ ಇಪ್ಪತ್ತೆಂಟು ರಗಳೆ, ಎಲ್ಲಾ ಮುಗಿದು ಕೊನೆಗೇ ಈ ಹೆಣ್ಣು ನೋಡೋ ಶಾಸ್ತ್ರ ಈ ಕೊನೇ ಕರ್ಮಕಾಂಡ ಗೆದ್ರೇನೆ ಮದ್ವೇಂತ ಆಗೋದು ನೋಡಿ ನೋಡಿ ಬ್ಯಾಡಾಂದ್ರೆ ತುಂಬಾ ಬೇಜಾರಪ್ಪ", "ಕಳ್ಳಸೂಳೆ ಮಗನೆ, ಎಷ್ಟು ಜನಕ್ಕೆ ಹುಟ್ಟಿದೋನೋ ನೀನು!?", "ಕತ್ತೆ ಸೂಳೆ ಮಗನೆ, ನೀನೇ ನೂರ್ ಜನದ ಪಿಂಡ, ನಿಮ್ಮಮ್ಮ ದಿನಕ್ಕೆ ಇಪ್ಪತ್ತು ಜನಕ್ಕೆ, ಸೂಳೆ ಸೂಳೆ ಅನ್ನದೆ ಮಾತಾಡೋಕೆ ಬರೋಲ್ಲ ಈ ಜನಕ್ಕೆ, ಮಾತೆತ್ತಿದರೆ, ಸೂಳೆ ಮಗನೆ ಅಂತಾರೆ, ಸೂಳೆ ಅಷ್ಟ್ ಕೆಟ್ಟೋರು ಇನ್ಯಾರು ಇಲ್ವೇ ಇಲ್ವೇನೋ ಪ್ರಪಂಚದಲ್ಲಿ", "ಸಾಕೇ! ಕುಂಡಿ ಮೇಲೆ ಹೊಡದ್ರೆ ದವಡೆ ಹಲ್ಲು ಬಿತ್ತೂಂತ ಯಾರೋ ಏನೋ ಜಗಳ ಮಾಡ್ಕೊಂಡ್ರೇ ನೀ ಯಾಕೆ ಹೀಗಾಡ್ತೀಯಾ?", "ಜಗಳ ಮಾಡ್ಕೊಳ್ಳಿ ಯಾರ್ಗೇನಂತೆ, ಮೂರ್ಹೊತ್ತೂ ಸೂಳೇ ಸೂಳೇಂತ ಯಾಕನ್ಬೇಕೋ", "ಏನಿಲ್ಲ ನೋಡು, ಸೂಳೇರ ಜಾತಿ ಅಲ್ದೆ ಬೇರೆ ಎಲ್ಲಾ ಜಾತೀಲೂ ಕೂಡ ಎಷ್ಟೋ ಜನ ಹೆಂಗಸ್ರು ಮದ್ವೇಗೆ ಮುಂಚೆನೇ, ಮದ್ವೆ ಆದ್ಮೇಲೆ ಕೆಟ್ಹೋಗಿರ್ತಾರ್ಕೆ ಅವರನ್ನ ಮಾತ್ರ ಯಾರೂ ಸೂಳೇಂತ ಅನ್ನೊಲ್ಲ, ನಾವು ಗರತೀಗಿಂತ ಸರಿಯಾಗಿದ್ರೂ ಹೀಗಂತಾರಲ್ಲ?", "ನೀನೊಂದು ಹುಚ್ಚು ಹುಡುಗಿ, ಅರ್ಥ ಇಲ್ದೆ ಇದ್ದ ಮಾತಾಡ್ತೀಯಾ ವೇಶ್ಯಾಕುಲ ಅನ್ನೋದು ಮೊದಲ್ನಿಂದ ಇರೋದೇ ಅಲ್ವೇನೆ? ನಿಮ್ಮದು ಮದುವೆ ಆಗೋ ಪದ್ಧತಿ ಅಲ್ಲ, ಹೇಗಿದ್ರೂ ಪರವಾಗಿಲ್ಲ ಸೂಳೆ ಅನ್ನೋದು ರೂಢಿ ಅಷ್ಟೆ. ಗರತೀರು ಕೆಟ್ಹೋದ್ರೆ ನರಕದ ನಾಯಿ ಸಮಾನ. ಸೂಳೆ ಅಂತ ಒಂದು ಮಾತು ಅಂದೇ ಇದ್ರೂ ಅದಕ್ಕೆ ಹತ್ರಷ್ಟು ಬೇರೆ ಥರ ಅಂದಿರ್ತಾರೆ. ಅದಕ್ಕೆಲ್ಲ ನೀ ಯಾಕೆ ತಲೆ ಕೆಡಿಸ್ಕೋತಿ ಸುಮ್ನಿರು", "ಎಲ್ಲಾ ಹೇಳುವುದು ಸೂಳೆ, ಲೋಕ ನಂಬಿರುವುದು ಸೂಳೆಯೆಂದು', "ಅಪ್ಪ ನನಗೆ ಅಮೃತವಿತ್ತು. ನನ್ನ ಬದುಕನ್ನು ಪಾವನ ಮಾಡಿದಿರಿ. ನಾನು ನಿಮಗೆ ಚಿರಋಣಿ", "ನನ್ನವಳು ಜನ್ಮಕ್ಕೂ "ನಾನು ನಿನ್ನವಳು". ಈ ಮುಂತಾದ ಗಾದೆಗಳಲ್ಲಿ ಅಪಾರವಾದ ಅರ್ಥ ಹಾಗೂ ಜೀವನಾನುಭವದ ಮುದ್ರೆಯಿದೆ. ಹಾಗೂ ಶಾಪದ

ಕಾದಂಬರಿಯಲ್ಲಿ "ನಾನು ಈ ಮನೆತನದಲ್ಲಿ ಹುಟ್ಟಲೇಬಾರದಾಗಿತ್ತು, ಯಾವ ಶಾಪಕ್ಕೆ ಇದು ಪ್ರಾಯಶ್ಚಿತ್ತವೋ"?, 'ಕಣ್ಣಿದ್ದ ಕುರುಡ ನೋಡ ನೀನು', 'ಈಕೆ ನನ್ನ ತಾಯಿಯಲ್ಲ! ನನ್ನ ಜನ್ಮದಾರಭ್ಯದ ವೈರಿ! ಪಾಪದ ದಾರಿಗೆ ನೂಕುವ ಈ ಶಕ್ತಿ ನನ್ನ ಜನ್ಮಕ್ಕೊಂದು ಶಾಪ!", "ಸೂಳೆಗಾರಿಕೆಯಲ್ಲಿ ಹುಟ್ಟಿದೇ ಒಂದು ಶಾಪದಂತೆ ನನ್ನನ್ನು ಬೆನ್ನಟ್ಟುತ್ತಿದೆ", "ನಿನ್ನ ಸಾವು ನನ್ನ ಬದುಕು..... ನಿನ್ನ ಸಾವು ನನ್ನ ಬದುಕು", "ಯಾರ ಸಾವು, ಯಾರ ನೋವು" ಎಂದು ಸಾವಿಲ್ಲದ ಬದುಕಿಲ್ಲ ಸಾವಿಲ್ಲದ ಬದುಕಿಲ್ಲ, ನೋವಿಲ್ಲದ ನಲಿವಿಲ್ಲ", "ನಿನ್ನ ಬಾಯಿಗೆ ತಾಳವಿಲ್ಲ, ಮೇಳವಿಲ್ಲ!", ದೆ ಆರ್ ಈಜ್ ಎ ಡಿವಿನಿಟಿ ದ್ಯಾಟ್ ಶೇಪ್ ಅವರ ಎಂಡ್ಸ್" (ನಮ್ಮ ಅಶೋತ್ತರಗಳೆಲ್ಲವನ್ನೂ ರೂಪಿಸುವ ಶಕ್ತಿಯೊಂದಿದೆ ಎಂದೋದಿದ", " ಈಕೆ ವೇಶ್ಯೆ! ಸರಿ ಈಕೆಯಿಂದ ದೂರ ಸರಿ!" "ತಂದೆ ತಾಯಿಗಳ ಪಾಪಕ್ಕೆ ಮಕ್ಕಳಿಗೆ ಪ್ರಾಯಶ್ಚಿತ್ತ, ಪೂರ್ವಜರ ಪಾಪ, ಉತ್ತರೋತ್ತರ ಶಾಪವಾಗಿ ಪ್ರಾಯಶ್ಚಿತ್ತಕ್ಕಾಗಿ ಕಾದು ನಿಂತಿದೆ!", "ಗೌಡ ಕಾಮುಕ ರಾಕ್ಷಸ.. ಮಾಧವ ಉದ್ಧಾರಕ ಪುರುಷ!", "ತಿಳಿದ ಮೋಸಕ್ಕಿಂತ ತಿಳಿಯದ ಮೋಸಕ್ಕೆ ಬಲಿ ಬೀಳುವುದು ತಪ್ಪಲ್ಲ!" "ಎಷ್ಟು ಸಮೀಪವಾಗಿದ್ದವಳು! ಎಷ್ಟು ದೂರವಾದಳು.. ಎಷ್ಟು ದೂರವಾಗಿದ್ದವಳು ಎಷ್ಟು ಸಮೀಪವಾದಳು!", "ಈ ಪಾಪದ ಕಲಂಕ ಬೇಡ, ಬೇಡ!", "ಆ ಶಾಪದ ಪರಿಣಾಮವಾಗಿ ಸರೋಜಿನಿಗೆ ಶಾಪ ನಿವೃತ್ತಿಯಾಗುತ್ತಿದ್ದರೆ ಎಂಥ ದೊಡ್ಡ ಕೆಲಸವಾಯಿತು!, "ದೇವರಂಥ ಮನುಷ್ಯ! ನಮ್ಮದು ದುರ್ದೈವಕ್ಕೆ ಹೋದ!", "ನೀವು ಆಕೆಗೆ ಕೊಟ್ಟ ಜನ್ಮ ಆಕೆಗೆ ಶಾಪವಾಗಿದೆ! ಆ ಶಾಪಕ್ಕೆ ನಿವೃತ್ತಿಯನ್ನು ಆಕೆ ತನ್ನ ಬರಡು ಜೀವನದಿಂದ ಪಡೆಯಬೇಕು!" ಹೀಗೆ ಮುಂತಾದ ಆಡುಭಾಷೆಯಲ್ಲಿ ಅಪಾರವಾದ ಅರ್ಥ ಹಾಗೂ ಜೀವನಾನುಭವದ ಮುದ್ರೆಯಿದೆ. ಹೆಚ್ಚು ವ್ಯಾಪಕವಾದ, ಜನಸಮ್ಮುಖವಾದ, ವಸ್ತು ವೈವಿಧ್ಯತೆಗೆ, ಸಂಸ್ಕೃತಿ ಸಂಪನ್ನತೆ, ವಿಚಾರ ವೈಭವ, ಬದುಕಿನ ವಿಶ್ಲೇಷಣೆ, ವೇಶ್ಯೆಯ ಜನರ ಬದುಕಿನ ಬವಣೆಗಳು, ಅನುಭವ ಸಾಂದ್ರತೆ ಇವೆಲ್ಲವೂ ಕಾದಂಬರಿಗಳಲ್ಲಿ ಬಲಗೊಳಿಸಲು ಸಹಾಯಕವಾಗಿದೆ.

"ಗೆಜ್ಜೆಪೂಜೆ ಮತ್ತು ಶಾಪ" ಕಾದಂಬರಿಗಳಲ್ಲಿ ಕಂಡು ಬರುವ ಒಗಟುಗಳು ಕೂಡ ಮಕ್ಕಳಾಟದಲ್ಲಿ ಸಂದರ್ಭಕ್ಕನುಗುಣವಾಗಿ ಬಳಕೆಗೊಂಡಿದೆ. ಇವು ಸಾಮಾಜಿಕ ಜೀವನದ

ಪ್ರತಿಯೊಂದು ಸಂದರ್ಭದಲ್ಲಿ ಅಷ್ಟೆ ಅಲ್ಲದೆ ಭಾಷೆಯ ಸಾಂಕೇತಿಕತೆ ಅರ್ಥಗುಂಭತೆಯನ್ನು ಒಳಗೊಂಡಿದೆ. ಕಥೆಗೆ ಸಾಂಸ್ಕೃತಿಕ ವೈಭವವನ್ನು ಕಟ್ಟಿಕೊಟ್ಟಿವೆ.

ಇವುಗಳ ಜೊತೆಗೆ ಬದುಕಿನ ಇನ್ನೊಂದು ಭಾಗವಾದ ವೇಶ್ಯೆಯ ದಿನ ನಿತ್ಯದ ಚಟುವಟಿಕೆಗಳು ಕೂಡ ಅದರದೇ ಆದ ಮಜಲುಗಳನ್ನು ಪಡೆದುಕೊಂಡಿದೆ. ಚಂದ್ರಾ ಮತ್ತು ಸರೋಜಳ ಜೀವನದ ಬದುಕಿಗೆ ಹೇಗೆ ಎಲ್ಲಾ ಸಣ್ಣ ಪುಟ್ಟ ಘಟನಾವಳಿಗಳಿಗೂ ಇಲ್ಲಿ ಎಡೆಯಿದೆ. ಮುಂತಾದ ಅಪ್ಪಟ ಜನಪದ ಜೀವನಾನುಭವದ ಮಾತುಗಳು ಕಾದಂಬರಿಗಳ ಮೆರಗನ್ನು ಹೆಚ್ಚಿಸಿದೆ. ಈ ಮೇಲಿನ ಮಾತುಗಳು ಓದುಗರಿಗೆ ಎಲ್ಲಿಯೂ ಅಶ್ಲೀಲತೆಯ ಭಾವನೆಯನ್ನು ಮೂಡಿಸಿಲ್ಲ. ಸಹಜವೆಂಬಂತೆ ಗುರುತಿಸಿಕೊಳ್ಳುತ್ತದೆ.

"ಗೆಜ್ಜೆಪೂಜೆ ಮತ್ತು ಶಾಪ" ಕಾದಂಬರಿಗಳಲ್ಲಿ ಸಾಂದರ್ಭಿಕಗನುಗುಣವಾಗಿ ಪ್ರತಿಮೆಗಳು ಸಂಕೇತಗಳು ಅದ್ಭುತವಾಗಿ ಗೋಚರಿಸುತ್ತವೆ. ಚಂದ್ರಾ ಸೋಮುವಿನ ಜೊತೆ ಮದುವೆ ಆಗಬೇಕೆಂದು ಇಷ್ಟಪಟ್ಟಿದ್ದರೂ ಅದು ಸಿಗದೇ, ತಾನು ಸೂಳೆಯಲ್ಲ, ಬ್ರಾಹ್ಮಣ ಕುಲಕ್ಕೆ ಹುಟ್ಟಿದವಳು ಎಂದು ಎಲ್ಲಾರ ಹತ್ತಿರ ಹೇಳುವುದಕ್ಕೆ ಆಗದೇ, ಕೊನೆಗೂ ತಾನು "ಗೆಜ್ಜೆಪೂಜೆ"ಗೆ ತಯಾರು ನಡಿಸಿ, ನಂತರ ತನ್ನ ತಂದೆ ಕೊಟ್ಟ ವಜ್ರದ ಉಂಗುರವನ್ನು ಪುಡಿಮಾಡಿಕೊಂಡು ಕುಡಿದು ಸಾವಿಗೆ ಶರಣಾನಾಗುತ್ತಾಳೆ ಈ ಸಂದರ್ಭವನ್ನು ಗಮನಿಸಿದಾಗ ಹುಳಿತು ಹೋದ ಸಂಸ್ಕೃತಿ ನಾಗರೀಕತೆಗಳನ್ನು ತ್ಯಜಿಸಿದ್ದಳೆ. ನೀರವತೆ, ನಿರ್ಜನತೆ, ಇದಕ್ಕೆ ಪೂರ್ವಭೂಮಿಕೆಯಾಗಿ ಅರ್ಥೈಸಿಕೊಳ್ಳಬಹುದು. ಈ ಸನ್ನಿವೇಶವನ್ನು ಎಂ.ಕೆ. ಇಂದಿರಾರವರು ಅರ್ಥಪೂರ್ಣತೆಯಿಂದ ಬೀಗಿದ ಪ್ರತೀಕ ಪ್ರತಿಮೆಗಳಿಂದ ಸಮೃದ್ಧಗೊಳಿಸಿದ್ದಾರೆ. ಹಾಗೆಯೇ ಶಾಪದ ಕಾದಂಬರಿಯಲ್ಲಿ ಸರೋಜಳ ಪಾತ್ರವೂ ಕೂಡ. ಮಾಧವನನ್ನು ತಾನು ಓದುವ ಕಾಲೇಜಿನಲ್ಲಿ ಇಷ್ಟಪಟ್ಟು, ಗೌಡನ ಕೈಯಿಗೆ ಸಿಲುಕಿ ತನ್ನ ಬಾಳನ್ನು ಹಾಳು ಮಾಡಿಕೊಂಡು. ತನ್ನ ತಾಯಿಯ ಪರಂಪರೆಯಿಂದ ಬಂದ ವೇಶ್ಯಾದ ಕುಲಕ್ಕೆ ಸೇರಿದವಳಾಗಿದ್ದು, ತನ್ನ ತಾಯಿಗೆ ಬಂದ ಬೇನೆಯೂ ಕೂಡ ಸರೋಜಳಿಗೆ ಪರಂಪರೆಯಿಂದ ಬಂದಿರುವುದರಿಂದ ಹಾಗೂ ಮಾಧವ ತನ್ನ ಅಣ್ಣನೆಂದು ತಿಳಿದಾಗ ತನ್ನ

ಬದುಕನ್ನು ವ್ಯಥ್ಯೆಯಿಂದ ಕೂಡಿರುವುದು. ಮುಂದೆ ಇದೇ ನಂಬಿಕೆ ಕಲ್ಪನೆಯಿಂದ ಸರೋಜಳು ಜಿಗುಪ್ಸೆ ಪಡುತ್ತಾಳೆ. ತನ್ನ ಭವಿಷ್ಯದ ಬಗ್ಗೆ ಚಿಂತಿಸುತ್ತಾ ಎಂದು ಭಾವಿಸುವುದು ಅನಿವಾರ್ಯ. ಆದರೆ ಮುಂದೆ ಅವಳ ಬದುಕಿನಲ್ಲಿ ಸಂಭವಿಸುವ ದುರಂತ ಮೂಢನಂಬಿಕೆಗಳನ್ನೇ ಮೀರಿದ್ದಾಳೆಂದು ಅರ್ಥೈಸಿಕೊಳ್ಳಬಹುದು. ಇವೆಲ್ಲವೂ ಮಾಗುವುದು ಚಂದ್ರಾ ಮತ್ತು ಸರೋಜಳ ದೇಹದ ಆರೋಗ್ಯ-ಲವಲವಿಕೆ, ಚುರುಕು, ಉತ್ಸಾಹ, ಆಶಾವಾದಿತನ, ಸೌಂದರ್ಯ, ಮಾನಸಿಕ ದೃಢತೆ, ಇವೆಲ್ಲವೂ ಪ್ರತೀಕವೋ? ಪ್ರತಿಮೆಯೋ? ಎಂಬ ಗೊಂದಲಗಳು ಜೀವನದಲ್ಲಿ ಉಂಟಾಗುವುದು ಸಹಜವಾದರೂ ಅದು ಓದುಗನಿಗೆ ಅರ್ಥಸಮೃದ್ಧಿಯಿಂದ ಪ್ರತೀಕವಾಗಿ ಕಾಣಿಸುವುದು ಸ್ವಾಭಾವಿಕ. ಕಾದಂಬರಿಗಳು ಎಷ್ಟೋ ಚಿತ್ರಣಗಳು ಪ್ರತೀಕತೆಗಳಂತೆ ತೋರುವ ಪ್ರತಿಮೆಗಳನ್ನು ಓದುಗನಿಗೆ ಕೊಟ್ಟ ಪ್ರಚೋದನೆಯ ಅಂಶಗಳನ್ನು ಈ ರೀತಿಯಾಗಿ ಗುರುತಿಸಬಹುದು.

ಚಂದ್ರಾ: ಆತಂಕ, ಭಯದಿಂದ ಸಾಮಾಜಿಕವಾಗಿ ಬುಡ ಕಿತ್ತ ಬಳ್ಳಿಯಂತಾಗಿದ್ದ. ಆದರೆ ಆ ಭಯ ಆತಂಕವನ್ನು ಮೀರಿ ನಿಂತಿದ್ದಾಳೆ. ಏನೇ ಆದರೂ ಎದುರಿಸುವ ಧೈರ್ಯ ಛಲ ಅವಳಲ್ಲಿರುವುದನ್ನು ಗಮನಿಸಬಹುದು.

ಸರೋಜ : ಕೆಂಪು ಹಣ್ಣಿನಿಂದ ಬೀಗಿನಿಂತ ಪಾಪಾಸುಕಳ್ಳಿಯ ಸಂಕೇತಾರ್ಥ ಹಸಿದ ಗೌಡನ ಹೊಟ್ಟೆಯ ಬಯಕೆಯನ್ನೇ ಹಣ್ಣುಗಳು ನೀಗಿಸುತ್ತದೆ ಹಾಗೆಯೇ ಸರೋಜಳ ಬದುಕು ಹಾದುಹೋಗುತ್ತದೆ. ಸೃಷ್ಟಿಯ ಅದ್ಭುತ ವಿಸ್ಮಯದ ಸಂಕೇತ ಮತ್ತು ಸ್ವಾವಲಂಭನೆಯ ಪಾಠದಂತಗೆ ಕಾಣುವುದು ಸಹಜ.

ಹದ್ದನ್ನು ಕಾಮ ಮತ್ತು ದುರಾಶೆಯ ಸಂಕೇತವಾಗಿರುವುದನ್ನು ಇಲ್ಲಿ ಗಮನಿಸಿಬೇಕು. ಸರೋಜಳ ಬಾಳಿನಲ್ಲಿ ಕಂಡ ಗೌಡ ರಣ ಹದ್ದುಗಳ ಗುಂಡಿಗೆಗೆ ಕಿತ್ತು ಕುಕ್ಕಿ ಕುಕ್ಕಿ ತಿನ್ನುವ ದೃಶ್ಯ ಹಾಗೂ ಶೋಷಕ ಕಾಮ ದುರಾಶೆಗಳ ವ್ಯವಹಾರದ ಸಂಕೇತವಾಗಿದೆ. ಇದಕ್ಕೆ ಸಂವಾದಿಯಾಗಿ ಗರುಡ ಪ್ರೇಮವನ್ನು ಸಂಕೇತಿಸಿದರೆ, ಹಾವು ಕಾಮ, ಲೈಂಗಿಕತೆಯನ್ನು ಪ್ರತಿನಿಧಿಸುತ್ತದೆ. ಇದು ಮುಂದೆ ಮಾರಕ ಶಕ್ತಿಯಾಗಿ ಹರಿದು ಬರುತ್ತದೆ.

ಹಾವಿನ ಮತ್ತು ಹದ್ದಿನ ಸಂಕೇತಗಳಿಂದ ಚಂದ್ರಾ ಮತ್ತು ಸರೋಜಳ ಬದುಕಿನಲ್ಲಿ ನಾನಾ ರೀತಿಯಲ್ಲಿ ಶೋಷಣೆಗೆ ಒಳಪಟ್ಟಿರುವುದು ಸ್ಪಷ್ಟವಾಗುತ್ತದೆ. ಹದ್ದು ನೇರವಾದ ಹಿಂಸೆಯ ಶೋಷಣೆಯಾದರೆ, ಹಾವು ಸುಖದ ಸೋಗಿನ ಐಂದ್ರಿಯ ಭೋಗವಾಗಿ ಮುಂದೆ ವೇದನೆಯ ಪರಾಕಾಷ್ಠೆ ಮತ್ತು ಹಿಂಸೆಯ ಪರಮಾವಧಿಯಾಗಿರುತ್ತದೆ. ಆತ್ಮ ಹಿಂಸೆಯ ಜೊತೆಗೆ ದೈಹಿಕ ಹಿಂಸೆಯು ಕಾಡುತ್ತದೆ. ಈ ದೃಶ್ಯವೇ ಬಹುಶ: ಇದು ಭೀಭತ್ಸ ಸಂಕೇತ ಕಾದಂಬರಿಗಳ ಮುಖಪುಟದ ಮೇಲೆ ಮೂಡಿದೆ. ಇದು ಸಾಮಾಜಿಕ ವ್ಯವಸ್ಥೆಯ ಅಥವಾ ಶೋಷಣೆಯ ಸಮಗ್ರ ವಿವರಣೆ ನೀಡುವುದಷ್ಟು ಶಕ್ತವಾಗಿದೆ. ಪ್ರಬಲರು ದುರ್ಬಲರನ್ನು ಹಿಂಡುವುದು, ಗಂಡು ಹೆಣ್ಣನ್ನು ದುರುಪಯೋಗಪಡಿಸಿಕೊಳ್ಳುವುದು, ಶೋಷಕರೆನ್ನಿಸಿಕೊಂಡವರು ತಮ್ಮ ತಮ್ಮಲ್ಲೆ ಬಡಿದಾಡಿ ಸಾಯುವುದು ಇತ್ಯಾದಿ ಅನೇಕ ಅರ್ಥದ ಸುರುಳಿ ಬಿಚ್ಚುತ್ತಾ ಸಾಗುತ್ತದೆ.

ಕಾದಂಬರಿಗಳು ಚಿತ್ರ ಮೂಲನ ಕೋಟೆ ಸಂಸ್ಕೃತಿಯ ಬಂಧನದ ಸಂಕೇತ. 'ಮೋಸ ಮಾಡದಿದ್ರೆ ಈ ಜೀವನದಲ್ಲಿ ಗೆಲ್ಲಲಿಕ್ಕೆ ಆಗತ್ಯೆ? ಉದ್ದಕ್ಕೂ ಮೋಸ.

ಹೀಗೆ ಕಾದಂಬರಿಯ ಉದ್ದಕ್ಕೂ ಹಲವು ಬಗೆಯ ಸಂಕೇತಗಳು, ಪ್ರತೀಕಗಳು ಪ್ರತಿಮೆಗಳು ಬಳಕೆಗೊಂಡು ಪಾತ್ರಗಳ ವ್ಯಕ್ತಿತ್ವ ವಿಕಾಸವನ್ನು, ಪರಾಧೀನತೆಯ ಬಂಧನವನ್ನು ಗಮನಿಸುತ್ತಾ ಹೋಗಬಹುದು. ಇದು ನಿಸರ್ಗ ಸಂಬಂಧಿಯಾಗಿ ಕಾದಂಬರಿಗಳ ಮೆರಗನ್ನು ಹೆಚ್ಚಿಸುತ್ತಿದೆ.

ಆಡುಭಾಷೆ ಮತ್ತು ಶಿಷ್ಟೇತರ ಭಾಷೆಗಳು ಕಲಾತ್ಮಕತೆ ಎಂಬಂತೆ ಹೊರ ಬೀಳುತ್ತದೆ. ಲೇಖಕಿ ಮತ್ತು ಲೇಖಕರು ವೇಶ್ಯೆಯ ಒಂದು ಅಧ್ಯಾಯ ಗ್ರಾಮ್ಯದಿಂದ ಬಳಕೆಗೊಂಡಿದ್ದರೆ ಮತ್ತೊಂದು ಅಧ್ಯಾಯ ಆಡುಭಾಷೆಯಿಂದ ಬಳಕೆಗೊಂಡಿದೆ. ಸಾಮಾಜಿಕ ಉಪ ಭಾಷೆ ಕಥಾ ಹಂದರಕ್ಕೆ ಅದ್ಭುತ ಜೀವಂತಿಕೆಯನ್ನು ಆಳವಾದ ಜೀವನಾನುಭವಗಳನ್ನು ವ್ಯಕ್ತಪಡಿಸುವಲ್ಲಿ ಸಾರ್ಥಕ್ಯವನ್ನು ಪಡೆದುಕೊಂಡಿದೆ. ಗ್ರಾಮೀಣ ಪ್ರದೇಶದ ಸಂಸ್ಕೃತಿಯ ಅವಿಭಾಜ್ಯ ಅಂಗವಾದ ಗ್ರಾಮ್ಯಭಾಷೆ ಆಡು ಭಾಷೆಗಿಂತ ಎಷ್ಟು ಶಕ್ತಿ ಪೂರ್ಣವಾಗಿ ಬಳಕೆಯಾಗಿದೆ ಎನ್ನುವುದಕ್ಕೆ

ಸಂಭಾಷಣೆಗಳ ಮೂಲಕ ವ್ಯತ್ಯಾಸಗಳನ್ನು ಕಾಣಬಹುದು.

ಒಟ್ಟಾರೆಯಾಗಿ ಈ ಮೇಲಿನ ಎಲ್ಲಾ ಸಂಭಾಷಣೆಗಳು ಭಿನ್ನ ಭಾಷಾ ರೂಪವನ್ನು ಪಡೆದು ಕ್ರಿಯೆಯಲ್ಲಿ ಮೇಳೈಸಿಕೊಂಡಿದೆ. ಹಾಗೂ ಭಾಷಾಲಹರಿಯ ನಿಯೋಜನೆ ಕೃತಿಯ ಅಂತಃಸತ್ವವನ್ನು ಸಮಗ್ರತೆಯಲ್ಲಿ ಪ್ರತಿಬಿಂಬಿಸಲು ನೆರವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ಅಧ್ಯಾಯ-೬

ಸಮಾರೋಪ

ಹೊಸಗನ್ನಡ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಆದ ವಿಶಿಷ್ಟ ಬರವಣಿಗೆಯ ಮೂಲಕ ನವೋದಯ, ಪ್ರಗತಿಶೀಲ, ನವ್ಯ ಮತ್ತು ದಲಿತ ಬಂಡಾಯ ಹೀಗೆ ಎಲ್ಲಾ ಕಾಲಘಟ್ಟಗಳಲ್ಲೂ ಸಾಹಿತ್ಯ ಸಂಚಲನವನ್ನು ಉಂಟುಮಾಡಿದ 'ಎಂ.ಕೆ. ಇಂದಿರಾ' ಮತ್ತು 'ವಿ.ಎಂ. ಇನಾಂದಾರ್'ರವರು ಮಹತ್ವದ ಸ್ಥಾನವನ್ನು ಪಡೆದುಕೊಂಡಿದ್ದಾರೆ.

ಪ್ರಸ್ತುತ 'ಗೆಜ್ಜೆಪೂಜೆ' ಮತ್ತು 'ಶಾಪ' ಕಾದಂಬರಿಗಳಲ್ಲಿ ಬ್ರಾಹ್ಮಣ ಮತ್ತು ವೇಶ್ಯೆ ಕುಲಕ್ಕೆ ಸಂಬಂಧಪಟ್ಟ ಜೀವನಾನುಭವಗಳನ್ನು ತಮ್ಮ ವಿಭಿನ್ನ ಬರವಣಿಗೆಯ ಶೈಲಿಯೊಂದಿಗೆ ನಿರೂಪಿಸಿರುವುದು ಕಣ್ಣಿಗೆ ಕಟ್ಟುವಂತಿದೆ. ಆಡು ಭಾಷೆ ಮತ್ತು ಸಾಮಾನ್ಯ ಭಾಷೆಯ ಪ್ರಯೋಗಶೀಲಗುಣ ಮತ್ತು ಅನುಭವಸಾಂದ್ರತೆಗಳು ಕಾದಂಬರಿಗೆ ಕಿಂಚಿತ್ತೂ ಕೂಡ ಕುಂದು ಬರದ ಹಾಗೆ ಹಾಸುಹೊಕ್ಕಾಗಿದೆ. 'ಗೆಜ್ಜೆಪೂಜೆ' ಮತ್ತು 'ಶಾಪ' ಕಾದಂಬರಿಗಳಲ್ಲಿ ಪರಂಪರೆಯಿಂದ ಬಂದ ಅನೈತಿಕ ಸಂಬಂಧ ಮತ್ತು ಚಟುವಟಿಕೆಗಳ, ಸಮಾಜದಲ್ಲಿ ಭ್ರಷ್ಟ ವ್ಯವಸ್ಥೆಯ ಹಲವಾರು ಮುಖವಾಡಗಳನ್ನು ತೆರೆದಿಡುತ್ತಾರೆ. ಅಲ್ಲದೆ ಅಲ್ಲಿನ ಆಗುಹೋಗುಗಳ ಘಟನೆಗಳು ವಾಸ್ತವಕ್ಕೆ ಕನ್ನಡಿ ಹಿಡಿದಂತಿದೆ.

ಶತಶತಮಾನಗಳಿಂದ ಇವತ್ತಿನ ಇಪ್ಪತ್ತೊಂದನೆಯ ಶತಮಾನ ದವರೆಗೂ ಬ್ರಾಹ್ಮಣರ ಮಡಿವಂತಿಕೆ ವ್ಯವಸ್ಥೆಯಲ್ಲಿ ಧಮನಕ್ಕೆ ಒಳಗಾದಂತ ವೇಶ್ಯೆಯರ ಬದುಕಿಗೆ ನಿರ್ದಿಷ್ಟ ನೆಲೆಯಲ್ಲದೆ ಅತಂತ್ರಸ್ಥಿತಿಗೆ, ದುರಂತಕ್ಕೆ ಈಡಾಗಿದ್ದಾರೆ. ಸಮಾಜದಲ್ಲಿ ವೇಶ್ಯೆಯ ಕುಲಕ್ಕೆ ಜಾತೀಯ ಆಧಾರಿತವಾಗಿ, ಲಿಂಗಾಧಾರಿತವಾಗಿ ಹಾಗೂ ಆರ್ಥಿಕವಾಗಿ ಶೋಷಣೆಗೆ ದಬ್ಬಾಳಿಕೆಗೆ ಒಳಗಾಗುತ್ತಿರುವುದು ಸರ್ವೇಸಾಮಾನ್ಯ ಸಹಜವೆಂಬಂತೆ ಕಾದಂಬರಿಗಳಲ್ಲಿ ಮೂಡಿಬಂದಿದೆ. ಮಾನವ ಸಂಬಂಧಗಳಲ್ಲಿ ಸಂಘರ್ಷಗಳು ಒಂದಲ್ಲ ಒಂದು ಕಾರಣಕ್ಕೆ ಏರ್ಪಡುವುದನ್ನು

ಸಾಮಾಜಿಕ ಆಯಾಮಗಳ ಭಿನ್ನ ಸ್ವರೂಪವನ್ನು 'ಗೆಜ್ಜೆಪೂಜೆ' ಮತ್ತು 'ಶಾಪ' ಕಾದಂಬರಿಗಳಲ್ಲಿ ಹಿಡಿದಿಟಿದ್ದಾರೆ.

ನೈತಿಕತೆ ಮತ್ತು ಅನೈತಿಕತೆಯ ಆಶಯಗಳನ್ನು ಒಳಗೊಂಡ 'ಗೆಜ್ಜೆಪೂಜೆ' ಮತ್ತು 'ಶಾಪ' ಕಾದಂಬರಿಗಳಲ್ಲಿ ವೇಶ್ಯೆಯ ಜೀವನದ ಅದ್ಭುತ ವಿಸ್ತಾರವನ್ನು, ದುರಂತ ಮತ್ತು ಶೋಷಿತ ಘಟನೆಗಳನ್ನು ವಿವರಿಸುತ್ತಾ, ವರ್ಗ-ವರ್ಣಗಳ, ಪಾಪ-ಪುಣ್ಯ, ನೀತಿ-ಅನೀತಿ, ತಪ್ಪು ಮತ್ತು ಒಪ್ಪಿಗಳಿಗಿಂತಲೂ ಮಾನವೀಯ ನೆಲೆಯನ್ನು ಪ್ರತಿಪಾದಿಸುವಲ್ಲಿ ಮುಂದಾಗುತ್ತಾರೆ. ಎಷ್ಟೋ ಸಂದರ್ಭಗಳಲ್ಲಿ ಲೈಂಗಿಕತೆ ಮತ್ತು ಅನೈತಿಕ ಸಂಬಂಧದಲ್ಲಿ ಸಿಲುಕಿ ಪಾತ್ರಗಳು ಪ್ರತಿಭಟಿಸಲಾಗದೆ ಮೌನವಾಗಿ ಎಲ್ಲವನ್ನೂ ಸಹಿಸುವ ಹಾಗೆ ಮಾಡುತ್ತವೆ. ಆದರೂ ನೇರವಾಗಿ ಅಲ್ಲದಿದ್ದರೂ, ಪರೋಕ್ಷವಾಗಿಯಾದರೂ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸುವ ಪ್ರಯತ್ನವಂತೂ ನಿಂತಿಲ್ಲ. ಇವುಗಳ ನಿದರ್ಶನದೊಂದಿಗೆ ಸಾಂಕೇತಿಕ ತಂತ್ರಗಳನ್ನು ಬಳಸಿ ಮಾನವನ ಸ್ವಭಾವಗಳನ್ನು ಅನ್ವಯಿಸಿ, ಈ ಕಾದಂಬರಿಗಳಲ್ಲಿ ಸಾಮಾಜಿಕ ಆಯಾಮವನ್ನು ಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ಈ ಸಂಕೇತಗಳಲ್ಲಿ ವೇಶ್ಯೆಯರ ಸಂಘರ್ಷದ, ಹೋರಾಟದ ದನಿಯಿದೆ. ಇದರ ನಡುವೆಯೂ ಅಲ್ಲಲ್ಲಿ ಚಂದ್ರ-ಸರೋಜ, ಅಪರ್ಣಾ-ರಂಗಸಾನಿ, ಸೋಮು-ಮಾಧವ, ಚಂದ್ರಶೇಖರಯ್ಯ-ಗೌಡ ನಂತವರಲ್ಲಿ ಪ್ರೀತಿ, ತ್ಯಾಗ, ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಳ್ಳುವ ಜೀವಂತಿಕೆಯು ಅಡಗಿದೆ.

ಒಟ್ಟಾರೆಯಾಗಿ ಕಾದಂಬರಿಗಳಲ್ಲಿ ವೇಶ್ಯೆಯ ಸಂಬಂಧಗಳು ಅನಿವಾರ್ಯಕ್ಕೂ, ಅಸಹಾಯಕತೆಗೆ ಹುಟ್ಟಿಕೊಳ್ಳುವರು ಒಂದೆಡೆಯಾದರೆ, ಕ್ಷಣಿಕ ಸುಖದ ಲೈಂಗಿಕಾಸಕ್ತರಾಗಿ ಮನಸ್ಸಿಗೆ ಲಗಾಮು ಹಾಕದೇ ಮೃಗೀಯರಾಗಿ ವರ್ತಿಸುವವರು ಒಂದು ಕಡೆ. ಏನೇ ಆದರೂ ಇದು ಈ ಇಡೀ ಸೂಳೆಯರ ಬದುಕಿನ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಉಂಟು ಮಾಡುವುದು ಕೇವಲ ಕಾದಂಬರಿಯ ಕಥೆ ಅಷ್ಟೇ ಅಲ್ಲದೆ, ನಮ್ಮ ಪರಂಪರೆಯಿಂದ ಬಂದ, ಇಂದಿಗೂ ನಮ್ಮ ಗ್ರಾಮ ಭಾರತದ ಕಥೆ ಇದನ್ನೇ ಸಾರುತ್ತದೆ. ಇಲ್ಲಿ ನಡೆಯುತ್ತಿರುವ ಅನಾಹುತಗಳು, ಅತ್ಯಾಚಾರ, ವ್ಯಭಿಚಾರ, ಗಾಬರಿಯನ್ನು ಹುಟ್ಟಿಸುವಂತಿದೆ. ಭ್ರಷ್ಟ ಮುಕ್ತ ಭಾರತವನ್ನು ಕಟ್ಟಬೇಕಾಗಿರುವ ಗ್ರಾಮಭಾರತ ಕಟ್ಟಿಕೊಳ್ಳುವುದಕ್ಕೆ ಆಗದೇ ಭ್ರಷ್ಟಾಚಾರಕ್ಕೀಡಾಗಿದೆ.

ಚಾರಿತ್ರಿಕವಾದ ಸಾಮಾಜಿಕ ಧೋರಣೆಗಳು ಸೂಕ್ತವಾಗಿ ಕಾದಂಬರಿಗಳಲ್ಲಿ ಬೆಂಗಾವಲಾಗಿ ಕೆಲಸ ಮಾಡುತ್ತದೆ ಎಂಬುವುದಕ್ಕೆ ಮೂಕ ಪ್ರತಿಭಟನೆಗಳು ನಿದರ್ಶನಗಳಾಗಿವೆ. ಆದರೆ ಇಲ್ಲಿನ ಘಟನೆಗಳ ಪರಿಣಾಮ ಮತ್ತು ಅನಾಹುತಗಳು ಇಂದಿನ ಭಾರತೀಯ ವ್ಯವಸ್ಥೆಯ ಸ್ಥಿತಿಗತಿಗೆ ಪ್ರತಿರೂಪವೆಂಬಂತಿದೆ. ವೇಶ್ಯೆಯಲ್ಲಿ ಹುಟ್ಟಿದ ಹೆಣ್ಣುಮಕ್ಕಳು ಪ್ರತಿಭಟನೆ ಪಾತ್ರಗಳ ಮೂಲಕ ಕ್ರಿಯಾತ್ಮಕವಾಗಿ ಕಾಣಿಸಿಕೊಳ್ಳದೆ ಸಾಂಕೇತಿಕವಾಗಿ ಹಿಡಿದಿಟ್ಟಿದ್ದಾರೆ. ಇದರ ಹಿಂದಿನ ಸ್ವರೂಪ ಉದ್ದೇಶವಿಷ್ಟೆ ಆರೋಗ್ಯಕರ ಸಮಾಜದ ನಿರ್ಮಾಣವಾಗಿದೆ.

ಗ್ರಂಥ ಸೂಚಿ

೧) ಚದುರಂಗರ ಸಮಗ್ರ ಕಾದಂಬರಿಗಳು – **ಚದುರಂಗ**
ಪ್ರಕಾಶಕರು – ಅಭಿರುಚಿ ಪ್ರಕಾಶನ
ಮೈಸೂರು-೯, ಮುದ್ರಣ – ೨೦೦೪

೨) ವೈಶಾಖ ವೈವಿಧ್ಯ – **ಡಾ॥ ಬಸವರಾಜ ಸಬರದ**
ಪ್ರಕಾಶಕರು – ವೈದ್ಯಾವಾರ್ತಾ ಪ್ರಕಾಶನ
ಮೈಸೂರು – ೫೭೦ ೦೦೮, ಮುದ್ರಣ-೧೯೯೫

೩) ಚದುರಂಗ – **ಡಾ. ಎಂ.ಎಸ್. ವೇದ**
ಪ್ರಕಾಶಕರು – ನವಕರ್ನಾಟಕ ಪಬ್ಲಿಕೇಶನ್ಸ್
ಬೆಂಗಳೂರು-೫೬೦ ೦೦೧,
ಮುದ್ರಣ-೨೦೧೧

೪) ನಾರಿ ದಾರಿ ದಿಗಂತ : – **ವಿಜಯಾದಬ್ಬೆ**
ಪ್ರಕಾಶಕರು – ರಚನಾ ಪ್ರಕಾಶನ
ಮೈಸೂರು-೫೬೦ ೦೦೭
ಮುದ್ರಣ-೧೯೯೭

೫) ಕನ್ನಡ ಕಾದಂಬರಿಗಳಲ್ಲಿ ವರ್ಣ [illegible] – **ಆರ್.ವಿ.ಭಂಡಾರಿ**
ಪ್ರಕಾಶಕರು – ರಾಘವೇಂದ್ರ ಪ್ರಕಾಶನ
ಅಂಕೋಲ-೫೮೧ ೩೧೪.
ಮುದ್ರಣ-೨೦೦೩

೬) ಅಮೃತ ಮತ್ತು ಗರುಡ – **ಡಿ.ಆರ್. ನಾಗರಾಜ**
ಪ್ರಕಾಶಕರು – ಕನ್ನಡ ಮತ್ತು ಸಂಸ್ಕೃತಿ
ನಿರ್ದೇಶನಾಲಯ
ಬೆಂಗಳೂರು, ಮುದ್ರಣ-೧೯೯೦

೭) ಸಮ್ಮುಖಿ – ಕೆ.ನರಸಿಂಹಮೂರ್ತಿ
ಪ್ರಕಾಶಕರು – ವಸಂತ ಪ್ರಕಾಶನ,
ಬೆಂಗಳೂರು, ಮುದ್ರಣ–೨೦೦೨

೮) ವಿಮರ್ಶೆಯ ಪರಿಭಾಷೆ – ಓ.ಎಲ್.ನಾಗಭೂಷಣ
ಪ್ರಕಾಶಕರು – ಪರಿಸರ ಪ್ರಕಾಶನ
ಶಿವಮೊಗ್ಗ, ಮುದ್ರಣ–೧೯೮೫

೯) ಎದೆಗೆ ಬಿದ್ದ ಅಕ್ಷರ – ದೇವನೂರು ಮಹಾದೇವ
ಪ್ರಕಾಶಕರು – ಅಭಿನವ ಪ್ರಕಾಶನ
ಬೆಂಗಳೂರು–೪೦, ಮುದ್ರಣ–೨೦೧೩

೧೦) ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ – ಚಿ.ಸಿ. ನಿಂಗಣ್ಣ
ಪ್ರಕಾಶಕರು – ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ
ಗುಲ್ಬರ್ಗಾ–೫೮೫ ೧೦೧, ಮುದ್ರಣ–೨೦೦೫

೧೧) ವೇಣುಗೋಪಾಲ ಸರೊಬ ಅವರ ಆಯ್ದ ಲೇಖನಗಳು – ಮಲ್ಲೇಪುರಂ ಜಿ.ವೆಂಕಟೇಶ್
ಪ್ರಕಾಶಕರು – ಕನ್ನಡ ಮತ್ತು ಸಂಸ್ಕೃತಿ
ನಿರ್ದೇಶನಾಲಯ, ಮುದ್ರಣ–೧೯೯೫.

೧೨) ಬಯಲು ರೂಪ – ಸಿ.ಎನ್. ರಾಮಚಂದ್ರನ್,
ಸ್ವಪ್ನ ಬುಕ್ ಹೌಸ್,
ಬೆಂಗಳೂರು–೫೬೦ ೦೦೯, ಮುದ್ರಣ–೨೦೦೬

೧೩) ಮಹಿಳೆ ಸಾಹಿತ್ಯ ಸಮಾಜ – ವಿಜಯಾ ದಬ್ಬೆ,
ಪ್ರಕಾಶಕರು – ರಚನಾ ಪ್ರಕಾಶನ
ಮೈಸೂರು, ಮುದ್ರಣ–೧೯೮೯.

೧೪) ಸಾಹಿತ್ಯ ವಿಮರ್ಶೆ – ಡಾ॥ ಸಿ.ಎನ್. ರಾಮಚಂದ್ರನ್,
ಪ್ರಕಾಶಕರು – ಕರ್ನಾಟಕ ಸಾಹಿತ್ಯ ಅಕಾಡೆಮಿ,
ಬೆಂಗಳೂರು, ಮುದ್ರಣ–೧೯೮೯.

೧೫) ತಾಪದಿಂದ ತಂಪಿಗೆ – ಎಂ.ಕೆ. ಇಂದಿರಾ
ಪ್ರಕಾಶಕರು – ಪುಸ್ತಕ ವ್ಯಾಪಾರಿಗಳು
ಬೆಂಗಳೂರು – ೫೬೦ ೦೦೪.
ಮುದ್ರಣ–೨೦೦೪

೧೬) ನೂರೊಂದು ನೆನಪು ಮನದಾಳದಿಂದ – ಎಂ.ಕೆ. ಇಂದಿರಾ
ಪ್ರಕಾಶಕರು : ಶ್ರೀ ರೇಣುಕಾ ಪ್ರಕಾಶನ
ಬೆಂಗಳೂರು – ೫೬೦ ೦೦೩
ಮುದ್ರಣ–೨೦೦೯

೧೭) ಉಕ್ಕಿದ ನೊರೆ – **ಡಾ॥ ಕೆ. ಶಿವರಾಮ ಕಾರಂತ**
ಪ್ರಕಾಶಕರು : ಸಪ್ನ ಬುಕ್ ಹೌಸ್
ಬೆಂಗಳೂರು–೫೬೦೦೦೯
ಮುದ್ರಣ–೨೦೧೨

೧೮) ಇಳೆಯೆಂಬ – **ಡಾ॥ ಕೆ. ಶಶಿ**
ಪ್ರಕಾಶಕರು : ಸಪ್ನ ಬುಕ್ ಹೌಸ್
ಗಳೂರು–೫೬೦೦೦೯
ಮುದ್ರಣ–೨೦೧೨

೧೯) ಅದೇ ಊರು, ಅದೇ ಮರ – **ಡಾ॥ ಕೆ. ಶಿವರಾಮ ಕಾರಂತ**
ಪ್ರಕಾಶಕರು : ಸಪ್ನ ಬುಕ್ ಹೌಸ್
ಬೆಂಗಳೂರು–೫೬೦ ೦೦೯
ಮುದ್ರಣ–೨೦೦೧

೨೦) ಅಂಟಿದ ಅಪರಂಜಿ – **ಡಾ॥ ಕೆ. ಶಿವರಾಮ ಕಾರಂತ**
ಪ್ರಕಾಶಕರು : ಸಪ್ನ ಬುಕ್ ಹೌಸ್
ಬೆಂಗಳೂರು–೫೬೦ ೦೦೯
ಮುದ್ರಣ–೨೦೧೨

೨೧) ಜಾರುವ ನಾರಿಯಲ್ಲಿ : **ಡಾ॥ ಕೆ. ಶಿವರಾಮ ಕಾರಂತ**
ಪ್ರಕಾಶಕರು : ಸಪ್ನ ಬುಕ್ ಹೌಸ್
ಬೆಂಗಳೂರು–೫೬೦ ೦೦೯
ಮುದ್ರಣ–೨೦೧೨

೨೨) ನಾವು ಕಟ್ಟಿದ ಸ್ವರ್ಗ : ಡಾ॥ ಕೆ. ಶಿವರಾಮ ಕಾರಂತ
ಪ್ರಕಾಶಕರು : ಎಸ್.ಬಿ.ಎಸ್. ಪಬ್ಲಿಷರ್ಸ್ ಅಂಡ್
ಬೆಂಗಳೂರು-೫೬೦ ೦೨೦
ಮುದ್ರಣ-೨೦೦೧

೨೩) ಬಾಳೊಂದು ಭಾವಗೀತೆ : **ಎಸ್.ಡಿ. ಕುಮಾರ್**
ಪ್ರಕಾಶಕರು : ಪ್ರತಿಭಾ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್
ಬೆಂಗಳೂರು-೫೬೦ ೦೧೯
ಮುದ್ರಣ-೨೦೦೮

೨೪) ಮರೆವು : **ಉಷಾ ನವರತ್ನರಾಮ್**
ಪ್ರಕಾಶಕರು : ಓಂಶಕ್ತಿ ಪ್ರಕಾಶನ
ಬೆಂಗಳೂರು-೫೬೦ ೦೧೦
ಮುದ್ರಣ-೨೦೦೮

೨೫) ನಿನ್ನೊಲುಮೆ ನನಗಿರಲಿ : **ಉಷಾ ನವರತ್ನರಾಮ್**
ಪ್ರಕಾಶಕರು : ಓಂಶಕ್ತಿ ಪ್ರಕಾಶನ
ಬೆಂಗಳೂರು-೫೬೦ ೦೧೦
ಮುದ್ರಣ-೨೦೦೮

೨೬) ಬೆಳ್ಳಿತೆರೆ : **ಉಷಾ ನವರತ್ನರಾಮ್**
ಪ್ರಕಾಶಕರು : ಇಂದಿರಾ ಪ್ರಕಾಶನ
ಬೆಂಗಳೂರು-೫೬೦ ೦೧೦
ಮುದ್ರಣ-೨೦೦೭

೨೭) ಹಕ್ಕಿ ಹಾರುತಿದೆ : **ಉಷಾ ನವರತ್ನರಾಮ್**
ಪ್ರಕಾಶಕರು : ಓಂಶಕ್ತಿ ಪ್ರಕಾಶನ
ಬೆಂಗಳೂರು-೫೬೦ ೦೧೦
ಮುದ್ರಣ-೨೦೦೮

೨೮) ಅಭಿನಯ : **ಉಷಾ ನವರತ್ನರಾಮ್**
ಪ್ರಕಾಶಕರು : ಓಂಶಕ್ತಿ ಪ್ರಕಾಶನ
ಬೆಂಗಳೂರು-೫೬೦ ೦೧೦
ಮುದ್ರಣ-೨೦೦೮

೨೯) ಬಂಧನ : **ಉಷಾ ನವರತ್ನರಾಮ್**
ಪ್ರಕಾಶಕರು : ಇಂದಿರಾ ಪ್ರಕಾಶನ
ಬೆಂಗಳೂರು-೫೬೦ ೦೧೦
ಮುದ್ರಣ-೨೦೦೭

೩೦) ತೆರೆ ಮತ್ತು ಗೌರಿಶಂಕರದ ತಪ್ಪಲಿನಲ್ಲಿ : ಉಷಾ ಪ್ರಸಾದ್
ಪ್ರಕಾಶಕರು : ಶ್ರೀ ಲಕ್ಷ್ಮೀವೆಂಕಟೇಶ್ವರ ಪ್ರಕಾಶನ
ಬೆಂಗಳೂರು-೫೬೦ ೦೨೨
ಮುದ್ರಣ-೨೦೦೮

೩೧) ಕನ್ನಡ ಕಾವ್ಯ ಪರಂಪರೆಯಲ್ಲಿ ಪ್ರೀತಿಯ ನೆಲೆಗಳು : **ಡಾ॥ ವಿಜಯಾ ಸುಬ್ಬರಾಜ್**
ಪ್ರಕಾಶಕರು : ಎಲ್.ಎನ್.ಜಿ. ಪಬ್ಲಿಕೇಷನ್ಸ್
ಬೆಂಗಳೂರು-೫೬೦ ೦೦೩
ಮುದ್ರಣ-೨೦೦೭

೩೨) ಕಂಕಣ (ಸಾಮಾಜಿಕ ಕಾದಂಬರಿ) : **ತ್ರಿವೇಣಿ**
ಪ್ರಕಾಶಕರು : ತ್ರಿವೇಣಿ ಎಂಟರ್‌ಪ್ರೈಸಸ್
ಮೈಸೂರು-೫೭೦ ೦೦೫
ಮುದ್ರಣ-೨೦೦೨

೩೩) ಕುಂತಿ : **ದೇವಕಿ ಮೂರ್ತಿ**
ಪ್ರಕಾಶಕರು : ಕಾವ್ಯಾಲಯ
ಮೈಸೂರು - ೫೭೦೦೧೪
ಮುದ್ರಣ-೨೦೦೭

೩೪) ಅನಾವರಣ (ಕಾದಂಬರಿ) : **ದಯಾನಂದ ತೋರ್ಕೆ**
ಪ್ರಕಾಶಕರು : ಶ್ರೀನಿವಾಸ ಪುಸ್ತಕ ಪ್ರಕಾಶನ
ಬೆಂಗಳೂರು - ೫೬೦ ೦೦೪
ಮುದ್ರಣ-೨೦೦೮

೩೫) ಅಂತರಂಗ – ಮನೋವೈಜ್ಞಾನಿಕ ಕಾದಂಬರಿ : ದೇವುಡು
ಪ್ರಕಾಶಕರು : ಸುಧಾ ಎಂಟರ್‌ಪ್ರೈಸಸ್
ಬೆಂಗಳೂರು – ೫೬೦ ೦೩೪
ಮುದ್ರಣ–೨೦೦೯

೩೬) ಪರಿಮಳದ ಉರುಳು ಸಾಮಾಜಿಕ ಕಾದಂಬರಿ : ತ.ರಾ.ಸು
ಪ್ರಕಾಶಕರು : ಓಂ ಶಕ್ತಿ ಪ್ರಕಾಶನ
ಬೆಂಗಳೂರು – ೫೬೦ ೦೧೦
ಮುದ್ರಣ–೨೦೦೮

೩೭) ಸ್ವೀಕೃತಿ : ಈಚನೂರು ಶಾಂತ
ಪ್ರಕಾಶಕರು : ಬೃಂದಾವನ ಪ್ರಕಾಶನ
ಬೆಂಗಳೂರು – ೫೬೦ ೦೧೯
ಮುದ್ರಣ–೨೦೧೦

೩೮) ಜೀವನ ರಾಗ : ಈಚನೂರು ಶಾಂತ
ಪ್ರಕಾಶಕರು : ಪೃಥ್ವಿ ಪ್ರಕಾಶನ
ಬೆಂಗಳೂರು – ೫೬೦ ೦೨೮
ಮುದ್ರಣ–೨೦೧೦

೩೯) ಕತೆಗಾರ : ಎಂ.ಕೆ. ಇಂದಿರಾ
ಪ್ರಕಾಶಕರು : ಇಂದಿರಾ ಪ್ರಕಾಶನ
ಬೆಂಗಳೂರು – ೫೬೦ ೦೧೦
ಮುದ್ರಣ–೨೦೦೮

೪೦) ಜಾತಿ ಕೆಟ್ಟವಳು : ಎಂ.ಕೆ. ಇಂದಿರಾ
ಪ್ರಕಾಶಕರು : ಇಂದಿರಾ ಪ್ರಕಾಶನ
ಬೆಂಗಳೂರು – ೫೬೦ ೦೧೦
ಮುದ್ರಣ–೨೦೦೪

೪೧) ಮನೋಮಂದಿರ : ಎಂ.ಕೆ. ಇಂದಿರಾ
ಪ್ರಕಾಶಕರು : ಇಂದಿರಾ ಪ್ರಕಾಶನ
ಬೆಂಗಳೂರು – ೫೬೦ ೦೧೧
ಮುದ್ರಣ–೨೦೦೩

೪೨) ಹೆಣ್ಣಿನ ಆಕಾಂಕ್ಷೆ : ಎಂ.ಕೆ. ಇಂದಿರಾ
ಪ್ರಕಾಶಕರು : ಇಂದಿರಾ ಪ್ರಕಾಶನ
ಬೆಂಗಳೂರು – ೫೬೦ ೦೧೧
ಮುದ್ರಣ–೨೦೦೮

೪೩) ಅಂಬರದ ಅಪ್ಸರೆ : ಎಂ.ಕೆ. ಇಂದಿರಾ
ಪ್ರಕಾಶಕರು : ಇಂದಿರಾ ಪ್ರಕಾಶನ
ಬೆಂಗಳೂರು – ೫೬೦ ೦೧೧
ಮುದ್ರಣ–೨೦೦೪

೪೪) ಮನ ತುಂಬಿದ ಮಡದಿ : ಎಂ.ಕೆ. ಇಂದಿರಾ
ಪ್ರಕಾಶಕರು : ಸುಧಾ ಶಿಶು ಸಾಹಿತ್ಯಮಾಲೆ
ಬೆಂಗಳೂರು – ೫೬೦ ೦೫೩
ಮುದ್ರಣ–೨೦೦೯

೪೫) ನವಜೀವನ : ಎಂ.ಕೆ. ಇಂದಿರಾ
ಪ್ರಕಾಶಕರು : ಇಂದಿರಾ ಪ್ರಕಾಶನ
ಬೆಂಗಳೂರು – ೫೬೦ ೦೧೧
ಮುದ್ರಣ–೨೦೦೧